ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 12 ಭಾನುವಾರ 2023

ಸಂಪುಟ: 43 | ಸಂಚಿಕೆ: 322 | ಪುಟಗಳು: 12

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಧ್ರುವನಾರಾಯಣರ ಹೆಸರೇಳಿ ನನ್ನ ಮನೆ ವಿಳಾಸ ನೀಡುತ್ತಿದ್ದೆ!

ಮೈಸೂರು, ಮಾ.11–ಬೇರೆ ಪಕ್ಷದಲ್ಲಿದ್ದರೂ ತನಗೆ ರಾಜಕೀಯ ಪಾಠ ಕಲಿಸಿದ ಹಿರಿಯರಾದ ಧ್ರುವನಾರಾಯಣ ಅವರಿಗೆ ಅಂತಿಮ ನಮನ ಸಲ್ಲಿಸುವ ವೇಳೆ ಸಂಸದ ಪ್ರತಾಪ್ ಸಿಂಹ ಕಣ್ಣೀರಾದರು. ಅತೀವ ದುಃಖದಿಂದ ಮಾತು ಮುಂದುವರೆಸಲಾಗದೇ ಗದ್ಗದಿತರಾದರು.



ತಮ್ಮ ನಿವಾಸದ ಪಕ್ಕದ ರಸ್ತೆಯಲ್ಲೇ ವಾಸವಿದ್ದ ಧ್ರುವನಾರಾಯಣರ ನಿಧನದ ಸುದ್ದಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಆಗಮಿಸಿದ ಪ್ರತಾಪ್ ಸಿಂಹ, ಹಿರಿಯ ನಾಯಕನಿಗೆ ಅಶ್ರುತರ್ಪಣ ಸಲ್ಲಿಸಿದರು. ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 2014ರಲ್ಲಿ ತಾನು ಪ್ರಥಮ ಬಾರಿಗೆ ಸಂಸದನಾಗಿ ಆಯ್ಕೆಯಾದಾಗ ನನಗೇನೂ ಗೊತ್ತಿರಲಿಲ್ಲ. ಬೇರೆ ಪಕ್ಷದವನಾಗಿದ್ದರೂ, ನನಗೆ ಎಲ್ಲವನ್ನೂ ಕಲಿಸಿಕೊಟ್ಟವರು ಧ್ರುವನಾರಾಯಣ್ ಎಂದು ಪ್ರತಾಪ್ ಸಿಂಹ ಹೇಳಿದರು.

ದಿಶಾ ಸಭೆಗಳಲ್ಲಿ ಪ್ರಗತಿ ಪರಿಶೀಲನೆ ಹೇಗೆ ಮಾಡಬೇಕು ಎಂಬುದನ್ನು ನನಗೆ ಹೇಳಿಕೊಟ್ಟವರೇ ಅವರು. ಮೀಟಿಂಗ್‌ಗಳನ್ನು ಹೇಗೆ ನಡೆಸಬೇಕು, ಯಾವ ಕೆಲಸಕ್ಕೆ ಯಾವ ಅಧಿಕಾರಿ ಜೊತೆ ಮಾತನಾಡಬೇಕು, ಫೈಲ್‌ಗಳನ್ನು ಹೇಗೆ ಮೂವ್ ಮಾಡಬೇಕು ಎಂಬುದನ್ನೆಲ್ಲಾ ನನಗೆ ಹೇಳಿಕೊಟ್ಟರು. ನಾನು ಬಹಳವಾಗಿ ಗೌರವಿಸುವ ಹಿರಿಯ ರಾಜಕಾರಣಿ ಧ್ರುವನಾರಾಯಣ್. ಅತ್ಯಂತ ಹಿಂದುಳಿದಿದ್ದ ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿ ಹರಿಕಾರರು ಅವರಿದ್ದರು. ಎನ್‌ಡಿಎ ಸರ್ಕಾರ ವಿದ್ದಾಗಲೂ ಎಲ್ಲಾ ಸಚಿವ ರೊಂದಿಗೂ ಸೌಹಾರ್ದಯುತ ಭಾಂದವ್ಯವಿಟ್ಟುಕೊಂಡು ಹಿಂದುಳಿದ ಜಿಲ್ಲೆಗೆ ಅಪಾರ ಪ್ರಮಾಣದ ಅನುದಾನ ತಂದು ಅಭಿವೃದ್ಧಿಪಡಿಸಿದರು. ಚಾಮರಾಜನಗರ ಅಭಿವೃದ್ಧಿಯಾಗಿದೆ ಎಂದರೆ ಅದಕ್ಕೆ ಧ್ರುವನಾರಾಯಣ್ ಕಾರಣ. ಎಲ್ಲಾ ವರ್ಗದ ಜನರ ಪ್ರೀತಿ–ವಿಶ್ವಾಸವನ್ನು ಅವರು ಗಳಿಸಿದ್ದರು. ಯಾರಾದರೂ ನನ್ನ ಮನೆ ವಿಳಾಸ ಕೇಳಿದರೆ, ಧ್ರುವನಾರಾಯಣ್ ಅವರ ಮನೆಯ ಪಕ್ಕದ ರಸ್ತೆಯಲ್ಲಿ ನನ್ನ ಮನೆ ಎಂದು ಹೇಳುತ್ತಿದ್ದೆ. ಅಂದರೆ ಅವರು ಅಷ್ಟು ಪಾಪ್ಯುಲರ್ ನಾಯಕರಾಗಿದ್ದರು. ಅವರ ಅಗಲಿಕೆಯಿಂದ ಹಳೇ ಮೈಸೂರು ಭಾಗಕ್ಕೆ ದೊಡ್ಡ ನಷ್ಟವಾಗಿದೆ. ಅವರ ನಿಧನದಿಂದ ಈ ಭಾಗದ ಜನರು ನತದೃಷ್ಟರಾಗಿದ್ದೇವೆ. ಅವರು ಇದ್ದಿದ್ದರೆ ಇನ್ನೂ ಸಾಕಷ್ಟು ಸೇವೆ ಜನರಿಗೆ ಲಭ್ಯವಾಗುತ್ತಿತ್ತು. ಅವರ ನಿಧನ ನನಗೆ ದೊಡ್ಡ ಆಘಾತವನ್ನುಂಟು ಮಾಡಿದೆ ಎಂದು ಪ್ರತಾಪ್ ಸಿಂಹ ಹೇಳಿದರು.

> ಸದಾ ಹಸನ್ಮುಖಿಯಾಗಿದ್ದ ಆರ್.ಧ್ರುವನಾರಾಯಣ್ ಅವರ ಅಕಾಲಿಕ ಅಗಲಿಕೆ ಅತೀವ ನೋವುಂಟು ಮಾಡಿದೆ. ರಾಜ್ಯ ರಾಜಕೀಯ ಕ್ಷೇತ್ರಕ್ಕೆ ಅಪಾರ ನಷ್ಟವುಂಟಾಗಿದೆ. ಅವರ ನಡೆ–ನುಡಿ, ರಾಜಕೀಯ ವೈಖರಿ, ಜನರೊಂದಿಗೆ ಬೆರೆಯುವ, ಕಷ್ಟ–ಸುಖದಲ್ಲಿ ಭಾಗಿಯಾಗುವ ರೀತಿ ಅನುಕರಣೀಯ. ಆತ್ಮೀಯ ಸ್ನೇಹಿತರೂ, ಸರಳ ವ್ಯಕ್ತಿತ್ವದ ಸಜ್ಜನ ರಾಜಕಾರಣಿ ಧ್ರುವನಾರಾಯಣ್ ಇನ್ನಿಲ್ಲ ಎನ್ನುವುದನ್ನು ಅರಗಿಸಿಕೊಳ್ಳಲು ಕಷ್ಟವಾಗುತ್ತದೆ.
> –ಸಂದೇಶ್ ನಾಗರಾಜ್, ಮಾಜಿ ಎಂಎಲ್‌ಸಿ



ಕ್ರಿಯಾಶೀಲ ರಾಜಕೀಯ ನಾಯಕನ ರಾಜ್ಯ ಕಳೆದುಕೊಂಡಿದೆ

ಮೈಸೂರು, ಮಾ.11– ಧ್ರುವನಾರಾಯಣ್ ನಿಧನದಿಂದಾಗಿ ಕ್ರಿಯಾಶೀಲ ರಾಜಕೀಯ ನಾಯಕನನ್ನು ರಾಜ್ಯ ಕಳೆದುಕೊಂಡಿದೆ ಎಂದು ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ಹೇಳಿದರು.



ವಿಜಯನಗರದಲ್ಲಿರುವ ಧ್ರುವನಾರಾಯಣ ನಿವಾಸದಲ್ಲಿ ಅಂತಿಮ ನಮನ ಸಲ್ಲಿಸಿದ ವೇಳೆ ಪ್ರಸಾದ್ ಕಣ್ಣೀರು ಹಾಕಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂತಹ ಕ್ರಿಯಾಶೀಲ ಯುವಕರು ರಾಜಕೀಯವಾಗಿ ಬೆಳೆಯಬೇಕು. ಅವರ ಸೇವೆ ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಬೇಕು ಎಂದು ಆಸೆಪಟ್ಟವನು ನಾನು. ಅವರ ಕ್ರಿಯಾಶೀಲತೆ ಹಾಗೂ ಜನಪರ ಕಾಳಜಿಯನ್ನು ಗಮನಿಸಿದ ನಾನು ಕ್ಷೇತ್ರ ಪುನರ್ವಿಂಗಡಣೆಯಾಗಿ ಸಂತೇಮರಹಳ್ಳಿ ಕ್ಷೇತ್ರ ಇಲ್ಲದಿದ್ದಾಗ ಧ್ರುವನಾರಾಯಣ್ ಅವರಿಗೆ ಸರಿಯಾಗಿ ಪರಿಚಯವೇ ಇಲ್ಲದಿದ್ದ ಕೊಳ್ಳೇಗಾಲ ಕ್ಷೇತ್ರದಲ್ಲಿ ಅವರನ್ನು ಸ್ಪರ್ಧೆಗಿಳಿಸಿ ಗೆಲುವಿಗಾಗಿ ಶ್ರಮಿಸಿದ್ದೆ ಎಂದರು ಹೇಳಿದರು.

ಇವರಿಗೆ ರಾಜಕೀಯ ಭವಿಷ್ಯವಿದೆ. ಜನಸೇವೆ ಮಾಡುವ ಮನಸ್ಸೂ ಇದೆ ಎಂಬುದನ್ನು ಮನಗಂಡು ಸೋನಿಯಾ ಗಾಂಧಿ ಅವರೊಂದಿಗೆ ಮಾತನಾಡಿ, ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಮಾಡಿದ್ದೆ. ಎರಡು ಬಾರಿ ಲೋಕಸಭೆ ಮತ್ತು ಒಂದು ಬಾರಿ ವಿಧಾನಸಭಾ ಚುನಾವಣೆಯಲ್ಲಿ ನಾನು ಧ್ರುವನಾರಾಯಣ್ ಗೆಲುವಿಗಾಗಿ ಶ್ರಮ ವಹಿಸಿದ್ದೇನೆ. ನನ್ನ ಮತ್ತು ಅವರ ನಡುವೆ ಅಪಾರ ಪ್ರೀತಿ–ವಿಶ್ವಾಸವಿತ್ತು. ಬದಲಾದ ರಾಜಕಾರಣದಲ್ಲಿ ಅನ್ಯ ಮಾರ್ಗವಿಲ್ಲದೇ ಇಬ್ಬರೂ ಎದುರು–ಬದುರಾಗಬೇಕಾಯಿತು. ಆದರೆ ವೈಯಕ್ತಿಕವಾಗಿ ಅವರನ್ನು ಮೆಚ್ಚಿದ್ದೇನೆ. ನಂಜನಗೂಡಿನಲ್ಲಿ ಸ್ಪರ್ಧಿಸಬೇಕೆಂದು ಬಹಳಷ್ಟು ಓಡಾಡುತ್ತಿದ್ದರು. ಎರಡು ಬಾರಿ ಸಂಸದನಾಗಿ ಬಹಳಷ್ಟು ಅಭಿವೃದ್ಧಿ ಕೆಲಸ ಮಾಡಿದ್ದರೂ ಯಾಕೆ ಇಷ್ಟು ಕಷ್ಟಪಟ್ಟು ಓಡಾಡಬೇಕು ಎಂದು ನಾನು ಸ್ನೇಹಿತರೊಂದಿಗೆ ಮಾತನಾಡುತ್ತಾ ಪ್ರಶ್ನಿಸುತ್ತಿದ್ದೆ. ಪಕ್ಷ ಬೇರೆಯಾದರೂ, ಧ್ರುವನಾರಾಯಣ್ ನಿಧನ ರಾಜ್ಯಕ್ಕೆ ದೊಡ್ಡ ನಷ್ಟವನ್ನುಂಟು ಮಾಡಿದೆ ಎಂದು ಹೇಳಲೇಬೇಕಾಗಿದೆ ಎಂದು ಶ್ರೀನಿವಾಸಪ್ರಸಾದ್ ಹೇಳಿದರು.

> ಆರ್.ಧ್ರುವನಾರಾಯಣ್ ಅವರು ನಿಜಕ್ಕೂ ರಾಜ್ಯ ರಾಜಕೀಯ ವಲಯದಲ್ಲಿ ಧ್ರುವತಾರೆಯಂತಿದ್ದರು. ಅವರ ಅಪರೂಪದ ವ್ಯಕ್ತಿತ್ವ ಎಂತಹವರಿಗೂ ಇಷ್ಟವಾಗುತ್ತಿತ್ತು. ಎದುರಾದವರನ್ನು ನಗುಮೊಗದಿಂದಲೇ ಮಾತನಾಡಿಸುತ್ತಿದ್ದರು. ನನಗೂ ಮಾರ್ಗದರ್ಶಕರಾಗಿದ್ದ ಸರಳ–ಸಜ್ಜನಿಕೆಯ ಅಭಿವೃದ್ಧಿ ಹರಿಕಾರರಾಗಿದ್ದ ಧ್ರುವ ನಾರಾಯಣ್ ಅವರ ನಿಧನದಿಂದ ರಾಜ್ಯಕ್ಕೆ ಅಪಾರ ನಷ್ಟ ಉಂಟಾಗಿದೆ.
> –ಪ್ರಫುಲ್ ಕುಮಾರ್, ಕಾಂಗ್ರೆಸ್ ಮುಖಂಡ





ಮೈಸೂರಿನ ಜಯನಗರ ಮಳಲವಾಡಿಯಲ್ಲಿ ದಿವಂಗತ ಆರ್.ಧ್ರುವನಾರಾಯಣ್ ಅವರ ಭಾರೀ ಕಟೌಟ್ ಅಳವಡಿಸಿ, ಮೋಂಬತ್ತಿ ಬೆಳಗುವ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

> ಮಾನವೀಯ ಅಂತಃಕರಣದ ಪ್ರಾಮಾಣಿಕ ರಾಜಕಾರಣಿ ಆರ್.ಧ್ರುವನಾರಾಯಣ್ ಅವರ ಅಕಾಲಿಕ ನಿಧನಕ್ಕೆ ದಲಿತ ಸಂಘರ್ಷ ಸಮಿತಿ ತೀವ್ರ ಸಂತಾಪ ಸೂಚಿಸುತ್ತದೆ. ಅವರು ಜನಾನುರಾಗಿಯಾಗಿ ಭರವಸೆಯ ನಾಯಕರಾಗಿ ಅತ್ಯಂತ ಉನ್ನತ ಸ್ಥಾನಮಾನಗಳನ್ನು ಹೊಂದಬಹುದಾಗಿದ್ದ ಸಾಮರ್ಥ್ಯ ಮತ್ತು ಅರ್ಹತೆವುಳ್ಳ ದಲಿತ ಸಮುದಾಯದ ಪ್ರಮುಖ ನಾಯಕರಾಗಿದ್ದರು. ಜನಪರ ಚಳುವಳಿಗಳ ಹಿತೈಷಿಯಾಗಿದ್ದ ಅವರ ಅಕಾಲಿಕ ನಿಧನ ಆಘಾತ ಉಂಟು ಮಾಡಿದೆ. ರಾಜಕಾರಣಿಗಳ ನಡೆ, ನುಡಿ, ನಡಾವಳಿ ಹೇಗಿರಬೇಕು ಎಂಬುದಕ್ಕೆ ಅವರು ಮಾದರಿಯಾಗಿದ್ದರು. ಧ್ರುವನಾರಾಯಣ್ ಅವರ ಅಗಲಿಕೆಯಿಂದ ರಾಜ್ಯದ ರಾಜ ಕೀಯ ವಲಯಕ್ಕೇ ತುಂಬಲಾರದ ನಷ್ಟ ಉಂಟಾದಂತಾಗಿದೆ. –ಗುರುಪ್ರಸಾದ್ ಕೆರಗೋಡು, ರಾಜ್ಯ ಸಂಚಾಲಕರು, ದಸಂಸ

ಆರೋಗ್ಯ ತಪಾಸಣೆ ಶಿಬಿರ

ಮೈಸೂರು, ಮಾ. 11– ಎನ್.ಜೆ.ಎಸ್. ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಮಾ. 14ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 2ರವರೆಗೆ ಮಂಡಿ ಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 99161 55453 ಸಂಪರ್ಕಿಸಬಹುದು.

ನಿಧನ



ಮಹೇಶ್

ಮೈಸೂರು, ಮಾ.11–ನಂಜನಗೂಡು ತಾಲೂಕು ಹುಲ್ಲಹಳ್ಳಿ ಗ್ರಾಮದ ನಿವಾಸಿ ಮಹೇಶ್(62) ಶನಿವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಮತ್ತು ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ(ಮಾ.12) ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು–ಕುಶಾಲನಗರ ಹೊಸ ಹೆದ್ದಾರಿ ಯೋಜನೆ ಕೊಡಗಿಗೆ ಮಾರಕ

ಯೋಜನೆ ಕೈಬಿಡುವಂತೆ ಪ್ರಧಾನಿ ಮೋದಿಗೆ ಮಾಜಿ ಸೇನಾ ಸಿಬ್ಬಂದಿ ಮನವಿ



ಮೈಸೂರು,ಮಾ.11(ಎಂಟಿವೈ)– ತನ್ನದೇ ಆದ ವೈಶಿಷ್ಟ್ಯತೆ ಹೊಂದಿರುವ ಕೊಡಗು ಜಿಲ್ಲೆಗೆ ಮಾರಕವಾಗಿ ಪರಿಣಮಿಸಲಿರುವ ಮೈಸೂರು–ಕುಶಾಲನಗರದ ನಾಲ್ಕು ಪಥದ ಹೆದ್ದಾರಿ ಯೋಜನೆಯನ್ನು ಕೈಬಿಡುವಂತೆ ಕೊಡಗು ಮಾಜಿ ಸೇನಾ ಸಿಬ್ಬಂದಿ ಸಂಘದ ವತಿಯಿಂದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯಲಾಗಿದೆ ಎಂದು ನಿವೃತ್ತ ಕರ್ನಲ್ ಸಿ.ಪಿ.ಮುತ್ತಣ್ಣ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡಗು ಜಿಲ್ಲೆ ಅತ್ಯಂತ ಚಿಕ್ಕ ಜಿಲ್ಲೆಯಾಗಿದ್ದು, ಪಶ್ಚಿಮ ಘಟ್ಟಗಳಿಗೆ ಹೊಂದಿಕೊಂಡಂತೆ, ತನ್ನದೇ ಆದ ಭೌಗೋಳಿಕ ಲಕ್ಷಣ ಹೊಂದಿದೆ. ದೇಶದ ಸೈನ್ಯಕ್ಕೆ ಅತ್ಯುತ್ತಮ ಸೇನಾಧಿಕಾರಿಗಳನ್ನು ಕೊಡುಗೆ ನೀಡಿದ ಜಿಲ್ಲೆಯನ್ನು ಇದೀಗ ರಕ್ಷಣೆ ಮಾಡಿ ಎಂದು ಕೇಳಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ಹಲವು ಬಾರಿ ಪ್ರಕೃತಿ ವಿಕೋಪಕ್ಕೆ ತುತ್ತಾಗಿರುವ ಕೊಡಗು ಜಿಲ್ಲೆಯ ಅಭಿವೃದ್ಧಿ ಹೆಸರಲ್ಲಿ ನಡೆಯುತ್ತಿರುವ ದೌರ್ಜನ್ಯ ಸಾಕಾಗಿದೆ. ಇದೀಗ ಮೈಸೂರು–ಕುಶಾಲನಗರ ನಾಲ್ಕು ಪಥದ ಹೆದ್ದಾರಿ ಕೊಡಗು ಜಿಲ್ಲೆಗೆ ಮಾರಕವಾಗಿ ಪರಿಣಮಿಸುವುದು ಖಚಿತವಾಗಿದ್ದು, ಅದರಿಂದ ಕೊಡಗು ಜಿಲ್ಲೆಯನ್ನು ರಕ್ಷಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ವಿಷಾದಿಸಿದರು.

ಮಾ.12ರಂದು ಮಂಡ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರು–ಕುಶಾಲನಗರದ ನಾಲ್ಕು ಪಥದ ಹೆದ್ದಾರಿ ಯೋಜನೆಗೆ ಗುದ್ದಲಿ ಪೂಜೆ ನೆರವೇರಿಸಲಿದ್ದಾರೆ. ಈ ಯೋಜನೆ ಕೊಡಗಿನ ಪ್ರಾದೇಶಿಕ ಭೂವೈವಿಧ್ಯಕ್ಕೆ ವಿರುದ್ಧವಾಗಿದೆ. ಇದರಿಂದಾಗಿ ಇಲ್ಲಿನ ಅರಣ್ಯ ನಾಶವಾಗಲಿದೆ. ಹೀಗಾಗಿ ಈ ಯೋಜನೆಯನ್ನು ಕೊಡಗಿನವರಲ್ಲದೆ, ಮೈಸೂರು ಭಾಗದ ಜನರೂ ವಿರೋಧಿಸಬೇಕು ಎಂದರು.

ಪ್ರಸ್ತುತ ಇರುವ ರಸ್ತೆಗಳೇ ಕೊಡಗು ಜಿಲ್ಲೆಯ ಸಂಪರ್ಕಕ್ಕೆ ಸಾಕಾಗಿದೆ. ಇನ್ನಷ್ಟು ದೊಡ್ಡ ರಸ್ತೆಗಳ ಅಗತ್ಯವಿಲ್ಲ. ಹೊಸ ಹೆದ್ದಾರಿ ಯೋಜನೆ ಕೊಡಗಿನ ಜನರ ಹಾಗೂ ಕಾವೇರಿ ನೀರಿನ ಮೂಲದ ಮೇಲೆ ದುಷ್ಪರಿಣಾಮ ಬೀರುತ್ತದೆ. ಕಾವೇರಿ ನೀರನ್ನು ಮೈಸೂರು, ಮಂಡ್ಯ, ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳ ಲಕ್ಷಾಂತರ ಮಂದಿ ಅವಲಂಬಿಸಿದ್ದಾರೆ. ಈ ಹೊಸ ಹೆದ್ದಾರಿ ಯೋಜನೆ ಪಿರಿಯಾಪಟ್ಟಣ ಭಾಗದಲ್ಲಿ ಅರಣ್ಯ ಪ್ರದೇಶವನ್ನು ನಾಶ ಮಾಡುವುದರಿಂದ ಕಾವೇರಿ ನದಿಯನ್ನು ಬತ್ತಿಸುವ ಅಥವಾ ಮಾರ್ಗ ಬದಲಿಸುವ ಸಾಧ್ಯತೆಯೂ ಇದೆ. ಇದರಿಂದ ಮುಂಬರುವ ದಿನಗಳಲ್ಲಿ ಕಾವೇರಿ ಜಲಾನಯನ ಪ್ರದೇಶಕ್ಕೆ ಕೃಷಿ ಹಾಗೂ ಮೈಸೂರು, ಬೆಂಗಳೂರು ನಗರಕ್ಕೆ ಕುಡಿಯಲು ನೀರೊದಗಿಸುವುದಕ್ಕೆ ಹಿನ್ನಡೆಯಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಕೊಡಗು ಜಿಲ್ಲೆಯಲ್ಲಿ ಈಗಾಗಲೇ ಭೂಕುಸಿತ ಸಮಸ್ಯೆಯೊಂದಿಗೆ ಕಾಡಾನೆ, ಹುಲಿ ಹಾವಳಿ ಹೆಚ್ಚಾಗಿದೆ. ಇದರಿಂದ ಜಿಲ್ಲೆಯ ಜನರು ತತ್ತರಿಸಿದ್ದಾರೆ. ಈ ಹೆದ್ದಾರಿ ನಿರ್ಮಾಣದಿಂದ ಪ್ರಾಣಿಗಳ ಕಾರಿಡಾರ್ ಹಾಳಾಗಿ ವನ್ಯಜೀವಿಗಳ ಹಾವಳಿ ಹೆಚ್ಚಾಗುವ ಸಾಧ್ಯತೆ ಇದೆ. ಕಾಡಾನೆಗಳ ಉಪಟಳ ಇನ್ನಷ್ಟು ಹೆಚ್ಚಾಗುವ ಆತಂಕವೂ ಎದುರಾಗುತ್ತಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆ ನೀಡಿರುವ ವರದಿಯಲ್ಲಿ ಕೊಡಗು ಜಿಲ್ಲೆಯ ಭೌಗೋಳಿಕ ಲಕ್ಷಣದ ಮೇಲೆ ಹಾನಿಯುಂಟು ಮಾಡುವ ಯೋಜನೆಗಳ ಜಾರಿಗೆ ತರದಂತೆ ಎಚ್ಚರಿಕೆ ನೀಡಿದೆ ಎಂದು ತಿಳಿಸಿದರು.

ಸಂಸದ ಪ್ರತಾಪ್ ಸಿಂಹ ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ಕೇಂದ್ರವಾಗಿಸಲು ಈ ಯೋಜನೆ ಅಗತ್ಯ ಎಂದು ಹೇಳಿದ್ದಾರೆ. ಆದರೆ, ಕೊಡಗಿನ ಜನರಿಗೆ ಪ್ರವಾಸೋದ್ಯಮ ಸಾಕಾಗಿದೆ. ಇನ್ನಷ್ಟು ಅಭಿವೃದ್ಧಿಯೂ ಬೇಡ, ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುವುದು ಬೇಡ ಎನಿಸಿದೆ. ಈಗಾಗಲೇ ಪ್ರವಾಸೋದ್ಯಮದ ಅಭಿವೃದ್ಧಿಯಿಂದಾಗಿ ಊಟಿ ಹಾಗೂ ಗೋವಾ ಹಾಳಾಗಿವೆ. ಈಗ ಕೊಡಗು ಜಿಲ್ಲೆಯನ್ನು ಹಾಳು ಮಾಡುವುದು ಬೇಡ. ನಮಗೆ ಕಾಫಿ ಹಾಗೂ ಮೆಣಸಿನ ಬೆಳೆಯೇ ಸಾಕು. ಅಭಿವೃದ್ಧಿ ಹೆಸರಿನಲ್ಲಿ ಇಲ್ಲಿ ಇನ್ನಷ್ಟು ಕಟ್ಟಡ ನಿರ್ಮಾಣ ಹಾಗೂ ಹೆದ್ದಾರಿ ಹೆಸರಿನಲ್ಲಿ ಅರಣ್ಯ ನಾಶ ಮಾಡಲು ನಾವು ಬಿಡುವುದಿಲ್ಲ. ಹೀಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಉದ್ದೇಶಿತ ಹೆದ್ದಾರಿ ನಿರ್ಮಾಣ ಯೋಜನೆ ಕೈಬಿಡಬೇಕೆಂದು ಮನವಿ ಮಾಡಿದರು. ಹೆದ್ದಾರಿ ಯೋಜನೆಯ ದುಷ್ಪರಿಣಾಮ ಕುರಿತಂತೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತದೆ. ಇಡೀ ಕೊಡಗಿನ ಜನ ಈ ಯೋಜನೆಯನ್ನು ವಿರೋಧಿಸುತ್ತಾರೆ. ಅದರೊಂದಿಗೆ ಕಾವೇರಿ ನೀರನ್ನು ಅವಲಂಬಿಸಿರುವ ಜನರು ವಿರೋಧಿಸಬೇಕು. ಯೋಜನೆ ಮುಂದುವರೆಸಲು ಪ್ರಯತ್ನಿಸಿದರೆ, ಕಾನೂನು ಹೋರಾಟ ಮಾಡುವುದಕ್ಕೂ ಕೊಡಗು ಮಾಜಿ ಸೇನಾ ಸಿಬ್ಬಂದಿ ಸಂಘ ನಿರ್ಧರಿಸಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೊಡಗು ಮಾಜಿ ಸೇನಾ ಸಿಬ್ಬಂದಿ ಸಂಘದ ಸದಸ್ಯರಾದ ನಿವೃತ್ತ ಕರ್ನಲ್ ಪಿ.ಎಸ್. ಗೋಕುಲ್, ನಿ. ಕರ್ನಲ್ ಎಂ.ಕೆ.ಬೆಳ್ಳಿಯಪ್ಪ, ನಿ. ಕರ್ನಲ್ ಸಿ.ಪಿ.ಮೇದಪ್ಪ ಇದ್ದರು.

ಸಿದ್ದರಾಮಯ್ಯ ಅಭಿವೃದ್ಧಿ ಕಾರ್ಯಗಳೇ ಕಾಂಗ್ರೆಸ್‌ಗೆ ವರದಾನ

ಕಾಂಗ್ರೆಸ್ ಮುಖಂಡ ಬಿ.ರೇವಣ್ಣ ವಿಶ್ವಾಸ

ಮೈಸೂರು, ಮಾ.11(ಎಂಟಿವೈ)– ಪ್ರಾಮಾಣಿಕ ರಾಜಕಾರಣಿಗಳಲ್ಲಿ ಒಬ್ಬರಾದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳೇ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ವರದಾನವಾಗಿ ಪರಿಣಮಿಸಲಿದೆ ಎಂದು ಕಾಂಗ್ರೆಸ್ ಮುಖಂಡ ಬಿ.ರೇವಣ್ಣ ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಯಾಗಿ ಐದು ವರ್ಷ ಉತ್ತಮ ಆಡಳಿತ ನಡೆಸಿದ ಸಿದ್ದರಾಮಯ್ಯ ಅವರು ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಎಲ್ಲಾ ವರ್ಗದ ಜನರ ಹಿತಕಾಯುವ ಕಾರ್ಯಕ್ರಮ ರೂಪಿಸಿದ್ದಾರೆ. ಈ ಹಿಂದೆ ಲೋಕೋಪಯೋಗಿ ಇಲಾಖೆ ಸಚಿವರಾಗಿದ್ದ ಡಾ.ಹೆಚ್.ಸಿ.ಮಹದೇವಪ್ಪ ಮೈಸೂರು ಭಾಗದಲ್ಲಿ ಹಲವು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಈ ಇಬ್ಬರು ನಾಯಕರು ಜನಪರವಾಗಿ ಯೋಚಿಸಿ ಅಭಿವೃದ್ಧಿ ಕಾರ್ಯಕ್ರಮ ರೂಪಿಸುವುದರಲ್ಲಿ ಬದ್ಧತೆ ಪ್ರದರ್ಶಿಸುತ್ತಿರುವುದರಿಂದ ಮೈಸೂರು ಭಾಗದ ಜನತೆ ಕಾಂಗ್ರೆಸ್‌ಗೆ ಬೆಂಬಲ ನೀಡಲು ಉತ್ಸುಕರಾಗಿದ್ದಾರೆ ಎಂದರು.

ತುಂಬಲಾರದ ನಷ್ಟ: ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ, ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ ಅಕಾಲಿಕ ನಿಧನದಿಂದ ಪಕ್ಷ ಮಾತ್ರವಲ್ಲ, ರಾಜ್ಯ ರಾಜಕೀಯಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತೇವೆ. ಎರಡು ಬಾರಿ ಸಂಸದರಾಗಿ ಅತ್ಯುತ್ತಮವಾಗಿ ಕೆಲಸ ನಿರ್ವಹಿಸಿದ್ದರು. ಪಕ್ಷ ಸಂಘಟನೆಯಲ್ಲಿ ತೊಡಗಿದ್ದರು ಎಂದು ತಿಳಿಸಿದರು.

ಅಪ್ಪ–ಮಗನ ಗೆಲುವು: ಈ ಹಿಂದೆ ತಿ.ನರಸೀಪುರದಲ್ಲಿ ಮೇಲ್ಸೇತುವೆ ಕಿರಿದಾಗಿದ್ದರಿಂದ ವಾಹನ ಸವಾರರು ಪರದಾಡುವಂತಾಗಿತ್ತು. ರಸ್ತೆಗಳು ಕಿರಿದಾಗಿದ್ದವು. ಲೋಕೋಪಯೋಗಿ ಸಚಿವರಾಗಿದ್ದ ಡಾ.ಹೆಚ್.ಸಿ.ಮಹದೇವಪ್ಪ ಅತ್ಯುತ್ತಮವಾದ ರಸ್ತೆ ನಿರ್ಮಿಸಿದ್ದಾರೆ. ಇದರಿಂದ ಈ ಬಾರಿ ತಿ.ನರಸೀಪುರ ಕ್ಷೇತ್ರದಿಂದ ಮಹದೇವಪ್ಪ ಪುತ್ರ ಸುನೀಲ್ ಬೋಸ್ ಅವರಿಗೆ ಕಾಂಗ್ರೆಸ್‌ನಿಂದ ಟಿಕೆಟ್ ನೀಡಬೇಕು. ನಂಜನಗೂಡು ಕ್ಷೇತ್ರದಿಂದ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಕಣಕ್ಕಿಳಿಸಿದರೆ ಗೆಲುವು ಸಾಧಿಸಬಹುದು ಎಂದು ಅಭಿಪ್ರಾಯಪಟ್ಟರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಎಂ.ಮಹೇಶ್, ಆರ್.ಮನೋಜ್‌ಕುಮಾರ್ ಇದ್ದರು.

ನಮ್ಮನ್ನು ಕಡೆಗಣಿಸಿದರೆ ಬಿಜೆಪಿಗೆ ನಮ್ಮ ಶಾಪ ತಟ್ಟುತ್ತದೆ!

- ತುರ್ತು ಪರಿಸ್ಥಿತಿ ವೇಳೆ ಜೈಲು ಶಿಕ್ಷೆ ಅನುಭವಿಸಿದವರ ಎಚ್ಚರಿಕೆ
- ಪಿಂಚಣಿ ಸೇರಿದಂತೆ ಸವಲತ್ತುಗಳ ಕಲ್ಪಿಸಲು ಸರ್ಕಾರಕ್ಕೆ ಆಗ್ರಹ


ಮೈಸೂರು,ಮಾ.11(ಎಂಟಿವೈ)– ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ಸೆರೆಮನೆ ಶಿಕ್ಷೆ ಅನುಭವಿಸಿದ ಹಿರಿಯರನ್ನು ಕಡೆಗಣಿಸಲಾಗುತ್ತಿದ್ದು, ಈ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬಹಿರಂಗ ಪತ್ರ ಬರೆದಿರುವುದಾಗಿ ತುರ್ತು ಪರಿಸ್ಥಿತಿಯಲ್ಲಿ ಜೈಲು ಶಿಕ್ಷೆ ಅನುಭವಿಸಿದ್ದ ದಾಸನೂರು ನಾಗರಾಜು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1975–76ನೇ ಸಾಲಿನಲ್ಲಿ ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ಪ್ರತಿಭಟಿಸಿ ಸೆರೆಮನೆ ಶಿಕ್ಷೆ ಅನುಭವಿಸಬೇಕಾಯಿತು. 'ದೇಶ ಸೇವೆಯೇ ತಾಯಿ ಭಾರತಾಂಬೆಯ ಸೇವೆ' ಎಂದು ನಾವು ನಡೆಸಿದ ಅಂದಿನ ಹೋರಾಟಗಾರರನ್ನು ಇಂದು ಗಣನೆಗೆ ತೆಗೆದುಕೊಳ್ಳದೆ ಇರುವುದು ವಿಷಾದನೀಯ. ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ಪ್ರತಿಭಟಿಸಿ ಸೆರೆಮನೆ ಶಿಕ್ಷೆ ಅನುಭವಿಸಿದವರಿಗೆ ಇದುವರೆವಿಗೂ ಕೇಂದ್ರ ಸರ್ಕಾರ – ರಾಜ್ಯ ಸರ್ಕಾರ ಯಾವುದೇ ಸವಲತ್ತುಗಳನ್ನು ನೀಡಿಲ್ಲ ಎಂದು ವಿಷಾದಿಸಿದರು. ದೇಶದ ವಿವಿಧ ರಾಜ್ಯಗಳಲ್ಲಿ ತುರ್ತು ಪರಿಸ್ಥಿತಿಯಲ್ಲಿ ಜೈಲು ಶಿಕ್ಷೆ ಅನುಭವಿಸಿದವರಿಗೆ 2008 ರಿಂದ ತಿಂಗಳಿಗೆ 10 ಸಾವಿರದಿಂದ 25 ಸಾವಿರ ರೂ.ವರೆಗೆ ಮಾಸಿಕ ಪಿಂಚಣಿಯನ್ನು ಅಲ್ಲಿನ ಬಿಜೆಪಿ ಸರ್ಕಾರಗಳು ನೀಡುತ್ತಿವೆ. ಆದರೆ, ಕರ್ನಾಟಕ ರಾಜ್ಯದಲ್ಲಿ ಕಡೆಗಣಿಸಲಾಗಿದೆ. ತುರ್ತು ಪರಿಸ್ಥಿತಿಯಲ್ಲಿ ಜೈಲು ಶಿಕ್ಷೆ ಅನುಭವಿಸಿರುವವರನ್ನು ಆರ್‌ಎಸ್‌ಎಸ್‌ನವರೆಂದು ಬೇರೆ ರಾಜ್ಯಗಳಲ್ಲಿ ಪರಿಗಣಿಸಲಾಗಿದೆ. ಆದರೆ ಕರ್ನಾಟಕದಲ್ಲಿ ನಮ್ಮನ್ನು ಪರಿಗಣಿಸುತ್ತಿಲ್ಲ. ನಮ್ಮ ಶಾಪ ತಟ್ಟದೆ ಬಿಡದು. ಅಂದು ನಾವು ಮಾಡಿದ ಹೋರಾಟದ ಫಲವಾಗಿ ಇಂದು ರಾಜ್ಯದಲ್ಲಿ ಬಿಜೆಪಿ ಬಲಗೊಂಡಿದೆ. ನಮ್ಮನ್ನು ಕಡೆಗಣಿಸಿದರೆ, ಮುಂದಿನ ದಿನಗಳಲ್ಲಿ ಬಿಜೆಪಿಗೆ ನಮ್ಮ ಶಾಪ ತಟ್ಟುತ್ತದೆ ಎಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ತುರ್ತು ಪರಿಸ್ಥಿತಿಯಲ್ಲಿ ಜೈಲುಶಿಕ್ಷೆ ಅನುಭವಿಸಿದ ಸುರೇಶ್‌ರಾವ್, ರಾಮಕೃಷ್ಣಯ್ಯ, ಸುರೇಂದ್ರ ಇದ್ದರು.

ಅಪರಿಚಿತ ವಾಹನ ಡಿಕ್ಕಿ: ಬೈಕ್ ಸವಾರ ಕಾರ್ಪೆಂಟರ್ ಸಾವು

ಬನ್ನೂರು, ಮಾ.11–ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಕಾರ್ಪೆಂಟರ್ ಸಾವನ್ನಪ್ಪಿದ ಘಟನೆ ಬನ್ನೂರು ಟೌನ್‌ನ ಮಳವಳ್ಳಿ ರಸ್ತೆಯಲ್ಲಿ ಸಂಭವಿಸಿದೆ. ಬನ್ನೂರಿನ ಚಾಮನಹಳ್ಳಿ ನಿವಾಸಿ ಸಿದ್ದಪ್ಪಾಜಿ (56) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ಪ್ರತೀದಿನ ಬನ್ನೂರಿನಿಂದ ಮೈಸೂರಿನ ಬೋಗಾದಿಗೆ ಕೆಲಸಕ್ಕಾಗಿ ಬೈಕ್‌ನಲ್ಲಿ (ಕೆಎ 55–ಕೆ 0970) ಹೋಗಿ–ಬರುತ್ತಿದ್ದರು. ಮಾರ್ಚ್ 7ರಂದು ರಾತ್ರಿ ಇವರು ಮೈಸೂರಿನಿಂದ ಬನ್ನೂರಿಗೆ ಹಿಂತಿರುಗುತ್ತಿದ್ದ ವೇಳೆ ಬನ್ನೂರಿನ ಮಳವಳ್ಳಿ ರಸ್ತೆಯಲ್ಲಿರುವ ಶುಗರ್‌ಕೇನ್ ಕಚೇರಿ ಮುಂಭಾಗ ಇವರ ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಅವರಿಗೆ ಪರಿಚಿತರು ಬನ್ನೂರು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಮೈಸೂರಿನ ಕೆಆರ್ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೇ ಅವರು ಅಂದು ಮಧ್ಯರಾತ್ರಿ ಸಾವನ್ನಪ್ಪಿದ್ದಾರೆ. ಈ ಸಂಬಂಧ ಬನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.3.2023 ಭಾನುವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ, 05.03.2023ರಿಂದ 17.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ವಿಶಾಖ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೀವಧಾರ ರಕ್ತನಿಧಿ ಕೇಂದ್ರ, ಒಂಟಿಕೊಪ್ಪಲ್ ಮತ್ತು ಗೋಕುಲಂ ಸ್ನೇಹಿತರ ಬಳಗ, ಬ್ಲಡ್ ಆನ್ ಕಾಲ್ ಕ್ಲಬ್ :** ಡಾ. ಪುನೀತ್ ರಾಜ್‌ಕುಮಾರ್ ನೆನಪಿನಲ್ಲಿ ರಕ್ತದಾನ ಶಿಬಿರ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ. ದೇವೇಗೌಡ, ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಮೇಯರ್ ಶಿವಕುಮಾರ್, ಚಿತ್ರನಟರಾದ ಚಿಕ್ಕಣ್ಣ, ಧಿರೇನ್ ರಾಮ್‌ಕುಮಾರ್, ಗರುಡ ರಾಮ್, ಸ್ಥಳ: ಶ್ರೀರಾಮ ಕಲ್ಯಾಣ ಮಂಟಪ, ಒಂಟಿಕೊಪ್ಪಲು, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪೈಲೋನೈಡಲ್ ಸೈನಸ್ ಮತ್ತು ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.

■ **ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ವಿವಿಧ ಕ್ಷೇತ್ರಗಳ ಮಹಿಳಾ ಸಾಧಕರಿಗೆ ಸನ್ಮಾನ ಸಮಾರಂಭ, ಉದ್ಘಾಟನೆ : ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಮೈಸೂರು ವಿಭಾಗದ ಎಸ್‌ಪಿ ಡಾ. ಬಿ.ಟಿ. ಕವಿತಾ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಲ ಅಧ್ಯಕ್ಷೆ ಲಲಿತಾ ಜಿ.ಟಿ. ದೇವೇಗೌಡ, ಮೈಸೂರು ವೈದ್ಯಕೀಯ ಕಾಲೇಜಿನ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್. ದಾಕ್ಷಾಯಿಣಿ, ಕೆ.ಎನ್. ಸುಧಾಮಣಿ, ಆರ್. ಸರಸ್ವತಿ, ಡಾ. ಶೋಭಾ, ರುಕ್ಮಿಣಿ ರಾಮಕೃಷ್ಣ, ಮಂಜುಳಾ ಪುಟ್ಟಸ್ವಾಮಿ, ಪಾಲಿಕೆ ಸದಸ್ಯೆ ಭಾಗ್ಯ ಸಿ. ಮಹದೇಶ್, ಶ್ರೀಮತಿ ಮಂಜುಳಾ ಮಂಜುನಾಥ್, ಡಾ. ಶಾಲಿನಿ ರವೀಂದ್ರ, ಡಾ. ನಿರ್ಮಲ, ಸ್ಥಳ: ಟೌನ್ ಹಾಲ್, ಬೆಳಗ್ಗೆ 11.30ಕ್ಕೆ.

■ **ಸರ್ ಎಂ. ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ :** ವಿಶ್ವ ನಲ್ಲಿ ಕೆಲಸಗಾರರ ದಿನಾಚರಣೆ, ಉದ್ಘಾಟನೆ : ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ವಿಶೇಷ ಆಹ್ವಾನಿತರು : ನಾಡೋಜ ಡಾ. ಸಾಲುಮರದ ತಿಮ್ಮಕ್ಕ, ಡಾ. ಎಂ.ಜಿ.ಆರ್. ಅರಸ್, ಹೆಚ್.ಎಂ.ಟಿ. ಲಿಂಗರಾಜೇ ಅರಸ್, ಸಾಹಿತಿ ಬನ್ನೂರು ಕೆ. ರಾಜು, ಶ್ರೀಮತಿ ಎನ್. ರಾಜೇಶ್ವರಿ, ಆರೋಗ್ಯಾಧಿಕಾರಿ ನಾಗರಾಜು, ರವಿಕುಮಾರ್, ಸ್ಥಳ: ರೋಟರಿ ಪಶ್ಚಿಮ ಶಾಲೆ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 11.30ಕ್ಕೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಪದವೀಧರರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತರಾದ ಶ್ರೀಮತಿ ಸಿ. ಶಿಖಾ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಸ್ಥಳ: ಗೋಲ್ಡನ್ ಜ್ಯೂಬಿಲಿ ಹಾಲ್, ಬೆಳಗ್ಗೆ 11.30ಕ್ಕೆ.

■ **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ–2023, ಸಾನ್ನಿಧ್ಯ : ಅರಮನೆ ಜಪದಕಟ್ಟೆ ಮಠದ ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಶಾಸಕ ಎಲ್. ನಾಗೇಂದ್ರ, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಶ್ರೀಮತಿ ಸುಮಲತಾ ಅಂಬರೀಷ್, ಸ್ಥಳ:ಕರ್ನಾಟಕ ಕಲಾಮಂದಿರ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಜೆ. ಶ್ರೀನಿವಾಸಮೂರ್ತಿ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ– ಎ.ಪಿ. ಚಂದ್ರಶೇಖರ್, 6.45ಅರಿವಿನ ಶಿಖರ, ಗಾಯನ– ಸಿ ವಿಶ್ವನಾಥ್, ಅಂಬಯ್ಯನುಲಿ, ವ್ಯಾಖ್ಯಾನ– ಡಾ. ಲತಾ ಮೈಸೂರು, 8.30 ವಿಶಿಷ್ಟ ವ್ಯಕ್ತಿ– ವಿಶೇಷ ಯತ್ನ ಮಾಲಿಕೆಯಲ್ಲಿ ಸಂತೋಷ್ ಕೌಲಗಿ ಅವರೊಂದಿಗೆ ಸಂದರ್ಶನ. ಸಂದರ್ಶಕರು ದಿವಾಕರ ಹೆಗಡೆ, 9.40 ನಮ್ಮ ಆರೋಗ್ಯ–"ಹಿರಿಯ ನಾಗರಿಕರ ಆರೋಗ್ಯ ರಕ್ಷಣೆ ಕುರಿತು" ಡಾ. ಕೆ. ನಾಗೇಂದ್ರ ಪ್ರಸಾದ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಪಂಚತಂತ್ರದ ಕಥೆ ಹೇಳುತ್ತಾರೆ ಬಿ.ಜಿ. ಕವಿತಾ, 10.30ಮಕ್ಕಳ ಮಂಟಪ– ಪ್ರತಿಭಾ ಪಲ್ಲವ–ಬಹುಮುಖ ಪ್ರತಿಭೆಯ ಹಾಡುಗಾರ ವೇಣುಗೋಪಾಲ ಎಸ್. ಕೊಕಬಾಳನ ಪರಿಚಯ, ಪ್ರಸ್ತುತಿ– ಎಂ.ಎಸ್. ಭಾರತಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.00ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಮಂಡ್ಯದಲ್ಲಿ ನೆರವೇರಿಸಲಿರುವ ವಿವಿಧ ಕಾಮಗಾರಿಗಳ ಶಿಲಾನ್ಯಾಸ ಹಾಗೂ ಉದ್ಘಾಟನಾ ಸಮಾರಂಭಗಳ ನೇರ ಪ್ರಸಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತು ಕಾರ್ಯಕ್ರಮ ಸರಣಿ, 1.20 ಭಾವಗೀತೆಗಳು, 3.15 ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಧಾರವಾಡದಲ್ಲಿ ನೆರವೇರಿಸಲಿರುವ ವಿವಿಧ ಕಾಮಗಾರಿಗಳ ಶಿಲಾನ್ಯಾಸ ಹಾಗೂ ಉದ್ಘಾಟನಾ ಸಮಾರಂಭಗಳ ನೇರ ಪ್ರಸಾರ, 6.50 ಕೃಷಿರಂಗ–ಹೂವಿನ ಬೇಸಾಯದೊಂದಿಗೆ ಕಟ್ಟಿಕೊಂಡ ಬದುಕು–ಕುರಿತು ಶ್ರೀರಂಗಪಟ್ಟಣ ತಾಲೂಕು ಚಂದೇಗೌಡನ ಕೊಪ್ಪಲಿನ ಕೃಷಿಕ ಪಿ. ರಾಮೇಗೌಡ ಅವರೊಂದಿಗೆ ಸಂದರ್ಶನ, 8.00 ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಮಂಡ್ಯ ಹಾಗೂ ಧಾರವಾಡದಲ್ಲಿ ಭಾಗವಹಿಸುವ ಕಾರ್ಯಕ್ರಮಗಳ ಬಾನುಲಿ ವರದಿ, 9.15 ರಂಗಗೀತೆಗಳು, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಮಹೇಂದ್ರ ತೋಕೆ–ಗಾಯನ.

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ತಾಲೂಕು ಶರಣ ಸಾಹಿತ್ಯ ಪರಿಷತ್ತು, ಶ್ರೀ ವಾಸವಿ ಶಾಂತಿಧಾಮ ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್ :** ವಿಶ್ವ ಮಹಿಳಾ ದಿನಾಚರಣೆ ಹಾಗೂ ವಚನ ಗಾಯನ ಸಮಾರಂಭ, ಉದ್ಘಾಟನೆ : ಸಹಾಯಕ ಕಾರ್ಮಿಕ ಆಯುಕ್ತೆ ಕು. ನಾಜಿಯಾ ಸುಲ್ತಾನ, ಅಧ್ಯಕ್ಷತೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ರಾಜ್ಯಾಧ್ಯಕ್ಷೆ ಶ್ರೀಮತಿ ಯಮುನಾ, ಆಶಯ ನುಡಿ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ದೇವರಾಜು ಪಿ. ಚಿಕ್ಕಹಳ್ಳಿ, ಶ್ರೀ ವಾಸವಿ ಶಾಂತಿಧಾಮ ಸಂಸ್ಥಾಪಕ ಗೌರವ ಕಾರ್ಯದರ್ಶಿ ಬಿ.ವಿ. ಶ್ರೀನಿವಾಸ ಗುಪ್ತ, ಕಾರ್ಯಕ್ರಮ ಸಂಘಟಕ ಸಿ. ಮೋಹನ್ ರಾಜು, ಸ್ಥಳ: ಶ್ರೀ ವಾಸವಿ ಶಾಂತಿಧಾಮ, ಆಲನಹಳ್ಳಿ ಬಡಾವಣೆ, ಸಂಜೆ 5ಕ್ಕೆ.

■ **ಫೋರಂ ಫಾರ್ ಹ್ಯೂಮನ್ ರೈಟ್ಸ್ ಅಂಡ್ ಆಂಟಿ ಕರಪ್ಷನ್ ಸಂಘಟನೆ :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ವಿವಿಧ ಕ್ಷೇತ್ರಗಳ ಮಹಿಳಾ ಸಾಧಕರಿಗೆ ಸನ್ಮಾನ ಸಮಾರಂಭ, ಸ್ಥಳ: ಕುಮಾರ್ ದಿ ವೈಟ್‌ಹೌಸ್ ಹೋಟೆಲ್ ಸಭಾಂಗಣ, ಹೈವೇ ವೃತ್ತ, ಸಂಜೆ 5.30ಕ್ಕೆ.

■ **ಅಂತರ್‌ದೃಷ್ಟಿ ಬ್ರೈನ್ ಅಕಾಡೆಮಿ, ಧ್ಯಾನಧಾಮ ಮತ್ತು ಸನಾತನ ಸಂಸ್ಥೆ :** ವಿಶ್ವ ಅಗ್ನಿಹೋತ್ರ ದಿನಾಚರಣೆ, ಅಗ್ನಿಹೋತ್ರ ಹೋಮ ಮತ್ತು ಮಹತ್ವ : ಸನಾತನ ಸಂಸ್ಥೆಯ ಕೆ. ಶಿವರಾಮ್, ಸೈಂಟಿಫಿಕ್ ಮೆಡಿಟೇಷನ್ ಮಹತ್ವ : ಧ್ಯಾನಧಾಮ ಸಂಸ್ಥಾಪಕ ವಿ. ಮುರಳಿ, ಅಂತರ್‌ದೃಷ್ಟಿ ಮಹತ್ವ : ಶಿವಪ್ರಕಾಶ್ ಗುರೂಜಿ, ಅಂತರ್‌ದೃಷ್ಟಿ ಪ್ರದರ್ಶನ : ಅಂತರ್‌ದೃಷ್ಟಿ ವಿದ್ಯಾರ್ಥಿಗಳಿಂದ, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ, ಸಂಜೆ 6ಕ್ಕೆ.

■ **ಇಂಡಿಯನ್ ಥಿಯೇಟರ್ ಫೌಂಡೇಷನ್ :** ವಾಲ್ಮೀಕಿ ರಾಮಾಯಣ ಆಧಾರಿತ ಎರಡನೇ ಭಾಗ 'ಅರಣ್ಯಕಾಂಡ' ನಾಟಕ ಪ್ರದರ್ಶನ, ರಚನೆ : ಹಿರಿಯ ರಂಗಕರ್ಮಿ ಪ್ರಸನ್ನ, ನಿರ್ದೇಶನ : ಶ್ರೀಪಾದ್ ಭಟ್, ಸಂಗೀತ : ಅನುಷ್ ಶೆಟ್ಟಿ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆಯವರ ದಿವ್ಯಜೀವನ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 12 ಭಾನುವಾರ 2023

ಸಂಪುಟ: 43 | ಸಂಚಿಕೆ: 322 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಆರ್.ಧ್ರುವನಾರಾಯಣ ಇನ್ನಿಲ್ಲ

ಸರಳ, ಸಜ್ಜನ ರಾಜಕಾರಣಿ ಅಗಲಿಕೆಗೆ ಗಣ್ಯರು, ಸಹಸ್ರಾರು ಅಭಿಮಾನಿಗಳ ಅಶ್ರುತರ್ಪಣ



ಆರ್.ಧ್ರುವನಾರಾಯಣ
31-07-1961 – 11-03-2023

ಮೈಸೂರು, ಮಾ.11(ಆರ್‌ಕೆ)–ಮಾಜಿ ಸಂಸದರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಅವರು ಮೈಸೂರಿನ ವಿಜಯನಗರ 3ನೇ ಹಂತದಲ್ಲಿರುವ ತಮ್ಮ ನಿವಾಸದಲ್ಲಿ ಶನಿವಾರ ಬೆಳಗ್ಗೆ ನಿಧನರಾಗಿದ್ದಾರೆ.

61 ವರ್ಷ ವಯಸ್ಸಿನ, ಸದಾ ಕ್ರಿಯಾಶೀಲರಾಗಿದ್ದ ಧ್ರುವ ನಾರಾಯಣ ದೇಹದೊಳಗಿನ ಆಂತರಿಕ ರಕ್ತಸ್ರಾವದಿಂದ ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ಅವರು ಪತ್ನಿ ವೀಣಾ, ಪುತ್ರರಾದ ದರ್ಶನ್, ಧೀರನ್, ಅಪಾರ ಬಂಧು–ಬಳಗ, ಹಿತೈಷಿಗಳು ಹಾಗೂ ಸಹಸ್ರಾರು ಸಂಖ್ಯೆಯ ಅಭಿಮಾನಿಗಳನ್ನು ಅಗಲಿದ್ದಾರೆ. ಶುಕ್ರವಾರ ಇಡೀ ದಿನ ವಿಧಾನಸಭಾ ಚುನಾವಣೆಯಲ್ಲಿ ತಾವು ಸ್ಪರ್ಧಿಸಲುದ್ದೇಶಿಸಿದ್ದ ನಂಜನಗೂಡು ಕ್ಷೇತ್ರದಲ್ಲಿ ಪ್ರವಾಸ ಮಾಡಿದ್ದ ಅವರು, ರಾತ್ರಿ 10 ಗಂಟೆ ಸುಮಾರಿಗೆ ಹುಲ್ಲಹಳ್ಳಿಯಿಂದ ಹೊರಟು ಮೈಸೂರಿನ ನಿವಾಸಕ್ಕೆ ತಲುಪಿದ್ದರು. ರಾತ್ರಿ 11.30ರ ಸುಮಾರಿನಲ್ಲಿ ಕೆಮ್ಮು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ತಮ್ಮ ಅಂಗರಕ್ಷಕನಿಂದ ಸಿರಪ್ ತರಿಸಿಕೊಂಡು, ಸೇವಿಸಿ ಮಲಗಿದರು ಎಂದು ಹೇಳಲಾಗಿದೆ. ಇಂದು ಬೆಳಗ್ಗೆ 6 ಗಂಟೆ ಸುಮಾರಿನಲ್ಲಿ ಧ್ರುವನಾರಾಯಣ ಮೂಗು ಮತ್ತು ಬಾಯಲ್ಲಿ ರಕ್ತಸ್ರಾವ ಉಂಟಾಗಿ ಬೆಡ್‌ನಿಂದ ಕೆಳಗೆ ಬಿದ್ದಿದ್ದಾರೆ. ಅದನ್ನು ನೋಡಿದ ಪತ್ನಿ ವೀಣಾ, ಮನೆಯಲ್ಲಿದ್ದ ಇತರರೊಂದಿಗೆ ಸೇರಿ ಕೂಗಿ ಕೊಂಡಾಗ ನೆರೆಮನೆ ನಿವಾಸಿಗಳಾಗಿರುವ ▶ 9ನೇ ಪುಟಕ್ಕೆ

ಇಂದು ಸ್ವಗ್ರಾಮ ಹೆಗ್ಗವಾಡಿಯಲ್ಲಿ ಧ್ರುವ ಅಂತ್ಯಕ್ರಿಯೆ

ಚಾಮರಾಜನಗರ, ಮಾ.11– ಶನಿವಾರ ನಿಧನರಾದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಅವರ ಅಂತ್ಯಕ್ರಿಯೆ ಭಾನುವಾರ (ಮಾ.12) ಮಧ್ಯಾಹ್ನ ಅವರ ಸ್ವಗ್ರಾಮ ತಾಲೂಕಿನ ಹೆಗ್ಗವಾಡಿಯಲ್ಲಿ ನಡೆಯಲಿದೆ.


ಮೈಸೂರಿನ ಅವರ ಮನೆ, ಕಾಂಗ್ರೆಸ್ ಕಚೇರಿಯಲ್ಲಿ ಅಂತಿಮ ದರ್ಶನದ ನಂತರ ಸಂಜೆ ಅಲ್ಲಿಂದ ಮೃತದೇಹವನ್ನು ನಂಜನಗೂಡಿನಲ್ಲಿ ಪಾರ್ಥಿವ ಶರೀರದ ಮೆರವಣಿಗೆ ಮಾಡಲಾಯಿತು. ನಂತರ ನಂಜನಗೂಡಿನಿಂದ ಮೃತದೇಹವನ್ನು ಚಾಮರಾಜನಗರಕ್ಕೆ ತಂದು ಇಲ್ಲಿಂದ ಹೆಗ್ಗವಾಡಿಗೆ ತಡರಾತ್ರಿ ತೆಗೆದುಕೊಂಡು ಹೋಗಲಾಯಿತು.

ಹೆಗ್ಗವಾಡಿಯಲ್ಲಿರುವ ಅವರ ಜಮೀನಿನಲ್ಲಿ, ತಂದೆ–ತಾಯಿ ಸಮಾಧಿ ಪಕ್ಕದಲ್ಲಿ, ಭಾನುವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ.



ಶನಿವಾರ ನಿಧನರಾದ ಕೆಪಿಸಿಸಿ ಕಾರ್ಯಾಧ್ಯಕ್ಷ, ಮಾಜಿ ಸಂಸದ ಆರ್.ಧ್ರುವನಾರಾಯಣ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇನ್ನಿತರ ಗಣ್ಯರು.

ಧ್ರುವನಾರಾಯಣ್ ನನ್ನ ಆತ್ಮೀಯ ಸ್ನೇಹಿತ



ಬೆಂಗಳೂರು, ಮಾ. 11 (ಕೆಎಂಶಿ)– ಇಂದು ಬೆಳಗ್ಗೆ ನಿಧನರಾದ ಮಾಜಿ ಸಂಸದ ಧ್ರುವನಾರಾಯಣ್ ಅವರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವದೊಂದಿಗೆ ನೆರವೇರಿಸಲಾಗುವುದೆಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧ್ರುವನಾರಾಯಣ್ ಅವರು ನನ್ನ ಆತ್ಮೀಯ ಸ್ನೇಹಿತರಾಗಿದ್ದರು. ವಿರೋಧ ಪಕ್ಷದಲ್ಲಿದ್ದರೂ ಕೂಡ ರಾಜ್ಯದ ಅಭಿವೃದ್ಧಿಯಲ್ಲಿ ಸಾಕಷ್ಟು ಬಾರಿ ಮುಕ್ತವಾಗಿ ಚರ್ಚೆ ಮಾಡಿದ್ದೆವು. ಅವರ ಚಿಂತನೆ ಮತ್ತು ನಮ್ಮ ಚಿಂತನೆಯಲ್ಲಿ ಸಾಮ್ಯವಿತ್ತು. ಎರಡು ಬಾರಿ ಶಾಸಕರಾಗಿ ಹಾಗೂ ಸಂಸದರಾಗಿದ್ದ ಅವರು ಈ ರಾಜ್ಯದ ಅಭಿವೃದ್ಧಿ, ಪರಿಶಿಷ್ಟ ಜನಾಂಗದ, ಚಾಮರಾಜನಗರದ ಬಗ್ಗೆ ಶ್ರೇಷ್ಠ ಕಳಕಳಿ ವ್ಯಕ್ತಪಡಿಸುತ್ತಿದ್ದರು ಎಂದಿದ್ದಾರೆ.

ಸ್ವಗ್ರಾಮ ತಲುಪಿದ ಪಾರ್ಥಿವ ಶರೀರ

ಮೈಸೂರು, ಮಾ.11–ಮೈಸೂರು ಜಿಲ್ಲಾ ಕಾಂಗ್ರೆಸ್‌ನಿಂದ ಹೊರಟ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ ಪಾರ್ಥಿವ ಶರೀರವನ್ನು ಹೊತ್ತ ವಾಹನ ತಡರಾತ್ರಿ ಸ್ವಗ್ರಾಮ ಹೆಗ್ಗವಾಡಿ ತಲುಪಿತು. ಗ್ರಾಮದಲ್ಲಿ ಕುಟುಂಬಸ್ಥರು ಮತ್ತು ಗ್ರಾಮಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ನಂಜನಗೂಡು ತಲುಪಿದ ಪಾರ್ಥಿವ ಶರೀರವನ್ನು ಹುಲ್ಲಹಳ್ಳಿ ಸರ್ಕಲ್‌ನಲ್ಲಿ ಅಶ್ರುತರ್ಪಣದ ನಡುವೆ ಬರಮಾಡಿಕೊಳ್ಳಲಾಯಿತು. ನಂತರ ನಂಜನಗೂಡು ಕಾಂಗ್ರೆಸ್ ಕಚೇರಿಯಲ್ಲಿ ಕೆಲ ಕಾಲ ದರ್ಶನಕ್ಕೆ ಇಡಲಾಗಿತ್ತು. ಅಲ್ಲಿಂದ ಹೊರಟ ಪಾರ್ಥಿವ ▶ 9ನೇ ಪುಟಕ್ಕೆ

ಕೆಬಿಜಿಯವರ
ಛೂಮಂತ್ರ... ಛೂಮಂತ್ರ...

ಆದರ್ಶ ರಾಜಕಾರಣಿ ಆರ್.ಧ್ರುವನಾರಾಯಣ
■ ಪುಟ–4

ಆರ್.ಧ್ರುವನಾರಾಯಣ ಅವರದು ಪರಿಶ್ರಮದ ರಾಜಕೀಯ ಪಯಣ....
■ ಪುಟ-10

ಆರ್.ಧ್ರುವನಾರಾಯಣ ಅವರ ಸಚಿತ್ರ ವರದಿ ಒಳಪುಟಗಳಲ್ಲಿ

80 ವರ್ಷ ಮೇಲ್ಪಟ್ಟ ನಾಗರಿಕರು, ವಿಶೇಷ ಚೇತನರು ಮನೆಯಲ್ಲೇ ಮತದಾನ ಮಾಡಲು ಅವಕಾಶ

● ಭಾರತದ ಚುನಾವಣಾ ಆಯೋಗ ನಿರ್ಧಾರ ● ಮತದಾನ ಕೇಂದ್ರಗಳಲ್ಲೂ ಇಂತಹ ಮತದಾರರಿಗೆ ವಿಶೇಷ ವ್ಯವಸ್ಥೆ

ಬೆಂಗಳೂರು, ಮಾ.11 (ಕೆಎಂಶಿ)– ಮುಂಬರುವ 16ನೇ ವಿಧಾನಸಭೆ ಚುನಾವಣೆಯಲ್ಲಿ 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಹಾಗೂ ವಿಶೇಷ ಚೇತನರು ಮನೆಯಲ್ಲೇ ಮತದಾನ ಮಾಡಲು ಅವಕಾಶ ಕಲ್ಪಿಸಲು ಭಾರತದ ಚುನಾವಣಾ ಆಯೋಗ ನಿರ್ಧರಿಸಿದೆ.

ಎಲ್ಲರೂ ಮತದಾನ ಮಾಡಲು ಅವಕಾಶ ದೊರೆಯಬೇಕು ಎನ್ನುವ ಉದ್ದೇಶದಿಂದ ಮೊದಲ ಬಾರಿಗೆ 80 ವರ್ಷಕ್ಕೂ ಹೆಚ್ಚಿನ ವಯಸ್ಸಿನ ಹಾಗೂ ವಿಶೇಷಚೇತನರಿಗೆ ಮನೆಯಿಂದಲೇ ಮತದಾನಕ್ಕೆ ಅವಕಾಶ



ಕಲ್ಪಿಸಲಾಗುವುದು. ಮತದಾನ ಕೇಂದ್ರಗಳಲ್ಲಿ ಇವರಿಗೆ ವಿಶೇಷ ಸೌಲಭ್ಯಗಳನ್ನು ಮಾಡಲಾಗಿದೆ.

ಮೂರು ದಿನಗಳಿಂದ ವಿಧಾನಸಭೆ ಚುನಾವಣೆ ಸಿದ್ಧತೆ ಕುರಿತಂತೆ ನಗರದಲ್ಲಿ ಸರಣಿ ಸಭೆಗಳನ್ನು ನಡೆಸಿ, ಪರಿಶೀಲನೆ ನಡೆಸಿದ ಭಾರತ ಚುನಾವಣಾ ಆಯೋಗದ ಮುಖ್ಯ ಆಯುಕ್ತ ರಾಜೀವ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಮತದಾನ ಕೇಂದ್ರಕ್ಕೆ ಆಗಮಿಸಲು ಸಾಧ್ಯವಾಗದೇ ಇರುವಂತಹ ಮತದಾರರಿಗೂ ಮನೆಯಿಂದಲೇ ಮತದಾನ ಮಾಡುವ ವಿಶೇಷ ಸೌಲಭ್ಯವನ್ನು ಕಲ್ಪಿಸಲಾಗಿದೆ. ಎಲ್ಲಾ ರೀತಿಯ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡು ಪಾರದರ್ಶಕ ಮತದಾನಕ್ಕೆ ಅವಕಾಶ ಕಲ್ಪಿಸಲಾಗುವುದು. ಈ ಬಾರಿಯ ಚುನಾವಣೆಯಲ್ಲಿ ವಿವಿಧ ಇಲಾಖೆಗಳ ಸಮನ್ವಯದಿಂದ ಚುನಾವಣಾ ಅಕ್ರಮಗಳ ತಡೆಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಪ್ರಸಕ್ತ 15ನೇ ವಿಧಾನಸಭೆಯ ಅವಧಿ ಮೇ 24ಕ್ಕೆ ಮುಗಿಯಲಿದ್ದು, ಇದಕ್ಕೂ ಮುನ್ನ ವಿಧಾನಸಭಾ ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳಬೇಕಿದೆ. ಪಾರದರ್ಶಕ ಹಾಗೂ ನಿರ್ಭೀತ ಚುನಾವಣೆ ನಡೆಸಲು ಸಜ್ಜಾಗುವಂತೆ ಜಿಲ್ಲಾ ಚುನಾವಣಾ ಅಧಿಕಾರಿಗಳಿಗೆ ಹಾಗೂ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳಿಗೆ ಅಗತ್ಯ ಸೂಚನೆ ಮತ್ತು ಸಲಹೆಗಳನ್ನು ನೀಡಲಾಗಿದೆ ಎಂದು ಹೇಳಿದರು.

ಆಸ್ಪತ್ರೆಗೆ ಬರುತ್ತೇನೆಂದ ಧ್ರುವನಾರಾಯಣ್ ಮತ್ತೆ ನಾನೇ ಫೋನ್ ಮಾಡಿದಾಗ ಕರೆ ಸ್ವೀಕರಿಸಲಿಲ್ಲ

ಜಯದೇವ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ



ಮೈಸೂರು, ಮಾ.11(ಆರ್‌ಕೆ)–ಇಂದು ಬೆಳಗ್ಗೆ 6.50ರಲ್ಲಿ ನನ್ನ ಮೊಬೈಲ್‌ಗೆ ಕರೆ ಮಾಡಿದ ಧ್ರುವನಾರಾಯಣ್, ನನಗೆ ಹುಷಾರಿಲ್ಲ. ಆಸ್ಪತ್ರೆಗೆ ಬರುತ್ತೇನೆ ಡಾಕ್ಟ್ರೆ ಎಂದರು. ಬರದಿದ್ದಾಗ ಮತ್ತೆ ನಾನೇ ಫೋನ್ ಮಾಡಿದೆ. ಅವರು ಕರೆ ಸ್ವೀಕರಿಸಲಿಲ್ಲ ಎಂದು ಮೈಸೂರಿನ ಜಯದೇವ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ತಿಳಿಸಿದ್ದಾರೆ. ರಾತ್ರಿ ಪೂರ್ತಿ ಆರೋಗ್ಯ ಸರಿ ಇರಲಿಲ್ಲ ಅರ್ಜೆಂಟಾಗಿ ತೋರಿಸಬೇಕು. ಬರಲಾ ಎಂದರು. ನೀವು ಈಗಲೇ ಆಸ್ಪತ್ರೆಗೆ ಬಂದುಬಿಡಿ ಎಂದು ಹೇಳಿ ತಡ ಮಾಡದೇ ನಾನು ಆಸ್ಪತ್ರೆಗೆ ಹೋಗಿ ಬೆಡ್, ಸಿಬ್ಬಂದಿಗಳನ್ನು ಸಿದ್ಧಪಡಿಸಿಕೊಂಡು ತಕ್ಷಣ ನಾನೇ ಫೋನ್ ಮಾಡಿದೆ. ಅವರು ಕರೆ ಸ್ವೀಕರಿಸಲಿಲ್ಲ. ಹತ್ತೇ ನಿಮಿಷದಲ್ಲಿ ಡಿಆರ್‌ಎಂ ಆಸ್ಪತ್ರೆಯಿಂದ ಫೋನ್ ಮಾಡಿ ಧ್ರುವನಾರಾಯಣ್ ಅವರನ್ನು ಕರೆತಂದಿದ್ದಾರೆಂದು ತಿಳಿಸಿದರು. ನಾನು ತಕ್ಷಣವೇ ಆಸ್ಪತ್ರೆಗೆ ಹೋಗಿ ಸಿಪಿಆರ್ ಪ್ರೊಸೀಜರ್, ಮಸಾಜ್ ಮಾಡಿ ಇಂಜೆಕ್ಷನ್ ನೀಡಿ ಎಲ್ಲಾ ಪ್ರಯತ್ನಗಳನ್ನು ಮಾಡಿದರೂ ಪ್ರಯೋಜನವಾಗಲಿಲ್ಲ ಎಂದು ಡಾ.ಸದಾನಂದ ತಿಳಿಸಿದರು.


ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಉದ್ಘಾಟನೆ

■ ಕೇಸರಿಮಯವಾಗಿರುವ ಸಕ್ಕರೆ ಸವಿಯ ಅಕ್ಕರೆ ಜಿಲ್ಲೆ ಮಂಡ್ಯ; ಸ್ವಾಗತಕ್ಕಾಗಿ ಮಹಾದ್ವಾರ ನಿರ್ಮಾಣ ■ ಪ್ರಧಾನಿ ರೋಡ್ ಶೋ ಮಾರ್ಗದುದ್ದಕ್ಕೂ ರಾರಾಜಿಸುತ್ತಿವೆ ಬಿಜೆಪಿ ಬಾವುಟಗಳು ■ 45 ವರ್ಷದ ನಂತರ ಮಂಡ್ಯಕ್ಕೆ ಭೇಟಿ ನೀಡುತ್ತಿರುವ ದೇಶದ ಎರಡನೇ ಪ್ರಧಾನಿ ಮೋದಿ



ಮಂಡ್ಯ, ಮಾ.11–ಪ್ರಧಾನಮಂತ್ರಿ ನರೇಂದ್ರ ಮೋದಿಯವರು ನಾಳೆ(ಭಾನುವಾರ) ಮಧ್ಯಾಹ್ನ 12 ಗಂಟೆಗೆ ಮಂಡ್ಯ ಜಿಲ್ಲೆ ಮದ್ದೂರು ತಾಲೂಕು ಗೆಜ್ಜಲಗೆರೆಯಲ್ಲಿ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯನ್ನು ಲೋಕಾರ್ಪಣೆ ಮಾಡಲಿದ್ದಾರೆ. ಮೋದಿ ಆಗಮನದ ಹಿನ್ನೆಲೆಯಲ್ಲಿ ಮಂಡ್ಯ ಸಂಪೂರ್ಣ ಕೇಸರಿಮಯವಾಗಿದೆ. ಮೋದಿ ಸ್ವಾಗತಕ್ಕಾಗಿ ನಾಲ್ಕು ಮಹಾದ್ವಾರಗಳನ್ನು ನಿರ್ಮಿಸಲಾಗಿದೆ. ಐಬಿ ವೃತ್ತದ ಬಳಿ 'ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ', ಸಂಜಯ ವೃತ್ತದಲ್ಲಿ ನಾಡಪ್ರಭು ಕೆಂಪೇಗೌಡರು, ಮಹಾವೀರ ವೃತ್ತದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಫ್ಯಾಕ್ಟರಿ ವೃತ್ತದಲ್ಲಿ ಟಿಪ್ಪು ಹತ್ಯೆ ಮಾಡಿದ್ದಾರೆ ಎಂದು ಬಿಜೆಪಿ ಹೇಳುತ್ತಿರುವ ಉರಿಗೌಡ ಹಾಗೂ ನಂಜೇಗೌಡರ ಹೆಸರಿನಲ್ಲಿ ಮಹಾದ್ವಾರಗಳನ್ನು ನಿರ್ಮಿಸಲಾಗಿದೆ.

ಪ್ರಧಾನಿ ಮೋದಿಯವರು ನಾಳೆ ಬೆಳಗ್ಗೆ 11 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಿ, ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ಮಂಡ್ಯದ ಪಿಇಎಸ್ ಕಾಲೇಜಿನ ಕೆಎಸ್‌ಸಿಎ ಕ್ರಿಕೆಟ್ ಮೈದಾನದ ಹೆಲಿಪ್ಯಾಡ್‌ಗೆ ▶ 9ನೇ ಪುಟಕ್ಕೆ



ಮೈಸೂರು–ಬೆಂಗಳೂರು ಮಾರ್ಗದ ವಾಹನ ಸಂಚಾರ ಮಾರ್ಗ ಬದಲಾವಣೆ

ಮಂಡ್ಯ, ಮಾ.11–ಪ್ರಧಾನಿ ಮೋದಿ ಆಗಮನ ಹಿನ್ನೆಲೆಯಲ್ಲಿ ಮಂಡ್ಯ ಹಾಗೂ ಮದ್ದೂರು ಮೂಲಕ ಬೆಂಗಳೂರು, ಮೈಸೂರು ಹಾಗೂ ತುಮಕೂರಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಭಾನುವಾರ ಬೆಳಗ್ಗೆ 6ರಿಂದ ಮಧ್ಯಾಹ್ನ 2ರವರೆಗೆ ಸಂಪೂರ್ಣ ಬಂದ್ ಆಗಿರುವುದರಿಂದ ಬದಲಿ ಸಂಚಾರ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಡಾ.ಗೋಪಾಲಕೃಷ್ಣ ತಿಳಿಸಿದ್ದಾರೆ.

ಮೈಸೂರು ನಗರದಿಂದ ಬೆಂಗಳೂರಿಗೆ ಅಥವಾ ಬೆಂಗಳೂರಿನಿಂದ ಮೈಸೂರಿಗೆ ಮಂಡ್ಯ, ಮದ್ದೂರು ಮಾರ್ಗವಾಗಿ ಸಂಚರಿಸಲಿರುವ ಎಲ್ಲಾ ರೀತಿಯ ವಾಹನಗಳು ಮೈಸೂರು– ▶ 9ನೇ ಪುಟಕ್ಕೆ

ವೇದಿಕೆ ಕಾರ್ಯಕ್ರಮಕ್ಕೆ ತೆರಳಲು ವಾಹನಗಳ ಮಾರ್ಗ

ಮಂಡ್ಯ, ಮಾ.11–ಮಂಡ್ಯ ಜಿಲ್ಲೆಯ ಗೆಜ್ಜಲಗೆರೆಯಲ್ಲಿ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯನ್ನು ಪ್ರಧಾನಿ ಮೋದಿ ಲೋಕಾರ್ಪಣೆ ಮಾಡುವ ಕಾರ್ಯಕ್ರಮಕ್ಕೆ ತೆರಳುವ ಸಾರ್ವಜನಿಕರ ವಾಹನಗಳಿಗೆ ಜಿಲ್ಲಾ ಪೊಲೀಸರು ಮಾರ್ಗಗಳನ್ನು ಸೂಚಿಸಿದ್ದಾರೆ.

ಮಳವಳ್ಳಿ ಮಾರ್ಗ: ಮಳವಳ್ಳಿ ಕಡೆಯಿಂದ ಬರುವ ವಾಹನಗಳು ಕೆ.ಎಂ.ದೊಡ್ಡಿ– ▶ 9ನೇ ಪುಟಕ್ಕೆ





ನಕ್ಕರೆ ಅದೇ ಸ್ವರ್ಗ

ರೋಗಿ (ಆಪರೇಷನ್ ಟೇಬಲ್ ಮೇಲೆ ಮಲಗಿದ್ದಾಗ) : ಆಪರೇಷನ್ ನಂತರ ನಾನು ಎಷ್ಟು ದಿವಸ ಆಸ್ಪತ್ರೆಯಲ್ಲಿ ಉಳಿಯಬೇಕಾದೀತು?

ಉದಯೋನ್ಮುಖ ಡಾಕ್ಟರ್ : ಆಪರೇಷನ್ ಯಶಸ್ವಿಯಾದರೆ ಒಂದು ವಾರ. ಇಲ್ಲವಾದರೆ ಒಂದು ಗಂಟೆ!

ಮೈಸೂರು ಮಿತ್ರ

ಭಾನುವಾರ, 12 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಸ್ವಯಂ ಶಿಸ್ತು ಎಂದರೆ ನ್ಯಾಯ ಇದ್ದಂತೆ, ಹೆಚ್ಚು ಅಭ್ಯಾಸ ಮಾಡಿದಷ್ಟು ಹೆಚ್ಚು ದೃಢವಾಗುತ್ತವೆ. –ಡೇನಿಯಲ್ ಗೋಲ್ಡ್‌ಸ್ಮಿತ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದಾನ ಕೊಟ್ಟ ಎತ್ತಿನ ಹಲ್ಲು ಎಣಿಸಿದರಂತೆ

ನಿಮ್ಮ ಪತ್ರಗಳು

ಧ್ರುವ ಎಂಬ ಸಜ್ಜನ ರಾಜಕಾರಣಿ

ಮಾನ್ಯರೆ,



ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಕಾರ್ಯಾಧ್ಯಕ್ಷರು, ಮಾಜಿ ಸಂಸದ ಮತ್ತು ಶಾಸಕರಾದ ಧ್ರುವನಾರಾಯಣ್ ಅವರು ತೀವ್ರ ಹೃದಯಾಘಾತಕ್ಕೆ ಒಳಗಾಗಿ ನಮ್ಮನ್ನು ಅಗಲಿರು ವುದು ದುಃಖಕರ ಸಂಗತಿ. ರಾಜ್ಯ ವಿಧಾನ ಸಭೆಗೆ ನಂಜನಗೂಡು ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಎಲ್ಲಾ ತಯಾರಿ ಮಾಡಿಕೊಳ್ಳುತ್ತಿದ್ದ ಸಂದರ್ಭದಲ್ಲಿಯೇ ಜವರಾಯ ಅವರನ್ನು ಮರಳಿ ಬಾರದ ಲೋಕಕ್ಕೆ ಕರೆದೊಯ್ದದ್ದು ವಿಧಿ ಸಂಕಲ್ಪವಲ್ಲದೇ ಬೇರೇನೂ ಅಲ್ಲ. ಧ್ರುವನಾರಾಯಣ್ ಅವರನ್ನು ಆತ್ಮೀಯ ವಲಯದಲ್ಲಿ ಧ್ರುವ ಎಂದೇ ಕರೆಯಲಾಗುತ್ತಿತ್ತು. ಗೆಲ್ಲಲಿ, ಸೋಲಲಿ, ಜನರ ಕಷ್ಟ ಕಾರ್ಪಣ್ಯಗಳಿಗೆ ನಿರಂತರವಾಗಿ ಸ್ಪಂದಿಸುತ್ತಿದ್ದ ಕೆಲವೇ ರಾಜಕಾರಣಿಗಳ ಪೈಕಿ ಧ್ರುವನಾರಾಯಣ್ ಕೂಡ ಒಬ್ಬರು. 31.07.1961 ರಂದು ಚಾಮರಾಜನಗರ ಜಿಲ್ಲೆಯ ಹೆಗ್ಗವಾಡಿಯಲ್ಲಿ ಜನಿಸಿದ ಧ್ರುವನಾರಾಯಣ್ ಕೃಷಿ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರೂ ಸಹ, ರಾಜಕೀಯದಲ್ಲಿ ಆಸಕ್ತಿ ಬೆಳೆಸಿಕೊಂಡರು. 1983ರಲ್ಲಿ ಕಾಂಗ್ರೆಸ್ ಪಕ್ಷ ಸೇರಿ ಎರಡು ಬಾರಿ ಶಾಸಕರಾಗಿ (ಸಂತೇಮರಳ್ಳಿ ಹಾಗೂ ಕೊಳ್ಳೇಗಾಲ) ಹಾಗೂ ಎರಡು ಬಾರಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ 2009 ಮತ್ತು 2014) ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದರು. ಒಂದು ಕಾಲದಲ್ಲಿ ಲೋಕಸಭಾ ಸದಸ್ಯ ಶ್ರೀನಿವಾಸ್ ಪ್ರಸಾದ್ ಅವರ ಕಟ್ಟಾ ಅನುಯಾಯಿಯಾಗಿದ್ದ ಧ್ರುವ, ಬದಲಾದ ರಾಜಕೀಯ ಸನ್ನಿವೇಶದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರ ವಾಲಿದರು. 2019ರ ಲೋಕ ಸಭಾ ಚುನಾವಣೆಯಲ್ಲಿ ತಮ್ಮ ಒಂದು ಕಾಲದ ರಾಜಕೀಯ ಗುರು ಶ್ರೀನಿವಾಸ ಪ್ರಸಾದ್ ಅವರಿಂದ ಕಡಿಮೆ ಮತಗಳ ಅಂತರದಿಂದ ಸೋಲುಂಡರೂ ಸಹ ಧೃತಿಗೆಡದೇ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಂಡರು. ಇವರ ಸಂಘಟನಾ ಚಾತುರ್ಯಕ್ಕೆ ಬೆರಗಾದ ಕಾಂಗ್ರೆಸ್ ಹೈ ಕಮಾಂಡ್ ಇವರನ್ನು ಪ್ರದೇಶ ಕಾಂಗ್ರೆಸ್ ಕಾರ್ಯಾಧ್ಯಕ್ಷರನ್ನಾಗಿ ನೇಮಿಸಿತ್ತು. ಪಕ್ಷದ ಸಂಘಟನೆಗಾಗಿ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದ ಧ್ರುವ ನಾರಾಯಣ್ ಹಳೇ ಮೈಸೂರು ಭಾಗದಲ್ಲಿ ಪಕ್ಷವನ್ನು ಬಲಪಡಿಸಲು ಸಿದ್ದರಾಮಯ್ಯನವರ ಜೊತೆ ಕೈಜೋಡಿಸಿದ್ದರು. ಕೊರೊನಾ ಸಂದರ್ಭದಲ್ಲಿ ತಮ್ಮ ಕ್ಷೇತ್ರದ ಜನರ ನೋವು ನಲಿವುಗಳಿಗೆ ಸಾಕಷ್ಟು ಸ್ಪಂದಿಸುತ್ತಿದ್ದ ಧ್ರುವನಾರಾಯಣ್, ರಾಜಕೀಯ ಮರುಹುಟ್ಟನ್ನು ಪಡೆಯಲು ಸರ್ವ ಸಿದ್ದತೆ ಮಾಡಿಕೊಳ್ಳುತ್ತಿದ್ದಾಗಲೇ, ಅಕಾಲ ಮೃತ್ಯುಗೀಡಾಗಿದ್ದಾರೆ.

ಸರಳ ಹಾಗೂ ಸ್ನೇಹ ಜೀವಿಯಾಗಿದ್ದ ಧ್ರುವನಾರಾಯಣ್ ಓರ್ವ ಪ್ರಾಮಾಣಿಕ ಹಾಗೂ ಶಿಸ್ತುಬದ್ದ ರಾಜಕಾರಿಣಿಯಾಗಿ ಬಹಳ ಕಾಲ ಜನಮಾನಸದಲ್ಲಿ ಉಳಿಯಲಿದ್ದಾರೆ. ಅವರಿಗೆ ಗೌರವಪೂರ್ವಕ ಶ್ರದ್ಧಾಂಜಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ದಾಸಪ್ಪ ವೃತ್ತದ ಬಳಿ ವಾಹನ ದಟ್ಟಣೆ ಸಮಸ್ಯೆ ನಿವಾರಿಸಿ

ಮಾನ್ಯರೆ,

ಮೈಸೂರು ನಗರದ ದಾಸಪ್ಪ ವೃತ್ತದ ಬಳಿಯ ತಿರುವಿನಲ್ಲಿ ಇಲವಾಲ, ಹೆಬ್ಬಾಳು ಮತ್ತಿತರ ಕಡೆಗಳಿಗೆ ತೆರಳುವ ಟೆಂಪೋಗಳ ಚಾಲಕರು ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ರಸ್ತೆಯಲ್ಲಿಯೇ ತಮ್ಮ ವಾಹನಗಳನ್ನು ನಿಲ್ಲಿಸುತ್ತಿದ್ದಾರೆ. ಇದರಿಂದಾಗಿ ಪ್ರತಿದಿನವೂ ಈ ಸ್ಥಳದಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿದೆ. ನಗರ ಸಾರಿಗೆ ಬಸ್ಸುಗಳು ನಿಲುಗಡೆ ಮಾಡಲು ಸ್ಥಳವಿಲ್ಲದೆ ರಸ್ತೆಯ ಮಧ್ಯದಲ್ಲಿಯೇ ಬಸ್ಸುಗಳನ್ನು ನಿಲ್ಲಿಸುವಂತಾಗಿದೆ. ಹೀಗಾಗಿ ವಾಹನ ಸವಾರರಿಗೆ, ಬಸ್ಸು ಮತ್ತು ಟೆಂಪೋ ಚಾಲಕರ ನಡುವೆ ವಾಹನ ನಿಲುಗಡೆ ವಿಚಾರದಲ್ಲಿ ಪ್ರತಿದಿನವೂ ಘರ್ಷಣೆ ಉಂಟಾಗುತ್ತಿದೆ.

ಎರಡನೆಯದಾಗಿ, ವಿದ್ಯಾರಣ್ಯಪುರಂನ ಹುಣಸೇಮರ (ಸೂಯೇಜ್ ಫಾರಂ) ರಸ್ತೆಯಿಂದ ಸ್ಟರ್ಲಿಂಗ್ ಚಿತ್ರಮಂದಿರದ ರಸ್ತೆಗೆ ತೆರಳುವ ಮಾರ್ಗದಲ್ಲಿ ವಾಹನ ನಿಲುಗಡೆ ಸಮಸ್ಯೆಯಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ದ್ವಿಚಕ್ರ ವಾಹನಗಳು, ಕಾರುಗಳು ಮತ್ತು ಆಟೋಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸುತ್ತಿರುವುದರಿಂದ ನಗರಸಾರಿಗೆ ಬಸ್ಸುಗಳ ಮತ್ತು ಇತರ ವಾಹನಗಳ ಸಂಚಾರಕ್ಕೆ ಬಹಳ ಅಡಚಣೆಯಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಆದಷ್ಟು ಶೀಘ್ರ ಮೇಲ್ಕಂಡ ಸಮಸ್ಯೆಗಳನ್ನು ನಿವಾರಿಸಬೇಕೆಂದು ಕಳಕಳಿಯ ಮನವಿ.

–ಪರಶಿವಮೂರ್ತಿ, ಜೆ.ಪಿ.ನಗರ, ಮೈಸೂರು.

ಬಸ್ಸಿನಲ್ಲಿ ನಿಯಮ ಉಲ್ಲಂಘಿಸಿದ ನೌಕರರಿಗೆ ಶಿಕ್ಷೆ ಇಲ್ಲವೇ?

ಮಾನ್ಯರೇ,

ಸಾರಿಗೆ ಸಂಸ್ಥೆಯಲ್ಲಿ ಹೆಸರುವಾಸಿಯಾದ ನಮ್ಮ ಕರ್ನಾಟಕದ ಸಾರಿಗೆ ಸಂಸ್ಥೆಯು ಕೂಡ ಅಪಾರವಾದ ಕೊಡುಗೆಯನ್ನು ರಾಜ್ಯಕ್ಕೆ ನೀಡುತ್ತಿದೆ. ನಮ್ಮ ರಾಜ್ಯದ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಪ್ರತಿನಿತ್ಯ ಲಕ್ಷಾಂತರ ಜನರು ಬಳಕೆ ಮಾಡುತ್ತಿದ್ದು, ಜೊತೆಗೆ ಸಾರ್ವಜನಿಕರ ಮದುವೆ ಹಾಗೂ ಶಾಲಾ ಕಾಲೇಜು ಪ್ರವಾಸಕ್ಕೆ ಇಂದಿಗೂ ಸಹ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಬಸ್ಸಿನಲ್ಲಿ ಕೆಲವು ನಿಯಮಗಳನ್ನು ರಾಜ್ಯದ ಕೆಎಸ್‌ಆರ್‌ಟಿಸಿ ಸಾರಿಗೆ ಸಂಸ್ಥೆಯು ಈಗಾಗಲೇ ಅಳವಡಿಸಿದ್ದು, ಇದನ್ನು ಸಾರ್ವಜನಿಕರು ಪಾಲಿಸುವಾಗ ನಗರ ಸಾರಿಗೆ ಬಸ್ಸಿನಲ್ಲಿ ಇಲ್ಲಿಬ್ಬರು ನೌಕರರು ಕರ್ತವ್ಯ ನಿರ್ವಹಿಸುವಾಗಲೇ ಬಸ್ಸಿನ ಸೀಟಿನಲ್ಲಿ ಕುಳಿತು ಮಾದಕ ವಸ್ತು ಸೇವನೆ ಮಾಡಿ ಕಾನೂನಿನ ಉಲ್ಲಂಘನೆ ಮಾಡುತ್ತಿದ್ದಾರೆ. ಇದೇ ರೀತಿ ಮುಂದುವರೆದರೆ ಇಂತಹ ನೌಕರರನ್ನು ನೋಡಿ ಸಾರ್ವಜನಿಕರು ಅಳವಡಿಸಿಕೊಂಡರೆ ಬಸ್ಸಿನಲ್ಲಿ ಮಹಿಳೆಯರು ಮಕ್ಕಳು ಹಿರಿಯರು ಅನೇಕ ಅಧಿಕಾರಿಗಳು ನಿತ್ಯ ಬಸ್ ಬಳಕೆಗಾರರಿಗೆ ತೊಂದರೆಯಾಗುತ್ತದೆ. ಇಂತಹ ತಪ್ಪುಗಳು ಮತ್ತೆ ಆಗದಿರಲು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಕೂಡಲೇ ನೌಕರರಿಗೂ ಬಸ್ಸಿನಲ್ಲಿ ಸಾರ್ವಜನಿಕರಿಗೆ ಅನ್ವಯಯಾಗುವ ಕೇವಲ ನಿರ್ಬಂಧಗಳ ಜೊತೆಗೆ ಕರ್ತವ್ಯ ಸಮಯದಲ್ಲಿ ಬಸ್ಸಿನಲ್ಲಿ ತಪ್ಪು ಮಾಡುವ ನೌಕರರಿಗೆ ಕೂಡಲೇ ಅಧಿಕಾರಿಗಳು ಕ್ರಮ ಜರುಗಿಸಲಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.



ಕೆಬಿಜೆಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಆದರ್ಶ ರಾಜಕಾರಣಿ ಆರ್.ಧ್ರುವನಾರಾಯಣ

ಸಾಮಾನ್ಯವಾಗಿ ನಾನು ಮತ್ತು ನನ್ನ ಸ್ನೇಹಿತರು, ನಮ್ಮ ಬೆಳಗಿನ ವಾಯು ವಿಹಾರದ ವೇಳೆ ಪರಸ್ಪರ ಬೆಳಗಿನ ಶುಭ ಕೋರುತ್ತೇವೆ. ಆದರೆ, ಶನಿವಾರ ಬೆಳಗ್ಗೆ ನನಗೆ ಶುಭಕರವಾಗಿರಲಿಲ್ಲ. ಕಾರಣ, ನಮ್ಮ ಸುದ್ದಿ ಸಂಪಾದಕರಿಂದ ನಾನು ಸ್ವೀಕರಿಸಿದ, ಚಾಮರಾಜನಗರದ ಮಾಜಿ ಲೋಕಸಭಾ ಸದಸ್ಯ ಹಾಗೂ ಹಾಲಿ ಪ್ರದೇಶ ಕಾಂಗ್ರೆಸ್ ಕಾರ್ಯಾಧ್ಯಕ್ಷರಾಗಿದ್ದ ಆರ್.ಧ್ರುವನಾರಾಯಣರವರ ಹಠಾತ್ ನಿಧನದ ಸುದ್ದಿ.

ಅವರೊಂದಿಗೆ ನನಗೆ ಹೆಚ್ಚು ನಿಕಟ ಸಂಪರ್ಕ ಇಲ್ಲದೆ ಹೋದರೂ ಸಹ, ನಾನು ಅವರನ್ನು ಒಂದೆರಡು ಭಾರಿ ಭೇಟಿಯಾಗಿದ್ದೆ ಹಾಗೂ ಒಮ್ಮೆ ಅವರೊಂದಿಗೆ ವೇದಿಕೆಯನ್ನು ಸಹ ಹಂಚಿಕೊಂಡಿದ್ದೆ.

ಕಳೆದ 45 ವರ್ಷಗಳಲ್ಲಿ ನಾನು ಭೇಟಿಯಾದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರಾಜಕಾರಣಿಗಳ ಪೈಕಿ ಅವರು ಅತ್ಯಂತ ಮಾದರಿ ಜನಪ್ರತಿನಿಧಿ, ಶಾಸಕ ಹಾಗೂ ಸಂಸದ ಎಂದರೆ ತಪ್ಪಾಗಲಾರದು. ಅಷ್ಟೇ ಏಕೆ ಮಂತ್ರಿಯಾಗಲು ಅತ್ಯಂತ ಅರ್ಹ ವ್ಯಕ್ತಿ ಎಂಬುದನ್ನು ಕಂಡುಕೊಂಡೆ. ಅವರ ನಡೆ–ನುಡಿ ಯಾವ ರೀತಿ ಇತ್ತೆಂದರೆ ಅವರು ದೇವರ ಪ್ರೀತಿಗೆ ಪಾತ್ರರಾದಂತಹ ವ್ಯಕ್ತಿ ಎಂದು ಹೇಳಬಹುದಾಗಿತ್ತು. ಏಕೆಂದರೆ, ಅವರು ಯಾವುದೇ ಪಕ್ಷಕ್ಕೆ ಸೇರಿರಲಿ, ಎಂದೂ ಅವರ ನಡೆ–ನುಡಿ ಮಾತ್ರ ಬದಲಾಗಿರಲಿಲ್ಲ. 1999 ರಲ್ಲಿ ಒಮ್ಮೆ ಅವರು ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡರು. ಅವರು ತಮ್ಮನ್ನು ದೇವರ ಸೇವಕ– **ಜನತಾ ಜನಾರ್ಧನ** –ಎಂದು ಭಾವಿಸಿ, ಜಾತಿ, ಪಂಥ, ಧರ್ಮ ಯಾವ ತಾರತಮ್ಯವನ್ನು ಮಾಡದೆ ಜನ ಸೇವೆ ಮಾಡಿದರು. ಈ ರೀತಿ ತಾವು ಇತರ ರಾಜಕಾರಿಣಿಗಳಿಗಿಂತ ಭಿನ್ನವೆಂಬುದನ್ನು ಅವರು ತೋರಿಸಿಕೊಟ್ಟರು. ಅವರು ಎಲ್ಲೇ ಸ್ಪರ್ಧಿಸಿರಲಿ, ಸೈದ್ಧಾಂತಿಕ ಕಾರಣಗಳಿಗಾಗಿ ಅವರನ್ನು ಭಿನ್ನ ರೀತಿ ಪರಿಗಣಿಸಬೇಕೆ ಹೊರತು, ಬೇರೆ ಯಾವ ವಿಚಾರಗಳಲ್ಲಿಯೂ ಅವರಿಗೆ ಮತದಾನ ಮಾಡುವುದಕ್ಕೆ ಮತದಾರ ಯೋಚಿಸಬೇಕಾದ ಅಗತ್ಯವಿರಲಿಲ್ಲ. ನಂತರ ಅವರು ಕಾಂಗ್ರೆಸ್‌ಗೆ ಸೇರಿದರು. ಅವರು ಅಲ್ಲಿಂದ ಮುಂದೆ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಎರಡು ಬಾರಿ ಸಂಸದರಾಗಿ ಹಾಗೂ ಸಂತೇಮರಳ್ಳಿ ಮತ್ತು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಿಂದ ಎರಡು ಬಾರಿ ರಾಜ್ಯ ವಿಧಾನಸಭೆಗೆ ಆಯ್ಕೆಗೊಂಡರು.

ಅತ್ಯಂತ ಸ್ವಾರಸ್ಯಕರ ಸಂಗತಿ ಎಂದರೆ 2004ರ ವಿಧಾನಸಭಾ ಚುನಾವಣೆಯಲ್ಲಿ ಅವರು ಸಂತೇಮರಳ್ಳಿ ಕ್ಷೇತ್ರದಲ್ಲಿ ತಮ್ಮ ಹಳೆಯ ಎದುರಾಳಿ ಎ.ಆರ್.ಕೃಷ್ಣಮೂರ್ತಿಯವರ ವಿರುದ್ಧ ಕೇವಲ ಒಂದೇ ಒಂದು ಮತದ ಅಂತರದಲ್ಲಿ ವಿಜಯ ಪತಾಕೆ ಹಾರಿಸಿದರು.

ಸಂಸದನಾಗಿ, ಶಾಸಕನಾಗಿ ಅಥವಾ ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿ ಜನರಿಗೆ ಅವರ ಸಹಾಯ ಅಥವಾ ನೆರವು ಯಾವಾಗಲೂ ಒಂದೇ ಆಗಿತ್ತು. ಕೋವಿಡ್–19 ಸೋಂಕಿನ ಉಪಟಳದ ಸಮಯದಲ್ಲಿ ಚಾಮರಾಜನಗರ ಜಿಲ್ಲೆಯ ಜನರಿಗೆ ಸಮರೋಪಾದಿಯಲ್ಲಿ ಧ್ರುವನಾರಾಯಣ ಮಾಡಿದ ಸೇವೆಯನ್ನು ಅಲ್ಲಿಯ ಜನ ಈಗಲೂ ಸ್ಮರಿಸುತ್ತಾರೆ. ಆ ಸಂಕಷ್ಟ ಸಂದರ್ಭಗಳಲ್ಲಿ, ಅಗತ್ಯವಿದ್ದ ಹಲವಾರು ಜನರಿಗೆ ಆಹಾರ ಚೀಲಗಳನ್ನು (Food-kit) ನೀಡಿದರು. ಶೈಕ್ಷಣಿಕವಾಗಿ, ಅವರು ಒಳ್ಳೆಯ ವಿದ್ಯಾರ್ಹತೆ ಹೊಂದಿದ್ದರು. ಆದ್ದರಿಂದಲೇ, ಅವರು, ಸಮಾಜ ಮತ್ತು ಸಮುದಾಯಕ್ಕೆ ಯಾವ ಭೇದ– ಭಾವವಿಲ್ಲದೆ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ಸಾಧ್ಯವಾಯಿತು.



ಧ್ರುವನಾರಾಯಣರ ಮಾನವತಾವಾದಿ ವ್ಯಕ್ತಿತ್ವವನ್ನು ರುಜುವಾತು ಪಡಿಸಬೇಕೆಂದರೆ, ಕೆಲವು ವರ್ಷಗಳ ಹಿಂದೆ ನನ್ನ ಮಿತ್ರರೊಬ್ಬರು ನನಗೆ ಹೇಳಿದ ಒಂದು ದೃಷ್ಟಾಂತವನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬಯಸುತ್ತೇನೆ. ಧ್ರುವನಾರಾಯಣರವರು ಆಗ ಚಾಮರಾಜನಗರ ಕ್ಷೇತ್ರದ ಲೋಕಸಭಾ ಸದಸ್ಯರಾಗಿದ್ದರು. ಆ ಸಮಯದಲ್ಲಿ ಮೈಸೂರು ಸಹ ಓರ್ವ ಸಂಸದರನ್ನು ಹೊಂದಿತ್ತು. ಆ ವೇಳೆ ಒಬ್ಬಳು ಯುವ ಶಿಕ್ಷಕಿ, ನಗರದ ಶಾಲೆಯೊಂದರಲ್ಲಿ ಕೆಲಸ ಮಾಡುತ್ತಿದ್ದಳು. ದುರದೃಷ್ಟವಶಾತ್, ಆಕೆಯ ಗಂಡ ಮೃತಪಟ್ಟರು. ಅವಳಿಗೆ ಶಾಲೆಗೆ ಹೋಗುವ ಪುಟ್ಟ ಮಗುವೊಂದಿತ್ತು. ಕಾರಣಾಂತರದಿಂದ ಅವಳು ತನ್ನ ಕೆಲಸಕ್ಕೆ ರಾಜೀನಾಮೆ ಕೊಡಬೇಕಾಗಿ ಬಂತು. ಆ ವಿಧವೆ ತನ್ನ ಮಗುವನ್ನು ಮೈಸೂರಿನ ಡಿಎಫ್‌ಆರ್‌ಎಲ್ ಪಕ್ಕದಲ್ಲಿರುವ ಕೇಂದ್ರಿಯ ವಿದ್ಯಾಲಯದಲ್ಲಿ ಓದಿಸಬೇಕೆಂದು ಬಯಸಿದಳು. ಆದರೆ ಅಸಹಾಯಕಳಾದ ಅವಳು ತಾನು ಹಿಂದೆ ಕೆಲಸ ಮಾಡುತ್ತಿದ್ದ ಶಾಲೆಯ ಪ್ರಾಂಶುಪಾಲರನ್ನು, ಕೇಂದ್ರೀಯ ವಿದ್ಯಾಲಯದಲ್ಲಿ ಎಂಪಿ ಕೋಟಾದಡಿ ಮೈಸೂರು ಸಂಸದರಿಗೆ ಹೇಳಿ ತನ್ನ ಮಗುವಿಗೆ ಒಂದು ಸೀಟನ್ನು ಕೊಡಿಸುವಂತೆ ಕೋರಿಕೊಂಡಳು.

ಸಾಮಾನ್ಯವಾಗಿ ಪ್ರತೀ ಸಂಸದರಿಗೆ ಇಂತಹ ಕೇಂದ್ರೀಯ ವಿದ್ಯಾಲಯಗಳಲ್ಲಿ ಕೋಟಾ ಇದ್ದೇ ಇರುತ್ತದೆ. ಹಾಗಾಗಿ ಆ ವಿಧವೆಯ ಕಷ್ಟವನ್ನು ಅರಿತಿದ್ದಂತಹ ಪ್ರಾಂಶುಪಾಲರು, ಮೈಸೂರಿನ ಸಂಸದರ ಬಳಿ ಹೋಗಿ ಆ ವಿಧವೆಯ ಮಗುವಿನ ಸೀಟ್ ವಿಷಯವಾಗಿ ಪ್ರಸ್ತಾಪಿಸಿದರು. ಅದಕ್ಕೆ ಆ ಸಂಸದರ ಪ್ರತಿಕ್ರಿಯೆ, ಒಂದು ರೀತಿ ಸಮಾಜ ಹಾಗೂ ಮನುಷ್ಯತ್ವ ವಿರೋಧಿಯಾಗಿತ್ತು.

ಅವರು, ಪ್ರಾಂಶುಪಾಲರನ್ನು ತೀವ್ರ ತರಾಟೆಗೆ ತೆಗೆದುಕೊಂಡು "ನೀವು ಸಮಯ ಮೀರಿ ಬಂದಿದ್ದೀರಿ. ನಾನು ನನ್ನ ಎಲ್ಲಾ ಕೋಟಾವನ್ನು ಈಗಾಗಲೇ ನೀಡಿಯಾಗಿದೆ" ಎಂದು ದರ್ಪದಿಂದಲೇ ಹೇಳಿ ಕಳಿಸಿದರು. ಆ ಪ್ರಾಂಶುಪಾಲರು ಸಂಸದರ ಈ ನಿರಾಶದಾಯಕ ಉತ್ತರವನ್ನು ವಿಧವೆಗೆ ಮುಟ್ಟಿಸಿ, ಬೇರೆ ಮಾರ್ಗ ಕಂಡುಕೊಳ್ಳುವಂತೆ ಹೇಳಿದರು.

ಈ ಮಧ್ಯೆ ಪ್ರಾಂಶುಪಾಲರು ಈ ವಿಷಯವನ್ನು ಸಾಂದರ್ಭಿಕವಾಗಿ ತಮ್ಮ ಸ್ನೇಹಿತರೊಬ್ಬರೊಂದಿಗೆ ಹಂಚಿಕೊಂಡಾಗ ಅವರು, ಒಮ್ಮೆ ಸಂಸದ ಆರ್. ಧ್ರುವನಾರಾಯಣ ಅವರನ್ನು ಸಂಪರ್ಕಿಸುವಂತೆ ಸಲಹೆ ನೀಡಿ, ಅವರು ಖಂಡಿತ ಸಹಾಯ ಮಾಡಬಹುದೆಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದರು.

ಆದರೆ, ಧ್ರುವನಾರಾಯಣ ಚಾಮರಾಜನಗರದ ಸಂಸದರು. ನಮಗೆ ಸೀಟ್ ಬೇಕಿರುವುದು ಮೈಸೂರು ಕೇಂದ್ರೀಯ ವಿದ್ಯಾಲಯದಲ್ಲಿ. ಇದು ಮೈಸೂರು ಸಂಸದರ ವ್ಯಾಪ್ತಿಗೆ ಬರುತ್ತದೆ ಎಂದು ಪ್ರಾಂಶುಪಾಲರು ಪ್ರಶ್ನಿಸಿದಾಗ, ಅದಕ್ಕೆ ಅವರ ಸ್ನೇಹಿತರು ಪ್ರಯತ್ನಪಡುವುದರಲ್ಲಿ ತಪ್ಪೇನಿಲ್ಲ ಎಂದು ಹೇಳಿ, ಧ್ರುವನಾರಾಯಣ ಅವರು ಪರಿಸ್ಥಿತಿಯನ್ನು ತುಂಬಾ ಚೆನ್ನಾಗಿ ಅರ್ಥ ಮಾಡಿಕೊಂಡು ಸಹಾಯ ಮಾಡುವಂತಹ ಸಹೃದಯ ವ್ಯಕ್ತಿ ಎಂದು ಹೇಳಿದರು.

ಇದೂ ಒಂದು ಪ್ರಯತ್ನ ಮಾಡಿ ನೋಡೋಣವೆಂದು ನಿರ್ಧರಿಸಿ ಪ್ರಾಂಶುಪಾಲರು, ಧ್ರುವನಾರಾಯಣರನ್ನು ಸಂಪರ್ಕಿಸಿದರು. ಸಂಸದರು, ಪ್ರಾಂಶುಪಾಲರಿಂದ ವಿಧವೆ ಹಾಗೂ ಆಕೆಯ ಮಗುವಿನ ಪೂರ್ಣ ಮಾಹಿತಿ ಪಡೆದುಕೊಂಡು, ಅವರಿಗೆ ಸಹಾಯ ಮಾಡುವ ಭರವಸೆಯನ್ನೂ ನೀಡಿದರು.

ಇಷ್ಟಾಗಿ 15 ದಿನಗಳಾದರೂ ಯಾವೊಂದು ಮಾಹಿತಿಯೂ ಬರಲಿಲ್ಲ. ಕೊನೆಗೆ ಪ್ರಾಂಶುಪಾಲರು, ಧ್ರುವನಾರಾಯಣ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿದರು. ಆಗ ದೆಹಲಿಯಲ್ಲಿದ್ದ ಸಂಸದರು, ತಾವು ಈ ವಿಷಯಕ್ಕೆ ಸಂಬಂಧಪಟ್ಟ ಕಚೇರಿಯನ್ನು ಈಗಾಗಲೇ ಸಂಪರ್ಕಿಸಿದ್ದು, ಮಗುವಿಗೆ ಪ್ರವೇಶ ಲಭಿಸಿದೆ ಎಂಬುದನ್ನು ಖಚಿತಪಡಿಸಿದರು.

ಈ ಘಟನೆಯನ್ನು ಕೇಳಿದ ನಂತರ, ಇದು ಓರ್ವ ಆದರ್ಶ, ಮಾದರಿ ಜನಪ್ರತಿನಿಧಿಯ ಕಾರ್ಯವೈಖರಿಗೆ ಉದಾಹರಣೆ ಎಂದು ನನಗನಿಸಿತು. ಇಂತಹವರು ಜನರ ಒಳಿತಿಗಾಗಿ ಕೆಲಸ ಮಾಡುವವರೇ ವಿನಹ ವೈಯಕ್ತಿಕ ಲಾಭಕ್ಕಾಗಿ ಅಲ್ಲ. **ಈ ಒಂದು ಘಟನೆಯು ಓರ್ವ ಭ್ರಷ್ಟಾಚಾರಿ ಸಂಸದ ಮತ್ತು ಪ್ರಾಮಾಣಿಕ ಸಂಸದನ ನಡುವೆ ಇರುವ ವ್ಯತ್ಯಾಸವನ್ನು ತೋರಿಸುತ್ತದೆ. ಮೈಸೂರಿನ ಸಂಸದರಲ್ಲದೇ ಹೋದರೂ ಸಹ, ಧ್ರುವನಾರಾಯಣರವರಿಗೆ ಅದು ಮುಖ್ಯ ಕಾರಣವಾಗಲಿಲ್ಲ** ಅಥವಾ ಅವರಿಗೆ ಸುಳ್ಳು ಹೇಳುವ ಅಗತ್ಯವೂ ಇರಲಿಲ್ಲ. ಅವರು ಓರ್ವ ಅಸಹಾಯಕ ವಿಧವೆಯನ್ನು ನೋಡಿದರು ಹಾಗೂ ಅವರಲ್ಲಿನ ಅಂತಃಕರಣ, ಯುವತಿಗೆ ಸಹಾಯ ಮಾಡಲು ಪ್ರೇರೇಪಿಸಿತು. ಇದುವೆ **ಪ್ರಜಾಪ್ರಭುತ್ವದ ಮಹತ್ವ ಹಾಗೂ ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಮಾನದಂಡ.**

ಆದ್ದರಿಂದಲೇ, "ಮತದಾನ ಮಾಡುವುದಕ್ಕೆ ಮುಂಚೆ ಯೋಚಿಸಿ" ಎಂದು ಹೇಳುವುದು. ಮತದಾರರು, ಸ್ಪರ್ಧಿಸುವ ಎಲ್ಲಾ ಅಭ್ಯರ್ಥಿಗಳಿಂದ ಹಣ ಪಡೆಯಬಹುದು. ಆದರೆ, ಮತದಾನ ಮಾಡುವಾಗ, ಧ್ರುವನಾರಾಯಣರಂತಹ ಉತ್ತಮ ಮತ್ತು ಯೋಗ್ಯ ಅಭ್ಯರ್ಥಿಗೆ, ಅವರು ಯಾವುದೇ ಪಕ್ಷಕ್ಕೇ ಸೇರಿದ್ದರೂ ಮತ ಹಾಕುವುದು ಒಳ್ಳೆಯದು.

ಮೈಸೂರಿನಲ್ಲಿ ಧ್ರುವನಾರಾಯಣರವರ ಹಠಾತ್ ನಿಧನ ಖಂಡಿತವಾಗಿಯೂ ಚಾಮರಾಜನಗರ ಮಾತ್ರವಲ್ಲ ರಾಜ್ಯ ರಾಜಕಾರಣಕ್ಕೆ ಭರಿಸಲಾಗದ ನಷ್ಟವಾಗಿದೆ. ಅವರು ಶಾಸಕ, ಸಂಸದನಾಗಿ ಚಾಮರಾಜನಗರ ಜಿಲ್ಲೆಯ ಜನರ ನಿಜವಾದ ಸೇವಕನಂತೆ ಪ್ರತಿನಿಧಿಸಿದ್ದರು. ಇಂತಹವರ ಸಂತತಿ ಹೆಚ್ಚಲಿ. ಅವರ ಆತ್ಮಕ್ಕೆ ಚಿರಶಾಂತಿ ಲಭಿಸಲಿ.

(ಮೂಲ ಇಂಗ್ಲಿಷ್ ಲೇಖನದ ಕನ್ನಡ ಅನುವಾದ)

Voice @starofmysore.com



ಮೈಸೂರಿನ ದೇವರಾಜ ಮೊಹಲ್ಲಾ ನಿವಾಸಿಗಳು ದಿವಂಗತ ಆರ್.ಧ್ರುವನಾರಾಯಣ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಮಾಜಿ ಶಾಸಕ ವಾಸು, ನಗರ ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ, ರಾಜೀವ್, ಡಾ.ಆನಂದ್, ಮಾದೇವ್, ಜ್ಞಾನೇಶ್, ಮಂಜುಳಾ, ರಾಜೇಶ್, ರೈಲ್ವೆ ಶಿವಕುಮಾರ್, ಮಂಜು, ಪ್ರಶಾಂತ್ ಮತ್ತಿತರರು ಧ್ರುವನಾರಾಯಣ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಪಾರ್ಥಿವ ಶರೀರ ಸಾಗಿಸಲು ಸೂಕ್ತ ವಾಹನ ವ್ಯವಸ್ಥೆ ಮಾಡದ್ದಕ್ಕೆ ಧ್ರುವ ಬೆಂಬಲಿಗರ ಆಕ್ರೋಶ

ಮೈಸೂರು, ಮಾ.11–ಧ್ರುವನಾರಾಯಣ್ ಅವರ ಪಾರ್ಥಿವ ಶರೀರವನ್ನು ಕೊಂಡೊಯ್ಯಲು ವಿಶೇಷ ವಾಹನ ವ್ಯವಸ್ಥೆ ಮಾಡಿಲ್ಲ ಎಂದು ಅವರ ಬೆಂಬಲಿಗರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ವಿರುದ್ಧ ಘೋಷಣೆ ಕೂಗಿದ ಘಟನೆ ಧ್ರುವನಾರಾಯಣ್ ಅವರ ನಿವಾಸ ಬಳಿ ನಡೆಯಿತು.


ಇಂದು ನಿಧನರಾದ ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್ ಅವರ ಪಾರ್ಥಿವ ಶರೀರವನ್ನು ವಿಜಯನಗರದಲ್ಲಿರುವ ಅವರ ನಿವಾಸದಿಂದ ನಗರದ ಕಾಂಗ್ರೆಸ್ ಕಚೇರಿಗೆ ಮೆರವಣಿಗೆ ಮೂಲಕ ತರಲು ವಿಶೇಷ ವಾಹನ ವ್ಯವಸ್ಥೆ ಮಾಡಿಲ್ಲ ಎಂದು ಅವರ ಬೆಂಬಲಿಗರು ಕಾಂಗ್ರೆಸ್ ಮುಖಂಡರ ವಿರುದ್ಧ ಘೋಷಣೆಗಳನ್ನು ಕೂಗಿದರು. ಮೊದಲು ಚಿಕ್ಕ ಅಂಬುಲೆನ್ಸ್ ವ್ಯವಸ್ಥೆ ಮಾಡಲಾಗಿತ್ತು. ಇದನ್ನು ಕಂಡ ಅವರ ಅಭಿಮಾನಿಗಳು, ಬೆಂಬಲಿಗರು ಧೀಮಂತ ನಾಯಕನಿಗೆ ವಿಶೇಷ ವಾಹನ ವ್ಯವಸ್ಥೆ ಮಾಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ವಿರುದ್ಧವೂ ಘೋಷಣೆಗಳು ಕೇಳಿ ಬಂದವು. ನಂತರ ಸಿದ್ದರಾಮಯ್ಯ ಅವರು ಅಭಿ



ಮಾನಿಗಳು, ಬೆಂಬಲಿಗರ ಮನವೊಲಿಸಲು ಮುಂದಾದರು.

ನಂತರ ಶಾಸಕ ಅನಿಲ್ ಚಿಕ್ಕಮಾದು ಅವರು ಬೆಂಗಳೂರಿಗೆ ಕರೆ ಮಾಡಿ ವಿಶೇಷ ವಾಹನ ವ್ಯವಸ್ಥೆ ಮಾಡಿದರು. ಬೆಂಗಳೂರಿನಿಂದ ಬಂದ ವಿಶೇಷ ವಾಹನದ ಮೂಲಕ ಧ್ರುವನಾರಾಯಣ್ ಅವರ ಪಾರ್ಥಿವ ಶರೀರವನ್ನು ಮೊದಲು ನಗರ ಕಾಂಗ್ರೆಸ್ ಕಚೇರಿಗೆ ತರಲಾಯಿತು. ತದನಂತರ ಜೆ.ಎಲ್.ಬಿ. ರಸ್ತೆ ಮೂಲಕ ಸಾಗಿ ಅಶೋಕಪುರಂ ಮುಖ್ಯ ರಸ್ತೆ ಮೂಲಕ ನಂಜನಗೂಡು ಮಾರ್ಗವಾಗಿ ಚಾಮರಾಜನಗರ ಕಡೆ ಸಾಗಿತು.

ಒತ್ತಡದ ರಾಜಕೀಯಕ್ಕೆ ಧ್ರುವ ಬಲಿಯಾದರು



ಕೊಳ್ಳೇಗಾಲ ಶಾಸಕ ಮಹೇಶ್ ಹೇಳಿಕೆ

ಮೈಸೂರು, ಮಾ.11– ಒತ್ತಡದ ರಾಜಕೀಯಕ್ಕೆ ಆರ್.ಧ್ರುವನಾರಾಯಣ್ ಬಲಿಯಾಗಿದ್ದಾರೆ ಎಂದು ಕೊಳ್ಳೇಗಾಲ ಶಾಸಕ ಎನ್.ಮಹೇಶ್ ಹೇಳಿದ್ದಾರೆ.

ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಅವರು, ಒತ್ತಡದ ರಾಜಕೀಯ ಡರ್ಟಿ ಪಾಲಿಟಿಕ್ಸ್. ವಿಶೇಷವಾಗಿ ದಲಿತ ಸಮುದಾಯದ ರಾಜ ಕಾರಣಿಗಳಿಗೆ ಈ ಮಾನಸಿಕ ಒತ್ತಡ ನಿಭಾಯಿ ಸುವುದು ಕಷ್ಟ, ಅದು ಎಂತಹ ಅನಾಹುತ ಮಾಡುತ್ತದೆ ಎಂಬುದಕ್ಕೆ ಧ್ರುವನಾರಾಯಣ್ ಅವರ ಸಾವೇ ಸಾಕ್ಷಿ ಎಂದರು.

ಈ ಹಿನ್ನೆಲೆಯಲ್ಲಿ ಮತದಾರರು, ಕಾರ್ಯಕರ್ತರು ಹಾಗೂ ಪಕ್ಷಗಳಿಗೆ ಮನವಿ ಮಾಡುತ್ತೇನೆ ಅನಗತ್ಯ ಒತ್ತಡವನ್ನು ಯಾವ ರಾಜಕಾರಣಿ ಮೇಲೂ ಹಾಕಬೇಡಿ. ಅದರಲ್ಲೂ ದಲಿತ ರಾಜಕಾರಣಿಗಳಿಗೆ ಮಾನಸಿಕ ಒತ್ತಡ ವನ್ನು ತಡೆದುಕೊಳ್ಳುವ ಶಕ್ತಿ ಇರುವುದಿಲ್ಲ. ಆದರೆ, ದುರಂತ ಎಂದರೆ ನಾವು ಅನಿವಾರ್ಯವಾಗಿ ಈ ರೀತಿ ಒತ್ತಡಕ್ಕೆ ಒಳಗಾಗುತ್ತಿದ್ದೇವೆ. ಅದು ಧ್ರುವ ನಾರಾಯಣ್ ಅವರನ್ನು ಬಲಿ ತೆಗೆದುಕೊಂಡಿದೆ ಎಂದು ಅಭಿಪ್ರಾಯಿಸಿದರು.

ಎನ್.ಮಹೇಶ್ ಮಾತಿಗೆ ಟಾಂಗ್ ನೀಡುವಂತೆ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಪ್ರತಿಕ್ರಿಯಿಸಿದ್ದು, ಸಾರ್ವಜನಿಕ ಜೀವನವೇ ಒತ್ತಡದಲ್ಲಿರುತ್ತದೆ. ಆ ಒತ್ತಡವನ್ನು ನಿಭಾಯಿಸಿಕೊಂಡು ಅವರು ಕೆಲಸ ಮಾಡುತ್ತಿದ್ದರು. ಆದ್ದರಿಂದ ಅದನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು ಎಂದಿದ್ದಾರೆ.

ಸೋನಿಯಾ ಕಂಬನಿ; ಪತ್ನಿಗೆ ಸಾಂತ್ವನ

ಮೈಸೂರು, ಮಾ.11– ಆರ್.ಧ್ರುವನಾರಾಯಣ ಅವರ ಅಕಾಲಿಕ ನಿಧನಕ್ಕೆ ತೀವ್ರ ಸಂತಾಪ ಸೂಚಿಸಿರುವ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ



ಅವರು, ಧ್ರುವನಾರಾಯಣ್ ಅವರ ಧರ್ಮಪತ್ನಿ ವೀಣಾ ನಾರಾಯಣ್ ಅವರಿಗೆ ಕಳಿಸಿರುವ ಶೋಕ ಸಂದೇಶದಲ್ಲಿ ಸಾಂತ್ವನ ಹೇಳಿದ್ದಾರೆ.

'ನಿಮ್ಮ ಪ್ರೀತಿಯ ಪತಿ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಾಧ್ಯಕ್ಷ ಶ್ರೀ ಧ್ರುವನಾರಾಯಣ್ ಅವರ ಅಕಾಲಿಕ ನಿಧನದ ಸುದ್ದಿ ತಿಳಿದು ನನಗೆ ಅತೀವ ದುಃಖವಾಗಿದೆ. ತಮ್ಮ ರಾಜಕೀಯ ಜೀವನದುದ್ದಕ್ಕೂ ಶ್ರೀ ಧ್ರುವ ನಾರಾಯಣ ಅವರು ಅತ್ಯಂತ ನಿಷ್ಠಾವಂತ, ಪ್ರಾಮಾಣಿಕ ಮತ್ತು ಕಠಿಣ ಪರಿಶ್ರಮಿ ಕಾಂಗ್ರೆಸ್ ಕಾರ್ಯಕರ್ತರಾಗಿದ್ದರು. ಪಕ್ಷ ಮತ್ತು ರಾಜ್ಯಕ್ಕಾಗಿ ಸಮರ್ಪಣಾ ಭಾವದಿಂದ ಸೇವೆ ಸಲ್ಲಿಸಿದರು. ಜನರ ಸಮಸ್ಯೆಗಳಿಗೆ ಸ್ಪಂದಿಸಲು ಸದಾ ಸಿದ್ಧರಾಗಿದ್ದರು. ಕಾಂಗ್ರೆಸ್ ಪಕ್ಷ ಯಾವಾಗಲೂ ಅವರ ಸ್ಮರಣೆಯನ್ನು ಗೌರವಿಸುತ್ತದೆ. ಅವರ ಅನೇಕ ಕೊಡುಗೆ ಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತದೆ. ಈ ದುಃಖದ ಸಮಯದಲ್ಲಿ ನನ್ನ ಆಲೋಚನೆ ಹಾಗೂ ಪ್ರಾರ್ಥನೆ ನಿಮ್ಮೊಂದಿಗೆ ಮತ್ತು ನಿಮ್ಮ ಕುಟುಂಬದೊಂದಿಗೆ ಇವೆ' ಎಂದು ಧೈರ್ಯ ತುಂಬಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮಡಿಕೇರಿಯಲ್ಲಿ ಜನಾಶೀರ್ವಾದ ಕೋರಿದ 'ವಿಜಯ ಸಂಕಲ್ಪ ಯಾತ್ರೆ'

ನೂರಾರು ಕಾರ್ಯಕರ್ತರು ಭಾಗಿ, ಕಾಂಗ್ರೆಸ್ ವಿರುದ್ಧ ಮುಖಂಡರ ವಾಗ್ದಾಳಿ





ಪೂರ್ಣ ಬಹುಮತ ನೀಡಿ: ಈಶ್ವರಪ್ಪ

ಜನರಲ್ ಕೆ.ಎಸ್.ತಿಮ್ಮಯ್ಯ ವೃತ್ತದಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ, ವಿಜಯ ಸಂಕಲ್ಪ ರಥದಿಂದ ಮಾತನಾಡಿದ ಪಕ್ಷದ ಮುಖಂಡ ಕೆ.ಎಸ್.ಈಶ್ವರಪ್ಪ, ಇಲ್ಲಿಯವರೆಗೆ ರಾಜ್ಯದಲ್ಲಿ ಬಿಜೆಪಿ ಪೂರ್ಣ ಬಹುಮತದ ಸರ್ಕಾರ ರಚಿಸಲು ಸಾಧ್ಯವಾಗಿಲ್ಲ. ಈ ಬಾರಿ 150 ಸ್ಥಾನಗಳನ್ನು ಪಡೆದು ಪೂರ್ಣ ಬಹುಮತದೊಂದಿಗೆ ಸರ್ಕಾರ ರಚನೆಗೆ ಜನತೆ ಬಿಜೆಪಿಯನ್ನು ಆಶೀರ್ವದಿಸುವಂತೆ ಮನವಿ ಮಾಡಿದರು.

ಈಗಾಗಲೇ ರಾಜ್ಯದ ಜನತೆಯ ಬೆಂಬಲ ಪಕ್ಷದ ಮೇಲಿದ್ದು, ಬಿಜೆಪಿಯ ಗೆಲುವು ನಿರ್ಧಾರವಾಗಿದೆ ಎಂದು ತಿಳಿಸಿದ ಈಶ್ವರಪ್ಪ, ಕಾಂಗ್ರೆಸ್ ಪಕ್ಷದ ರಾಹುಲ್ ಗಾಂಧಿ ಅವರು ಭಾರತ್ ಜೋಡೋ ಯಾತ್ರೆ ಮಾಡಿದ್ದಾರೆ. ಅವರು ಈ ಹಿಂದೆ ಎಲ್ಲೆಲ್ಲಿ ಇಂತಹ ಯಾತ್ರೆ ಮಾಡಿದ್ದಾರೋ ಅಲ್ಲೆಲ್ಲ ಕಾಂಗ್ರೆಸ್ ಪರಾಭವಗೊಂಡಿದೆ. ಉತ್ತರ ಪ್ರದೇಶದಲ್ಲಿ ಸೋತ ಕಾಂಗ್ರೆಸ್, ಈಶಾನ್ಯ ರಾಜ್ಯಗಳ ಚುನಾವಣೆಯಲ್ಲೂ ಪರಾಭವಗೊಂಡಿದೆ. ಹೀಗಿರುವಾಗ ಕಾಂಗ್ರೆಸ್ ಪಕ್ಷ ಎಲ್ಲಿದೆ ಎಂದು ವ್ಯಂಗ್ಯವಾಡಿದರು.

ಮಡಿಕೇರಿ,ಮಾ.11– ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಬಿಜೆಪಿ 'ವಿಜಯ ಸಂಕಲ್ಪ ಯಾತ್ರೆ'ಯ ಮೆರವಣಿಗೆ ಪಕ್ಷದ ನೂರಾರು ಕಾರ್ಯಕರ್ತರ ಸಮ್ಮುಖದಲ್ಲಿ ನಡೆಯಿತಲ್ಲದೇ, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಜನಾಶೀರ್ವಾದವನ್ನು ಕೋರಲಾಯಿತು. ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ, ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ, ಶಾಸಕರುಗಳಾದ ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ ಅವರನ್ನು ಒಳಗೊಂಡ ವಿಜಯ ಸಂಕಲ್ಪ ರಥಯಾತ್ರೆ ನಗರದ ಮಾರುಕಟ್ಟೆ ಬಳಿಯ ಚೌಡೇಶ್ವರಿ ದೇವಸ್ಥಾನದಿಂದ ಜನರಲ್ ಕೆ.ಎಸ್.ತಿಮ್ಮಯ್ಯ ವೃತ್ತದವರೆಗೆ ಸಾಗಿತು.

'ಸಿಎಂ' ಸ್ಥಾನಕ್ಕೆ ಕದನ: ಅಧಿಕಾರವಿಲ್ಲದೆ ಇರುವ ಹಂತದಲ್ಲೂ ಪ್ರಸ್ತುತ ಕಾಂಗ್ರೆಸ್ ಪಕ್ಷದ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ಮುಖ್ಯಮಂತ್ರಿ ಸ್ಥಾನಕ್ಕೆ ಪೈಪೋಟಿ ನಡೆಯುತ್ತಿದೆ. ಡಿ.ಕೆ. ಶಿವಕುಮಾರ್ ಅವರು, ಒಕ್ಕಲಿಗ ಸಮೂಹಕ್ಕೆ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಕೇಳುತ್ತಿದ್ದಾರೆ. ಸಿದ್ದರಾಮಯ್ಯ ಅವರು ತಮ್ಮನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಪರಿಗಣಿಸುವ ಬೇಡಿಕೆಯನ್ನು ಮಂಡಿಸುವ ಮೂಲಕ ಜಾತಿಯ ವಿಷ ಬೀಜವನ್ನು ಬಿತ್ತುತ್ತಿರುವುದಾಗಿ ಆರೋಪಿಸಿದರು. ಬಿಜೆಪಿ ಪಕ್ಷ ಜಾತಿ ರಾಜಕಾರಣಕ್ಕೆ ಬದಲಾಗಿ ರಾಷ್ಟ್ರೀಯ ಚಿಂತನೆ ಮತ್ತು ಅಭಿವೃದ್ಧಿಯನ್ನಷ್ಟೆ ಮುಖ್ಯವಾಗಿರಿಕೊಂಡು ಜನತೆಯ ಮುಂದೆ ಬರುತ್ತಿರುವುದಾಗಿ ಸ್ಪಷ್ಟಪಡಿಸಿದರು.

ವಿರೋಧ ಪಕ್ಷವಿಲ್ಲ: ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ಮಾತನಾಡಿ, ರಾಜ್ಯದ ಬಿಜೆಪಿ ಸರ್ಕಾರ ಕೊಡಗಿನ ಎಲ್ಲಾ ಸಮಸ್ಯೆಗಳಿಗೆ ಸೂಕ್ತ ಸ್ಪಂದನವನ್ನು ನೀಡುತ್ತಿದೆ. ಅಭಿವೃದ್ಧಿಯ ಮೂಲಕ ಹೊಸ ಕೊಡಗಿನ ನಿರ್ಮಾಣಕ್ಕೆ ಶ್ರಮಿಸುವ ಮೂಲಕ, ವೀರಯೋಧರನ್ನು ರಾಷ್ಟ್ರಕ್ಕೆ ನೀಡುತ್ತಾ ಬಂದಿರುವ ಕೊಡಗಿನ ಋಣ ತೀರಿಸುವ ಪ್ರಯತ್ನವನ್ನು ಪಕ್ಷ ಮಾಡಿದೆ ಎಂದು ಹೇಳಿದರು. ವಿರೋಧ ಪಕ್ಷವಾದ ಕಾಂಗ್ರೆಸ್‌ನಂತೆ ಭರವಸೆಯ ರಾಜಕಾರಣದ ಬದಲಾಗಿ, ಬಿಜೆಪಿ ವಿಶ್ವಾಸದ ರಾಜಕಾರಣವನ್ನು ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಕೊಡಗಿನಲ್ಲಿ ವಿರೋಧ ಪಕ್ಷವೇ ಇಲ್ಲದ ರೀತಿಯಲ್ಲಿ ಬಿಜೆಪಿ ಬೆಳೆದಿದೆ ಎಂದು ಸ್ಪಷ್ಟಪಡಿಸಿದರು.

ಶಾಸಕರುಗಳಾದ ಕೆ.ಜಿ.ಬೋಪಯ್ಯ ಮತ್ತು ಅಪ್ಪಚ್ಚು ರಂಜನ್ ಅವರುಗಳು ಅಭಿವೃದ್ಧಿಯ ರಾಜಕಾರಣವನ್ನು ಮಾಡುತ್ತಾ ಬಂದಿದ್ದು, ತಾನು ಮುಖ್ಯಮಂತ್ರಿಯಾಗಿದ್ದಾಗ, ಯಡಿಯೂರಪ್ಪ ಮತ್ತು ಈಗಿನ ಬೊಮ್ಮಾಯಿ ಅವರ ಸರ್ಕಾರದಲ್ಲಿ ಇತರೆ ಯಾವುದೇ ಜಿಲ್ಲೆಗೆ ನೀಡದಷ್ಟು ಹೆಚ್ಚಿನ ವಿಶೇಷ ಅನುದಾನವನ್ನು ಕೊಡಗಿಗೆ ಒದಗಿಸಲಾಗಿದೆ. ಜನತೆ ಅಭಿವೃದ್ಧಿಯ ಚಿಂತನೆಯಡಿ ಬಿಜೆಪಿಯನ್ನು ಮತ್ತೆ ಆಶೀರ್ವದಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ, ಎಂಎಲ್‌ಸಿ ಸುಜಾ ಕುಶಾಲಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ, ವಿರಾಜಪೇಟೆ ಕ್ಷೇತ್ರದ ಉಸ್ತುವಾರಿ ಪ್ರತಾಪ ಸಿಂಹ ನಾಯಕ್, ಕರಾವಳಿ ಪ್ರಾಧಿಕಾರದ ಅಧ್ಯಕ್ಷ ತಿಮ್ಮಯ್ಯ ಶೆಟ್ಟರು, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ಎಂಎಲ್‌ಸಿ ಎಸ್.ಜಿ. ಮೇದಪ್ಪ, ಮಡಿಕೇರಿ ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ರಾಜ್ಯ ಸಂಚಾಲಕ ಉದಯ ಕುಮಾರ್ ಶೆಟ್ಟರು, ಪಕ್ಷದ ಪ್ರಮುಖರಾದ ರಾಜೇಂದ್ರ, ಮಹೇಶ್ ಜೈನಿ ಮೊದಲಾದವರಿದ್ದರು.

ಧ್ರುವನಾರಾಯಣ್ ನಿಧನಕ್ಕೆ ಕೊಡಗು ಜಿಲ್ಲಾ ಕಾಂಗ್ರೆಸ್ ಸಂತಾಪ

ಮಡಿಕೇರಿ,ಮಾ.11– ಕೆಪಿಸಿಸಿ ಕಾರ್ಯಾಧ್ಯಕ್ಷ, ಮಾಜಿ ಶಾಸಕ, ಮಾಜಿ ಸಂಸದ ಹಾಗೂ ಪಕ್ಷದ ಕೊಡಗು ಜಿಲ್ಲಾ ಉಸ್ತುವಾರಿ ಆರ್.ಧ್ರುವನಾರಾಯಣ್ ಅವರ ನಿಧನಕ್ಕೆ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿ ಸಂತಾಪ ವ್ಯಕ್ತಪಡಿಸಿದೆ.



ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಪ್ರಚಾರ ಸಮಿತಿಯ ಅಧ್ಯಕ್ಷ ಟಿ.ಪಿ.ರಮೇಶ್ ಅವರ ನೇತೃತ್ವದಲ್ಲಿ ನಡೆದ ಸಂತಾಪ ಸಭೆಯಲ್ಲಿ ಧ್ರುವನಾರಾಯಣ್ ಅವರ ಭಾವಚಿತ್ರಕ್ಕೆ ಪ್ರಮುಖರು ಪುಷ್ಪ ನಮನ ಸಲ್ಲಿಸಿದರು. ಬಳಿಕ ಮೌನಾಚರಣೆಯ ಮೂಲಕ ಶಾಂತಿ ಕೋರಿದರು.

ಟಿ.ಪಿ.ರಮೇಶ್, ಗೌರವ ಕಾರ್ಯದರ್ಶಿ ವಿ.ಪಿ.ಸುರೇಶ್, ಮಡಿಕೇರಿ ಬ್ಲಾಕ್ ಅಧ್ಯಕ್ಷ ಹೆಚ್.ಎ.ಹಂಸ ಹಾಗೂ ನಗರ ಕಾಂಗ್ರೆಸ್ ಅಧ್ಯಕ್ಷ ಬಿ.ವೈ.ರಾಜೇಶ್ ಅವರುಗಳು ಹಿರಿಯ ನಾಯಕ ಧ್ರುವನಾರಾಯಣ್ ಅವರ ವ್ಯಕ್ತಿತ್ವ ಕುರಿತು ಸ್ಮರಿಸಿದರು. ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಸುರಯ್ಯ ಅಬ್ರಾರ್, ನಗರಾಧ್ಯಕ್ಷೆ ಹೊಟ್ಟೆಯಂಡ ಫ್ಯಾನ್ಸಿ ಬೆಳ್ಯಪ್ಪ, ಪ್ರಮುಖರಾದ ಕಾನೆಹಿತ್ಲು ಮೊಣ್ಣಪ್ಪ, ಟಿ.ಹೆಚ್.ಉದಯಕುಮಾರ್, ಪ್ರಕಾಶ್ ಆಚಾರ್ಯ, ಜಗದೀಶ್, ಮುದ್ದು ರಾಜು, ಕೆ.ಜಿ.ಪೀಟರ್, ಪ್ರೇಮ ಕೃಷ್ಣಪ್ಪ, ಕೆ.ಆರ್.ದಿನೇಶ್, ಕಲೀಲ್ ಬಾಷಾ, ಎಂ.ಇ.ಫಾರೂಖ್, ರಿಯಾಬ್‌ವುದ್ದೀನ್, ಆರ್.ಪಿ.ಚಂದ್ರಶೇಖರ್, ಎಂ.ಎನ್.ರವೂಫ್, ಎಂ.ಜಿ.ನಾಗೇಶ್, ಪುಷ್ಪ ಪೂಣಚ್ಚ, ಸದಾ ಮುದ್ದಪ್ಪ, ದೋಲ್ಪಾಡಿ ಯಶೋಧರ್, ಹೆಚ್.ಇ.ಸನ್‌ವುದ್ದೀನ್, ಸಂಶ್‌ವುದ್ದೀನ್, ಎಂ.ಎಂ.ಹನೀಫ್, ನಾಗೇಶ್, ರಾಣಿ, ಉಷಾ, ದಿವ್ಯ ಮತ್ತಿತರ ಪ್ರಮುಖರು ಹಾಗೂ ಕಾರ್ಯಕರ್ತರು ಸಂತಾಪ ಸಭೆಯಲ್ಲಿ ಉಪಸ್ಥಿತರಿದ್ದರು.

ಹೆಗ್ಗವಾಡಿಯಲ್ಲಿ ಆವರಿಸಿದ ನೀರವ ಮೌನ



ಚಾಮರಾಜನಗರ, ಮಾ.11– ಧ್ರುವನಾರಾಯಣ ಹಠಾತ್ ನಿಧನದಿಂದ ಅವರ ಹುಟ್ಟೂರು ಹೆಗ್ಗವಾಡಿಯಲ್ಲಿ ನೀರವ ಮೌನ ಆವರಿಸಿದೆ ಧ್ರುವನಾರಾಯಣ ಅವರು ಹೆಗ್ಗವಾಡಿಯಲ್ಲಿ ಏಳೂವರೆ ಎಕರೆ ಜಮೀನು ಹೊಂದಿದ್ದಾರೆ. ಅವರ ಅಕ್ಕನ ಮಗ ರೇವಣ್ಣ ಅವರು ಜಮೀನು ನೋಡಿಕೊಳ್ಳುತ್ತಿದ್ದಾರೆ. ಗುರುವಾರ ಊರಿಗೆ ಬಂದಿದ್ದ ಧ್ರುವನಾರಾಯಣ, ಮದುವೆಯೊಂದರಲ್ಲಿ ಭಾಗವಹಿಸಿ ಸಂಜೆ ಜಮೀನು ಸುತ್ತಾಡಿ ಮೈಸೂರಿಗೆ ತೆರಳಿದ್ದರು.

ಶನಿವಾರ ಬೆಳಗ್ಗೆ ಗ್ರಾಮಸ್ಥರಿಗೆ ಸಾವಿನ ಸುದ್ದಿ ಬರಸಿಡಿಲಿನಂತೆ ಎರಗಿದೆ. ಕುಟುಂಬಸ್ಥರು, ಗ್ರಾಮಸ್ಥರು ಆಘಾತಗೊಂಡಿದ್ದು, ಸುದ್ದಿಯನ್ನು ಅರಗಿಸಿ ಕೊಳ್ಳಲು ಆಗುತ್ತಿಲ್ಲ.

ನಮ್ಮ ಊರಿನ ನಾಯಕರಾಗಿದ್ದರು. ದೊಡ್ಡ ರಾಜಕಾರಣಿಯಾಗಿದ್ದರೂ ಊರಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದರು. ಎಲ್ಲ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು. ಗ್ರಾಮಸ್ಥರನ್ನೂ ಮನೆಯವರಂತೆಯೇ ನೋಡುತ್ತಿದ್ದರು ಎಂದು ಅವರ ಸಂಬಂಧಿ ದೇವಿ ಕಣ್ಣೀರು ಹಾಕಿದರು.

ನಮ್ಮ ಗ್ರಾಮವನ್ನು ಅಭಿವೃದ್ಧಿಪಡಿಸಿದವರು ಅವರು. ಕುಟುಂಬಸ್ಥರು, ಬಡವರ ಮನೆ ಮದುವೆಗೆ ಸಹಾಯ ಮಾಡುತ್ತಿದ್ದರು. ಇವತ್ತು ಬೆಳಗ್ಗೆ ಅವರ ಸಾವಿನ ಸುದ್ದಿ ಬಂತು. ನಂಬುವುದಕ್ಕೇ ಆಗುತ್ತಿಲ್ಲ ಎಂದು ಸಾಕಮ್ಮ ಹೇಳಿದರು. ಆಗಾಗ ಊರಿಗೆ ಬರುತ್ತಿದ್ದರು. ಜಮೀನು ಮೇಲ್ವಿಚಾರಣೆಯನ್ನೂ ಮಾಡುತ್ತಿದ್ದರು. ಕೃಷಿ ಬಗ್ಗೆ ಆಸಕ್ತಿಯನ್ನೂ ಹೊಂದಿದ್ದರು ಎಂದು ಅವರ ಸಂಬಂಧಿ ಮಹೇಶ್ ತಿಳಿಸಿದರು.

ಭುವನೇಶ್ವರಿ ವೃತ್ತದಲ್ಲಿ ಅಭಿಮಾನಿ ಬಳಗದಿಂದ ಶ್ರದ್ಧಾಂಜಲಿ

ಚಾಮರಾಜನಗರ, ಮಾ.11– ಮಾಜಿ ಸಂಸದ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಅವರ ನಿಧನದ ಗೌರವಾರ್ಥ ನಗರದ ಭುವನೇಶ್ವರಿ ವೃತ್ತದಲ್ಲಿ ಮಾಜಿ ಸಂಸದ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಅವರ ಅಭಿಮಾನಿ ಬಳಗದವರು ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಶ್ರದ್ಧಾಂಜಲಿ ಸಲ್ಲಿಸಿದರು.

ಜಿಲ್ಲೆಯ ಹೆಗ್ಗವಾಡಿ ಗ್ರಾಮದವರಾದ ಮಾಜಿ ಸಂಸದ ಆರ್.ಧ್ರುವನಾರಾಯಣ ಅವರು ಸರಳ ಸಜ್ಜನಿಕೆಯ ರಾಜಕಾರಣಿಯಾಗಿದ್ದರು. ವಿದ್ಯಾರ್ಥಿ ದೆಸೆಯಲ್ಲಿ ವಿದ್ಯಾರ್ಥಿ ಸಂಘಟನೆಯ ಮುಂಚೂಣಿ ನಾಯಕರಾಗಿದ್ದರು. ಸಂತೇಮರಹಳ್ಳಿ ಹಾಗೂ ಕೊಳ್ಳೇಗಾಲ ವಿಧಾನಸಭೆ ಕ್ಷೇತ್ರದಲ್ಲಿ ಗೆಲುವು ಸಾಧಿಸಿ 2 ಬಾರಿ ಶಾಸಕ, 2 ಬಾರಿ ಸಂಸದರಾಗಿ ಜನತೆಗೆ ಉತ್ತಮ ಯೋಜನೆಗಳನ್ನು ಅನುಷ್ಠಾನ ಮಾಡಿಸುವ ಮೂಲಕ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದ್ದಾರೆ. ಚಾಮರಾಜನಗರ, ಮೈಸೂರು ಸೇರಿದಂತೆ ರಾಜ್ಯ ಪ್ರಭಾವಿ ನಾಯಕನನ್ನು ಕಳೆದುಕೊಂಡಿದೆ ಎಂದು ಸಂತಾಪ ಸೂಚಿಸಿದರು. ಮೃತರ ಗೌರವಾರ್ಥ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು.

ಕೊಳ್ಳೇಗಾಲದ ಜನತೆ ಮೆಚ್ಚಿದ್ದ ಶಾಸಕ ಧ್ರುವನಾರಾಯಣ

- ಬೆಳಗ್ಗೆ ವಾಕಿಂಗ್ ವೇಳೆ ಸಾರ್ವಜನಿಕರ ಅಹವಾಲು ಕೇಳುತ್ತಿದ್ದರು
- ಕೊಳ್ಳೇಗಾಲ ಕೆಡಿಪಿ ಸಭೆಯಲ್ಲಿ ಉದ್ಯೋಗ ಖಾತ್ರಿಯ ಭ್ರಷ್ಟಾಚಾರವನ್ನೇ ಬಯಲಿಗೆಳೆದಿದ್ದರು

ಕೊಳ್ಳೇಗಾಲ, ಮಾ.11– ರಾಜಕಾರಣಿಗಳೆಂದರೆ ಜನಾನುರಾಗಿಗಳಾಗಿರಬೇಕು, ಅನ್ಯ ಪಕ್ಷದವರು ಹಾಡಿ ಹೊಗಳಬೇಕು ಎಂಬುದಕ್ಕೆ ಮಾಜಿ ಸಂಸದ, ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಆರ್. ಧ್ರುವನಾರಾಯಣ್ ಅವರು ಉತ್ತಮ ನಿದರ್ಶನ. ಅವರಲ್ಲಿದ್ದ ಅಭಿವೃದ್ಧಿ ಚಿಂತನೆ, ಜನರೊಡನೆ ಬೆರೆಯುತ್ತಿದ್ದ ಮನೋಭಾವ, ಕಾರ್ಯಕರ್ತರನ್ನು ಅಗಾಧವಾಗಿ ಪ್ರೀತಿಸುತ್ತಿದ್ದ ಔದಾರ್ಯ ಗುಣ, ಸಂಕಷ್ಟದಲ್ಲಿರುವವರಿಗೆ ಮಿಡಿಯುತ್ತಿದ್ದ ಹೃದಯ ವೈಶಾಲ್ಯ ಅವರದ್ದಾಗಿತ್ತು.



ಸಂತೇಮರಳ್ಳಿ ಕ್ಷೇತ್ರ ರದ್ದಾದ ಬಳಿಕ 2008ರಲ್ಲಿ ನಡೆದ ಕೊಳ್ಳೇಗಾಲ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ಗಿಟ್ಟಿಸಿ 37,384 ಮತಗಳಿಸಿ ಪ್ರತಿಸ್ಪರ್ಧಿಗಿಂತ ಬಿಜೆಪಿಯ ಎಸ್.ಮಹೇಂದರ್ ಅವರನ್ನು 12 ಸಾವಿರಕ್ಕೂ ಅಧಿಕ ಮತಗಳ ಭರ್ಜರಿ ಗೆಲುವು ಕಂಡಿದ್ದರು. ಕೇವಲ 13 ತಿಂಗಳುಗಳ ಕಾಲ ಕೊಳ್ಳೇಗಾಲ ಶಾಸಕರಾಗಿದ್ದ ಧ್ರುವನಾರಾಯಣ್ ಅವರು ಈ ಸಂದರ್ಭದಲ್ಲಿ ಕೊಳ್ಳೇಗಾಲದ ಗಣ್ಯರು, ಜನಸಾಮಾನ್ಯರ ಜೊತೆ ಪ್ರೀತಿಯಿಂದ ನಡೆದುಕೊಳ್ಳುವ ಮೂಲಕ ಜನಮೆಚ್ಚಿದ ಶಾಸಕ ಎಂಬ ಹೆಗ್ಗಳಿಕೆಗೂ ಭಾಜನರಾಗಿದ್ದರು. ಬೆಳಗ್ಗೆ ವಿಹಾರಕ್ಕೆ ತೆರಳುತ್ತಿದ್ದ ವೇಳೆಯೂ ವಿಹಾರದ ವೇಳೆ ಸಿಕ್ಕಿ ಕೊಳ್ಳೇಗಾಲದ ಜನತೆಯಿಂದ ಏನೆಲ್ಲಾ ಅಭಿವೃದ್ಧಿ ಕೆಲಸ ಮಾಡಬೇಕು ಎಂಬ ಸಲಹೆ ಪಡೆಯುತ್ತಿದ್ದರು. ಈ ಸಂದರ್ಭದಲ್ಲಿ ಸಾರ್ವಜನಿಕರಿಂದ ಅಹವಾಲು ಆಲಿಸುತ್ತಿದ್ದರು. ವಾರ್ಡ್‌ಗಳಿಗೂ ತೆರಳಿ ಸಾರ್ವಜನಿಕ ಸಮಸ್ಯೆ ನಿವಾರಣೆಗೆ ಕ್ರಮ ವಹಿಸುತ್ತಿದ್ದರು. ಜಾತ್ಯಾತೀತ ಮನೋಭಾವ ಹೊಂದಿದ್ದ ಅವರು, ಅನ್ಯ ಪಕ್ಷಗಳ ಮುಖಂಡರೊಂದಿಗೂ ಅತೀವ ಬಾಂಧವ್ಯ ಹೊಂದಿದ್ದರು. 1 ಮತದಿಂದ ಗೆದ್ದ ಶಾಸಕ ಎಂಬ ಖ್ಯಾತಿ ಅವರನ್ನು ಆವರಿಸಿತ್ತು.

ಖಾತ್ರಿಯ ಭ್ರಷ್ಟಾಚಾರವನ್ನು ಬಯಲಿಗೆಳೆದಿದ್ದು, ಅಧಿಕಾರಿಗಳಿಗೆ ಬೆವರಿಳಿಸಿದ್ರು: ಮೊದಲ ಬಾರಿ ಸಂಸದರಾದ ಬಳಿಕ ಕೊಳ್ಳೇಗಾಲದ ತಾಪಂ ಸಭಾಂಗಣದಲ್ಲಿ ಕೆಡಿಪಿ ಸಭೆ ನಡೆಸಿದ್ದರು. ಸಭೆಯಲ್ಲಿ ಉದ್ಯೋಗಖಾತ್ರಿಯಲ್ಲಿ ಯಾವ ಯಾವ ರೀತಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆಸಲಾಗಿದೆ ಎಂಬುದನ್ನ ಎಳೆ ಎಳೆಯಾಗಿ ವಿವರಿಸಿ ಇಓ ಸೇರಿದಂತೆ ಅನೇಕ ಅಧಿಕಾರಿಗಳಿಗೆ ಬೆವರಿಳಿಸಿ ಸ್ಥಳ ಪರಿಶೀಲನೆಗೆ ಅಧಿಕಾರಿಗಳನ್ನು ಕರೆದೊಯ್ದು ಕಳಪೆ ಕಾಮಗಾರಿ ಕಣ್ಣಾರೆ ಕಂಡು ಕೃಷಿ ಇಲಾಖೆಯ ಅಧಿಕಾರಿ, ಪಿಡಿಓ ಅವರನ್ನು ಸ್ಥಳದಲ್ಲೇ ಅಮಾನತುಗೊಳಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಮಾಧ್ಯಮಗಳ ವರದಿ ಓದಿ ಪ್ರತಿಕ್ರಿಯಿಸುತ್ತಿದ್ದ ವ್ಯಕ್ತಿತ್ವ: ಕೊಳ್ಳೇಗಾಲ ಮಾಧ್ಯಮಗಳಲ್ಲಿ ತಮ್ಮ ಕುರಿತು ಬರೆಯಲಾಗುತ್ತಿದ್ದ ಅನೇಕ ವರದಿಗಳನ್ನು ಓದಿ ನಂತರ ಆಯಾ ಪತ್ರಿಕಾ ವರದಿಗಾರರುಗಳಿಗೆ ಕರೆ ಮಾಡಿ ಪ್ರತಿಕ್ರಿಯಿಸುತ್ತಿದ್ದ ಧೀಮಂತ ರಾಜಕಾರಣಿ ಧ್ರುವನಾರಾಯಣ್ ಎಂದರೆ ಅತಿಶಯೋಕ್ತಿ ಎನಿಸದು.

ಪತ್ರಿಕೆಗಳಲ್ಲಿ ತಮ್ಮ ಕುರಿತು ಬರೆದ ಉತ್ತಮ ವರದಿಗಳನ್ನು ಉಲ್ಲೇಖಿಸಿ ನಿಮ್ಮ ಪತ್ರಿಕೆಯಲ್ಲಿ ತುಂಬ ಉತ್ತಮ ರೀತಿ ವರದಿ ಮಾಡಿದ್ದಿರಿ, ಧನ್ಯವಾದಗಳು ಎಂದು ಮಾತನಾಡುತ್ತಿದ್ದರು. ಮಾತ್ರವಲ್ಲ ತಮ್ಮ ಕುರಿತು ಕಲ್ಪಿತ ವರದಿ ಪ್ರಕಟವಾಗಿದ್ದರೂ ಸಹಾ ಮುಂದೆ ಈ ರೀತಿ ಬರೆಯಬೇಡ್ರಪ್ಪ ಎಂದು ನಗು, ನಗುತ್ತಲೆ ಮಾತನಾಡಿ ಗಮನ ಸೆಳೆಯುತ್ತಿದ್ದರು. ಎಲ್ಲಾ ದಿನಪತ್ರಿಕೆಗಳ ವರದಿಯನ್ನು ಪ್ರತಿ ನಿತ್ಯ ಗಮನಿಸಿ ಉತ್ತಮ ರೀತಿಯಲ್ಲಿ ವರದಿ ಪ್ರಕಟಿಸಿದ್ದ ಆಯಾ ಪತ್ರಿಕಾ ವರದಿಗಾರರುಗಳಿಗೆ ಅಭಿನಂದನೆ ಸಲ್ಲಿಸುತ್ತಿದ್ದ ವ್ಯಕ್ತಿತ್ವ ಅವರದ್ದು. ಒಟ್ಟಾರೆ ಸಜ್ಜನ ರಾಜಕಾರಣಿಯಾಗಿ, ಜನಮೆಚ್ಚಿನ ರಾಜಕೀಯ ಧುರೀಣರಾಗಿ ಗುರುತಿಸಿಕೊಂಡಿದ್ದರು.

ಪಕ್ಷವನ್ನು ತಾಯಿಗೆ ಹೋಲಿಕೆ ಮಾಡುತ್ತಿದ್ದ ಸಜ್ಜನ: ಕಾಂಗ್ರೆಸ್ ಪಕ್ಷವನ್ನು ತಾಯಿ ಸಮಾನವಾದ ಪಕ್ಷ, ಇಲ್ಲಿ ಎಲ್ಲಾ ಸಮಾಜಕ್ಕೂ ಅವಕಾಶ ಸಿಗಲಿದೆ, ಹಾಗಾಗಿ ತಾಯಿ ಸಮಾನವಾದ ಪಕ್ಷಕ್ಕೆ ಎಂದೆಂದೂ ದ್ರೋಹ ಮಾಡಬೇಡಿ ಎಂಬ ಸಂದೇಶವನ್ನು ಸಾವಿರಾರು ಸಭೆ, ಸಮಾರಂಭಗಳಲ್ಲಿ ಧ್ರುವನಾರಾಯಣ್ ಪ್ರಸ್ತಾಪಿಸಿದ್ದಾರೆ.


ಅಲ್ಲದೆ ಸ್ವತಃ ತಾವೇ ಪಕ್ಷ ಎಂಬುದು ನನಗೆ ತಾಯಿ ಸಮಾನ, ತಾಯಿ ಸಮಾನವಾದ ಪಕ್ಷ ನನಗೆ ಎಲ್ಲವನ್ನು ಕೊಟ್ಟಿದೆ, ನೀವು ಸಹಾ ಪಕ್ಷವನ್ನು ತಾಯಿ ಎಂದು ಭಾವಿಸಿ, ತಾಯಿಗೆ ನೀಡುವ ಗೌರವ, ಮರ್ಯಾದೆ ನೀಡಿ ನಿಮಗೂ ಉನ್ನತ ಸ್ಥಾನ ಲಭಿಸಲಿದೆ, ಪಕ್ಷ ಬೆಳೆಸಿ ಅದು ನಿಮ್ಮನ್ನ ಬೆಳೆಸುತ್ತೆ ಎಂಬ ಸಂದೇಶ ಹಲವು ಬಾರಿ ರವಾನಿಸಿದ್ದರು.



ಎಐಸಿಸಿ ಅಧ್ಯಕ್ಷರಾಗಿದ್ದ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ, ಚರ್ಚಿಸುತ್ತಿರುವ ಆರ್. ಧ್ರುವನಾರಾಯಣ್



ತಮ್ಮ ನಿರಂತರ ಹೋರಾಟದ ಮೂಲಕ ಚಾಮರಾಜನಗರದಲ್ಲಿ ಕೇಂದ್ರೀಯ ವಿದ್ಯಾಲಯವನ್ನು ಆರಂಭಿಸಲು ಕಾರಣಕರ್ತರಾದ ಧ್ರುವನಾರಾಯಣ್ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿರುವುದು.



ಧ್ರುವನಾರಾಯಣ್ ಅವರು ಪಕ್ಷದ ಎಲ್ಲಾ ನಾಯಕರ ಜೊತೆ ಆತ್ಮೀಯ ಒಡನಾಟ ಇಟ್ಟುಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಅಭಿನಂದಿಸುತ್ತಿರುವ ಆರ್. ಧ್ರುವನಾರಾಯಣ್.

ಆಕಸ್ಮಿಕ ಬೆಂಕಿ: 20 ಮೇಕೆಗಳು ಸಜೀವ ದಹನ

ಮದ್ದೂರು, ಮಾ.11– ಗುಡಿಸಲಿಗೆ ಆಕಸ್ಮಿಕ ಬೆಂಕಿ ತಗುಲಿ 20ಕ್ಕೂ ಹೆಚ್ಚು ಮೇಕೆಗಳು ಸಜೀವ ದಹನವಾಗಿರುವ ಘಟನೆ ತಾಲೂಕಿನ ವಳಗೆರೆಹಳ್ಳಿ ಗ್ರಾಪಂ ವ್ಯಾಪ್ತಿಯ ಬಿ.ಹೊಸಹಳ್ಳಿ ಗ್ರಾಮದಲ್ಲಿ ಶುಕ್ರವಾರ ತಡರಾತ್ರಿ ಜರುಗಿದೆ.

ತಾಲೂಕಿನ ಬಿ.ಹೊಸಹಳ್ಳಿ ಗ್ರಾಮದ ಚಿಕ್ಕಣ್ಣ ವೆಂಕಟಮ್ಮ ದಂಪತಿಗೆ ಸೇರಿದ ಗುಡಿಸಲಿಗೆ ಬೆಂಕಿ ತಗುಲಿದ ಪರಿಣಾಮ ಪಾತ್ರೆ ಸಾಮಗ್ರಿಗಳು, ಬಟ್ಟೆ ಇನ್ನಿತರೆ ಪದಾರ್ಥಗಳು ಹಾಗೂ ಕೊಟ್ಟಿಗೆಯಲ್ಲಿ ಕೂಡಿಹಾಕಿದ್ದ 20 ಮೇಕೆಗಳು ಸಜೀವ ದಹನವಾಗಿ 2 ಲಕ್ಷಕ್ಕೂ ಅಧಿಕ ನಷ್ಟ ಸಂಭವಿಸಿದೆ. ಈ ಸಂಬಂಧ ಮದ್ದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕಾಗಮಿಸಿದ ತಾಪಂ ಇಓ ಸಂದೀಪ್, ಪಶು ಸಂಗೋಪನೆ ಸಹಾಯಕ ನಿರ್ದೇಶಕ ಡಾ.ಪ್ರವೀಣ್, ನರೇಗಾ ಸಹಾಯಕ ನಿರ್ದೇಶಕ ಮಂಜುನಾಥ್, ಪಿಡಿಓ ಪ್ರಭಾಕರ್ ಚಿಕ್ಕಣ್ಣ ವೆಂಕಟಮ್ಮ ದಂಪತಿಗೆ ಸಾಂತ್ವನ ಹೇಳುವ ಜೊತೆಗೆ ಸರ್ಕಾರದಿಂದ ಸಿಗುವ ಪರಿಹಾರ ನೀಡುವ ಭರವಸೆ ನೀಡಿದರು.

ಪ್ರಧಾನಿ ಭೇಟಿಯ ಐತಿಹಾಸಿಕ ಕ್ಷಣಕ್ಕೆ ಮಂಡ್ಯ ಜನತೆ ಸಾಕ್ಷಿಯಾಗಬೇಕು



ಮಂಡ್ಯ, ಮಾ.11– 41 ವರ್ಷಗಳ ಬಳಿಕ ಮಂಡ್ಯಕ್ಕೆ ಪ್ರಧಾನಿಯೊಬ್ಬರು ಆಗಮಿಸುತ್ತಿದ್ದು, ಈ ಐತಿಹಾಸಿಕ ಕ್ಷಣಕ್ಕೆ ಜನತೆ ಸಾಕ್ಷಿಯಾಗಬೇಕು ಎಂದು ಮಂಡ್ಯ ಜಿಲ್ಲಾ ಬಿಜೆಪಿ ಉಸ್ತುವಾರಿ ಫಣೀಶ್ ಕರೆ ನೀಡಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರು ಮಾ.12ರಂದು ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಉದ್ಘಾಟಿಸಲಿದ್ದು, ಅದರ ಜೊತೆಗೆ ಜಿಲ್ಲೆಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಉದ್ಘಾಟಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಪಕ್ಷಾತೀತ, ಜಾತ್ಯತೀತವಾಗಿ ಆಗಮಿಸಿ ಪ್ರಧಾನಿ ಅವರನ್ನು ಸಹೃದಯತೆಯಿಂದ ಸ್ವಾಗತಿಸಬೇಕು ಎಂದರು.

ಮೈಸೂರಿನಿಂದ ಆಗಮಿಸುವ ಪ್ರಧಾನಿಯವರು ನಗರದ ಪ್ರವಾಸಿ ಮಂದಿರ ಬಳಿಯ ಮುಖ್ಯ ರಸ್ತೆಯಿಂದ ನಂದಾ ಚಿತ್ರಮಂದಿರದವರೆಗೆ ರೋಡ್ ಶೋ ನಡೆಸಲಿದ್ದು, ಒಂದು ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಇಲ್ಲಿನ ಜನತೆ ಮಂಡ್ಯ ಸಂಸ್ಕೃತಿ ಬಿಂಬಿಸುವ ವೇಷಭೂಷಣದೊಂದಿಗೆ ಆಗಮಿಸಿ ಮಂಡ್ಯದ ಶಕ್ತಿ ಮತ್ತು ಪ್ರೀತಿ ತೋರಿಸಬೇಕು. ನಗರ ಮತ್ತು ಗ್ರಾಮಾಂತರ ಪ್ರದೇಶದ ಎಲ್ಲಾ ಸಮುದಾಯದವರು ಭಾಗವಹಿಸಬೇಕು. ಪ್ರಧಾನಿಯವರ ವೀಕ್ಷಣೆಗೆ ಜನತೆಗೆ ನೆರಳು, ನೀರಿನ ವ್ಯವಸ್ಥೆ ಮಾಡಲಾಗಿದೆ ಎಂದು ವಿವರಿಸಿದರು.

ಬಿಜೆಪಿ ಮುಖಂಡ ಅಶೋಕ್ ಜಯರಾಂ ಮಾತನಾಡಿ, ಪ್ರಧಾನಿ ಸಂಚರಿಸುವ ರೋಡ್ ಶೋ ಮಾರ್ಗದಲ್ಲಿ ಪೊಲೀಸ್ ರಕ್ಷಣಾ ವ್ಯವಸ್ಥೆ ಜೊತೆಗೆ ನೂರಾರು ಸ್ವಯಂ ಸೇವಕರು ಸುರಕ್ಷಿತ ವಾತಾವರಣದಲ್ಲಿ ಪ್ರಧಾನಿ ಅವರನ್ನು ವೀಕ್ಷಿಸಲು ಅನುವು ಮಾಡಿಕೊಡುತ್ತಾರೆ. ಮಾರ್ಗ ಮಧ್ಯದಲ್ಲಿ ಕಲಾತಂಡಗಳು ಪ್ರದರ್ಶನ ನೀಡಲಿದ್ದು, ಹಿರಿಯ ನಾಗರಿಕರಿಗೆ, ಮಹಿಳೆಯರು, ಮಕ್ಕಳಿಗೆ ಪ್ರತ್ಯೇಕ ಸ್ಥಳ ಮೀಸಲಿಡಲಾಗಿದೆ. ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರ ಘಟಕದ ಅಧ್ಯಕ್ಷ ವಿವೇಕ್, ಮಾಧ್ಯಮ ವಕ್ತಾರ ಸಿ.ಟಿ.ಮಂಜುನಾಥ್, ನಗರಸಭಾ ಸದಸ್ಯರಾದ ಚಂದ್ರು, ಪ್ರಸನ್ನ ಹಾಗೂ ಸದಾನಂದ ಹಾಜರಿದ್ದರು.

ಆನೆಗೊಳ ಗ್ರಾಪಂಗೆ ರಂಜಿತಾ ಉಪಾಧ್ಯಕ್ಷೆ



ಕಿಕ್ಕೇರಿ, ಮಾ.11– ಇಲ್ಲಿಗೆ ಸಮೀಪದ ಆನೆಗೊಳ ಗ್ರಾಪಂ ಉಪಾಧ್ಯಕ್ಷೆಯಾಗಿ ರಂಜಿತಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಮಾಡಿಕೊಂಡಿದ್ದ ಒಡಂಬಡಿಕೆಯಂತೆ ಉಪಾಧ್ಯಕ್ಷ ರಮೇಶ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಕಾರಣ ಅವರಿಂದ ತೆರವಾಗಿದ್ದ ಸ್ಥಾನಕ್ಕೆ ರಂಜಿತಾ ಅವರನ್ನು ಹೊರತುಪಡಿಸಿ ಬೇರೆಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ತಾಪಂ ಇಓ ಸತೀಶ್ ಘೋಷಿಸಿದರು. ಈ ವೇಳೆ ಪಿಡಿಓ ಕೆ.ಎನ್.ಕುಮಾರ್, ಕಾರ್ಯದರ್ಶಿ ಡಿ.ಲಕ್ಷ್ಮಿ, ಲೆಕ್ಕಾಧಿಕಾರಿ ಕೆ.ಪಿ.ನವೀನ್ ಇದ್ದರು. ಚುನಾವಣಾ ಸಭೆಯಲ್ಲಿ ಗ್ರಾಪಂನ ಒಟ್ಟು 17 ಸದಸ್ಯರ ಪೈಕಿ 15 ಮಂದಿ ಹಾಜರಿದ್ದರು. ಅಧ್ಯಕ್ಷೆ ಅನುಸೂಯ, ಸದಸ್ಯೆ ಕುಮಾರಿ ಗೈರಾಗಿದ್ದರು.

ನೂತನ ಉಪಾಧ್ಯಕ್ಷೆಯನ್ನು ಜೆಡಿಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ಕಿರಣ್, ಮುಖಂಡರಾದ ರಾಮೇಗೌಡ, ಮಧು, ಶಿಶುಪಾಲ, ವಿಶ್ವನಾಥ್, ಬಿ.ಎಸ್.ಮಂಜುನಾಥ್, ಗ್ರಾಪಂ ಸದಸ್ಯರಾದ ರಮೇಶ್, ಜಗನ್ನಾಥ್, ಪ್ರಕಾಶ್, ಗಂಗಾಧರ್ ಮತ್ತಿತರರು ಅಭಿನಂದಿಸಿದರು.

ದಶಪಥ ರಸ್ತೆ ಲೋಕಾರ್ಪಣೆಗೆ ತಮಟೆ ಪ್ರಚಾರ

ಮಂಡ್ಯ, ಮಾ.11– ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ(ಮಾ.12) ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಉದ್ಘಾಟಿಸಲು ಮಂಡ್ಯಕ್ಕೆ ಆಗಮಿಸುತ್ತಿದ್ದು, ಮೋದಿಯವರ ರೋಡ್ ಶೋ ಹಾಗೂ ವೇದಿಕೆ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮಂಡ್ಯ ತಾಲೂಕಿನ ಹಲವು ಗ್ರಾಮಗಳಲ್ಲಿ ತಮಟೆ ಮೂಲಕ ಸಾರಲಾಗಿದೆ.



ಪ್ರಧಾನಿ ಮೋದಿ ಅವರನ್ನು ಇಷ್ಟ ಪಡುವ ಜನರು ಪ್ರತಿ ಗ್ರಾಮದಲ್ಲಿರುವ ಕಾರಣ ಮಂಡ್ಯಕ್ಕೆ ಮೋದಿ ಆಗಮಿಸುತ್ತಿದ್ದು, ಕಾರ್ಯಕ್ರಮಕ್ಕೆ ಆಗಮಿಸುವಂತೆ ಮಂಡ್ಯ ತಾಲೂಕಿನ ಕೆರಗೋಡು, ಬಸರಾಳು ಹೋಬಳಿಯ ಹಲವು ಗ್ರಾಮಗಳಲ್ಲಿ ತಮಟೆ ಬಾರಿಸುವ ಮೂಲಕ ಸಾರಲಾಗಿದೆ. ಭಾನುವಾರ ಬೆಳಗ್ಗೆ 11.30ಕ್ಕೆ ಮಂಡ್ಯಕ್ಕೆ ಆಗಮಿಸುವ ಮೋದಿ ಅವರು ನಗರದ ಐಬಿ ವೃತ್ತದಿಂದ ನಂದಾ ಚಿತ್ರಮಂದಿರದವರೆಗೆ 1.5 ಕಿಮೀ ರೋಡ್ ಶೋ ನಡೆಸಲಿದ್ದು, ಬಳಿಕ ಮದ್ದೂರು ತಾಲೂಕಿನ ಗೆಜ್ಜಲಗೆರೆ ಕಾಲೋನಿಯಲ್ಲಿ ನಿರ್ಮಿಸಿರುವ ಬೃಹತ್ ವೇದಿಕೆಯಲ್ಲಿ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಉದ್ಘಾಟಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಸೇರಿಸಲು ಬಿಜೆಪಿ ಮುಖಂಡರು ಈ ಉಪಾಯ ಮಾಡಿದ್ದಾರೆ. ವೇದಿಕೆ ಕಾರ್ಯಕ್ರಮದಲ್ಲಿ ಸಹಕಾರಿ ಫಲಾನುಭವಿಗಳಿಗೆ ಜಿಲ್ಲಾದ್ಯಂತ ಆಹ್ವಾನ ನೀಡಿರುವ ಹಿನ್ನೆಲೆಯಲ್ಲಿ, ಸಹಕಾರಿ ಕ್ಷೇತ್ರದ ಫಲಾನುಭವಿಗಳ ಜೊತೆಗೆ ಗ್ರಾಮೀಣ ಪ್ರದೇಶದ ಜನರು ಸಹ ಕಾರ್ಯಕ್ರಮಕ್ಕೆ ಬರಬೇಕೆಂಬ ಉದ್ದೇಶದಿಂದ ಕಳೆದ 2 ದಿನಗಳಿಂದ ತಮಟೆ ಮೂಲಕ ಪ್ರಚಾರ ಕೈಗೊಂಡಿದ್ದಾರೆ.

ಕಣ್ಮರೆಯಾದ ಚಾ.ನಗರ ಜಿಲ್ಲೆಯ ಎರಡು ರಾಜಕೀಯ 'ನಕ್ಷತ್ರ'ಗಳು



ಚಾಮರಾಜನಗರ, ಮಾ.11– ಮುಂಬರುವ ಚುನಾವಣೆಗೆ ತಯಾರಿ ನಡೆಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಆರ್. ಧ್ರುವನಾರಾ ಯಣ್ ಅಗಲಿಕೆ ದೊಡ್ಡ ಆಘಾತವನ್ನುಂಟುಮಾಡಿದೆ. ಹಳೇ ಮೈಸೂರು ಭಾಗದಲ್ಲಿ ಶ್ರೀನಿವಾಸ ಪ್ರಸಾದ್ ನಂತರ ದಲಿತ ನಾಯಕ ಎನಿಸಿಕೊಂಡಿದ್ದ ಧ್ರುವನಾರಾಯಣ ಅವರ ನಿಧನ ಪಕ್ಷ ಹಾಗೂ ಸಮಾಜಕ್ಕೆ ದೊಡ್ಡ ನಷ್ಟವನ್ನುಂಟುಮಾಡಿದೆ.

2008ರಲ್ಲಿ ಎಚ್.ಎಸ್.ಮಹದೇವಪ್ರಸಾದ್ ಕಾಂಗ್ರೆಸ್‌ಗೆ ಸೇರ್ಪಡೆಗೊಂಡ ಬಳಿಕ ಮಹದೇವಪ್ರಸಾದ್ ಹಾಗೂ ಆರ್. ಧ್ರುವನಾರಾಯಣ್ ಇಬ್ಬರು ಜೋಡೆತ್ತುಗಳಂತೆ ಪಕ್ಷ ಸಂಘಟಿಸಿ ಚಾಮರಾಜನಗರ ಲೋಕಸಭಾ ಕ್ಷೇತ್ರದ 8ಕ್ಕೆ 8 ಸ್ಥಾನಗಳಲ್ಲೂ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದರು.

ಒಬ್ಬರು ಲಿಂಗಾಯತ ಸಮಾಜದ ನಾಯಕರಾದರೆ, ಧ್ರುವನಾರಾಯಣ್ ದಲಿತ ಸಮಾಜದ ನಾಯಕರಾಗಿ ಉತ್ತುಂಗಕ್ಕೇರುತ್ತಿದ್ದರು. ಮಹದೇವ ಪ್ರಸಾದ್ ಹಾಗೂ ಧ್ರುವನಾರಾಯಣ್ ಅಭಿವೃದ್ಧಿ ದೃಷ್ಟಿಯಲ್ಲಿ ಇಬ್ಬರು ಸಮಾನ ಮನಸ್ಕರಾಗಿದ್ದರು.

ಜೊತೆಗೆ ಜನರ ನಡುವೇ ಇರುವ ನಾಯಕರಾಗಿ ಸದಾ ಒಂದಲ್ಲಾ ಒಂದು ಯೋಜನೆ ರೂಪಿಸಿ ಅಭಿವೃದ್ಧಿ ಬಗ್ಗೆ ಹಾತೊರೆಯುತ್ತಿದ್ದ ನಾಯಕರುಗಳಾಗಿದ್ದರು. ಸಿದ್ದು ಸರ್ಕಾರದ ಕೊನೆಯ ಅವಧಿಯಲ್ಲಿ ಎಚ್.ಎಸ್. ಮಹದೇವಪ್ರಸಾದ್ ನಿಧನರಾದ ಬಳಿಕ ಬಡವಾದ ಕಾಂಗ್ರೆಸ್‌ಗೆ ಶಕ್ತಿ ತುಂಬುತ್ತಿದ್ದ ಧ್ರುವನಾರಾಯಣ್ ಅವರು ಕೂಡ ನಿಧನರಾಗಿರುವುದು ಕಾಂಗ್ರೆಸ್‌ಗೆ ನಿಜಕ್ಕೂ ತುಂಬಲಾರದ ದೊಡ್ಡ ನಷ್ಟ, ಅಲ್ಲದೇ ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೂ ದೊಡ್ಡ ಹೊಡೆತವನ್ನೇ ಈ ಇಬ್ಬರು ನಾಯಕರ ಅಗಲಿಕೆ ಕೊಟ್ಟಿದೆ.

> ಧ್ರುವನಾರಾಯಣ್ ಅವರ ಅಕಾಲಿಕ ಮರಣದಿಂದ ದಲಿತ ಸಮುದಾಯಕ್ಕೆ ಮಾತ್ರವಲ್ಲ ಇಡೀ ಸಾರಸ್ವತ ಲೋಕಕ್ಕೆ ತುಂಬಲಾರದ ನಷ್ಟವುಂಟಾಗಿದೆ. ಅವರು ಒಬ್ಬ ಸಾಮಾಜಿಕ ಬದ್ಧತೆ ಇರುವ ಸೃಜನಶೀಲ ರಾಜಕಾರಣಿಯಾಗಿದ್ದರು. ಮಾನವೀಯ ಮೌಲ್ಯಗಳ ನೆಲೆ ಗಟ್ಟಿನಲ್ಲಿ ದೀನ–ದಲಿತರ ನೋವು–ನಲಿವುಗಳಿಗೆ ಅವರ ಹೃದಯ ಸದಾ ಮಿಡಿಯುತ್ತಿತ್ತು. ನೊಂದವರ ಧ್ವನಿ ಯಾಗಿದ್ದ ಅವರ ಸಾವು ನಿಜಕ್ಕೂ ಸಾಮಾಜಿಕ ಕ್ಷೇತ್ರಕ್ಕೆ ತುಂಬಲಾರದ ನಷ್ಟ
> –ದಲಿತ ಮಹಾಸಭಾ

> ಧ್ರುವನಾರಾಯಣ್ ಅವರು ಸಾರ್ವಜನಿಕ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿ, ಚಾಮರಾಜನಗರ ಜಿಲ್ಲೆಗೆ ಹಲವಾರು ಯೋಜನೆಗಳನ್ನು ಜಾರಿ ಮಾಡಲು ಅವಿರತ ಸೇವೆ ಸಲ್ಲಿಸಿದ್ದಾರೆ. ಎರಡು ಬಾರಿ ಶಾಸಕರಾಗಿ, ಎರಡು ಬಾರಿ ಸಂಸದರಾಗಿ ಜನರಿಗಾಗಿ ದುಡಿದಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೂ ಕಾಂಗ್ರೆಸ್ ಪಕ್ಷದ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸಿ, ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಪಕ್ಷದ ಸಂಘಟನೆಗೆ ತಮ್ಮನ್ನೇ ತಾವು ತೊಡಗಿಸಿಕೊಂಡು ಇತರರಿಗೆ ಮಾದರಿಯಾಗಿದ್ದರು. ಸರಳ, ಸಜ್ಜನಿಕೆಯ ವ್ಯಕ್ತಿತ್ವ ಹೊಂದಿದವರಾಗಿದ್ದರು. ಇವರ ನಿಧನದಿಂದ ಸಾರ್ವಜನಿಕ ಕ್ಷೇತ್ರಕ್ಕೆ ತುಂಬ ಲಾರದ ನಷ್ಟವಾಗಿದೆ.
> –ಎಚ್ ಎ ವೆಂಕಟೇಶ್, ಕೆಪಿಸಿಸಿ ವಕ್ತಾರ.



ನೀರಿನ ಸಂಪ್‌ಗೆ ಬಿದ್ದು ಮಹಿಳೆ ಸಾವು

ಮೈಸೂರು, ಮಾ. 11– ಕಾಲೇಜಿನ ಹೌಸ್ ಕೀಪಿಂಗ್ ಮಹಿಳೆ ನೀರಿನ ಸಂಪ್‌ಗೆ ಬಿದ್ದು ಸಾವನ್ನಪ್ಪಿದ ಘಟನೆ ಮೈಸೂರಿನ ಬೆಳಗೊಳ ಕೈಗಾರಿಕಾ ಪ್ರದೇಶದಿಂದ ವರದಿಯಾಗಿದೆ. ಅಲ್ಲಿನ ಎಸ್‌ವಿಎಸ್ ಕಾಲೇಜಿನ ನೀರಿನ ಸಂಪ್‌ಗೆ ಬಿದ್ದು, ಬಿಎಂಶ್ರೀ ನಗರದ ನಿವಾಸಿ ಶಾಂತ(41) ಸಾವನ್ನಪ್ಪಿದ್ದು, ಈಕೆ ಮಾರ್ಚ್ 8ರಂದು ಬೆಳಗ್ಗೆ 11.30ರ ಸುಮಾರಿನಲ್ಲಿ ಸಂಪ್‌ನಲ್ಲಿ ನೀರು ತೆಗೆದುಕೊಳ್ಳಲು ಹೋದಾಗ ಆಯತಪ್ಪಿ ಬಿದ್ದು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾಳೆ ಎಂದು ಹೇಳಲಾಗಿದೆ.

5ನೇ ವರ್ಷದ ಸವಿನೆನಪು



ನೀವು ನಿಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ಸವಿ ನೆನಪಿನಲ್ಲಿರುವ
ದುಃಖತಪ್ತರು:
ಪತ್ನಿ: ಶ್ರೀಮತಿ ಬಸಮ್ಮ, ಸಹೋದರ: ಚಿಕ್ಕ ಬುದ್ದಿಗೌಡ ಮಕ್ಕಳು, ಅಳಿಯಂದಿರು ಹಾಗೂ ಕುಟುಂಬವರ್ಗದವರು

ಪೊಲೀಸ್ ನಾಗೇಗೌಡ (ASI)

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತನ್ನು ಸದರಿ ಸ್ವತ್ತಿನ ಮಾಲೀಕರುಗಳಾದ ಮಹದೇವಮ್ಮ ಕೋಂ ಲೇಟ್ ಪಟೇಲ್ ಎಂ.ಮಾದು, ಎಂ.ಮೋಹನ್ ಬಿನ್ ಲೇಟ್ ಪಟೇಲ್ ಎಂ.ಮಾದು, ಎಂ.ಚಂದ್ರಶೇಖರ್, ಬಿನ್ ಲೇಟ್ ಪಟೇಲ್ ಎಂ.ಮಾದು, ರೇಣುಖ, ಬಿನ್ ಲೇಟ್ ಪಟೇಲ್ ಎಂ.ಮಾದು, ಎಲ್ಲರ ವಾಸ ಮನೆ ನಂ.111, ಗೂಡಮಾದನಹಳ್ಳಿ ಗ್ರಾಮ, ಆಶ್ರಮ ಅಂಚೆ, ವರುಣ ಹೋಬಳಿ, ಮೈಸೂರು ತಾಲ್ಲೂಕು ಹಾಗೂ ಟಿ.ಚಿಕ್ಕಣ್ಣ ಬಿನ್ ಲೇಟ್ ತಿಮ್ಮೇಗೌಡ, ವಾಸ ಮನೆ ನಂ. 168, 1ನೇ ಕ್ರಾಸ್, 1ನೇ ಮುಖ್ಯ ರಸ್ತೆ, ಮಹದೇಶ್ವರ ದೇವಸ್ಥಾನದ ರಸ್ತೆ, ಕುಂಬಾರ ಕೊಪ್ಪಲು, ಮೈಸೂರು ಇವರಿಂದ ಶುದ್ಧ ಕ್ರಯಕ್ಕೆ ಪಡೆದುಕೊಳ್ಳುವ ಇಚ್ಛೆಯನ್ನು ಹೊಂದಿದ್ದು, ಈ ಸಂಬಂಧ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆಯನ್ನು ನೀಡುತ್ತಿದ್ದಾರೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ / ವ್ಯಕ್ತಿಗಳು / ಸಂಘ ಸಂಸ್ಥೆಗಳು ಅಥವಾ ಷೆಡ್ಯೂಲ್ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ರೀತ್ಯಾ ಹಕ್ಕು, ವಾರಸು, ಮಾಲೀಕತ್ವ ಹಾಗೂ ಇನ್ನಿತರೆ ಯಾವುದೇ ರೀತಿಯ ಮಾಲೀಕತ್ವವನ್ನು ಹೊಂದಿದ್ದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿಗಳು ಈ ಕೆಳಗೆ ಸಹಿ ಮಾಡಿರುವ ವಕೀಲರ ವಿಳಾಸಕ್ಕೆ ಸೂಕ್ತ ದಾಖಲೆಗಳ ಸಮೇತ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದಂತಹ ಏಳು (07) ದಿನಗಳೊಳಗಾಗಿ ಲಿಖಿತವಾಗಿ ಸಲ್ಲಿಸವಂತೆ ಈ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ಮೇಲೆ ತಿಳಿಸಿದಂತಹ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಾರದೇ ಇದ್ದಂತಹ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸುತ್ತಾರೆಂತಲೂ ಮತ್ತು ಆನಂತರ ಬರುವಂತಹ ಯಾವುದೇ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲವೆಂತಲೂ ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.9/3, ವಿಸ್ತೀರ್ಣ 0.30 ಗುಂಟೆ, ಸರ್ವೆ ನಂ. 10, ವಿಸ್ತೀರ್ಣ 2 ಎಕರೆ, ಸರ್ವೆ ನಂ.11/4, ವಿಸ್ತೀರ್ಣ 1 ಎಕರೆ 23 ಗುಂಟೆ ಮತ್ತು ಸರ್ವೆ ನಂ.11/5, ವಿಸ್ತೀರ್ಣ 1 ಎಕರೆ 23 ಗುಂಟೆ, ಸರ್ವೆ ನಂ.12/2, ವಿಸ್ತೀರ್ಣ 0.30 ಗುಂಟೆ, ಸರ್ವೆ ನಂ.13, ವಿಸ್ತೀರ್ಣ 1 ಎಕರೆ 05 ಗುಂಟೆ, ಸರ್ವೆ ನಂ. 14/1, ವಿಸ್ತೀರ್ಣ 0.33.08 ಗುಂಟೆ, ಸರ್ವೆ ನಂ.14/2, ವಿಸ್ತೀರ್ಣ 5 ಎಕರೆ 02 ಗುಂಟೆ, ಸರ್ವೆ ನಂ.16/1, ವಿಸ್ತೀರ್ಣ 1 ಎಕರೆ, ಸರ್ವೆ ನಂ.17/1, ವಿಸ್ತೀರ್ಣ 2 ಎಕರೆ 22 ಗುಂಟೆ.

ಸಹಿ/– ಕೆ. ಅರುಣ್ ಕುಮಾರ್
ವಕೀಲರು
ನಂ.1438/1, ನೆಲ ಮಹಡಿ, ರೇಣುಕಾಚಾರ್ಯ ದೇವಸ್ಥಾನ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು – 570004. ಮೊಬೈಲ್ ನಂ. 9886188326
ದಿನಾಂಕ: 11.03.2023 ಸ್ಥಳ: ಮೈಸೂರು

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ಸಿಟಿ ನಜರ್‌ಬಾದ್ ಮೊಹಲ್ಲಾ, ಸಿದ್ಧಾರ್ಥನಗರ ಬಡಾವಣೆ 1ನೇ ಹಂತ, 7ನೇ ಕ್ರಾಸ್, ಆನಂದಮಾರ್ಗ, ಮನೆ ನಂ.361 ರಲ್ಲಿ ವಾಸವಾಗಿರುವ ಶ್ರೀ ಎಸ್.ಜಿತೇಂದ್ರ (ಆಧಾರ್ ನಂ. 5613 0621 6711) ರವರಿಂದ ಖರೀದಿಸಲಿಚ್ಛಿಸಿರುತ್ತಾರೆ.

ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವ ಇಲಾಖೆಗಾದರು ಅಥವಾ ಯಾವುದೇ ಸಂಸ್ಥೆಗಾದರೂ ಅಥವಾ ಇನ್ನಿತರ ಯಾರಿಗಾದರು ಹಕ್ಕು ಭಾದ್ಯತೆ ಅಥವಾ ಯಾವುದೇ ತಂಟೆತಕರಾರು ಇದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 7 ದಿವಸಗಳೊಳಗೆ ಈ ಕೆಳಕಂಡ ವಿಳಾಸದಾರರಿಗೆ ಯಾವುದೇ ವ್ಯಕ್ತಿಗಳು ದಾಖಲೆಸಹಿತ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಮುಂದೆ ನಮ್ಮ ಕಕ್ಷಿದಾರರು ಮೇಲ್ಕಂಡ ಮಹನೀಯರಿಂದ ಸದರಿ ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯ ಪತ್ರದ ಮೂಲಕ ಕೆಳಕಂಡ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ತಂಟೆ – ತಕರಾರು ಅಥವಾ ಹಕ್ಕು ಭಾದ್ಯತೆ ಇಲ್ಲವೆಂದು ತಿಳಿದು ನೋಂದಣಿ ಮಾಡಿಕೊಳ್ಳುವರೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್

ಮೈಸೂರು ಸಿಟಿ ನಜರ್‌ಬಾದ್ ಮೊಹಲ್ಲಾ ಥಿಯೋಬೋಲ್ಡ್ ರಸ್ತೆಯಲ್ಲಿರುವ ಮನೆ ನಂ. 398 ಎನ್–26, 398/ಎಎನ್27/ಎ, 399/ಎ ಎನ್ 27/ಎ, 398 ಎನ್–26 1236 ಚದರಡಿ, 398/1ಎನ್27 771 ಚದರಡಿ, 399/ಎನ್ ಎನ್ 27/ಎ366.67 ಚದರಡಿ ಒಟ್ಟು 2373.67 ಚದರಡಿವುಳ್ಳ ಖಾಲಿ ಜಾಗ ಮತ್ತು ಕಟ್ಟಡ ಇದಕ್ಕೆ ಚಕ್ಕುಬಂದಿ:– ಪೂರ್ವಕ್ಕೆ : ಸ್ವತ್ತಿನ ಸಂಖ್ಯೆ 405/2 ಮತ್ತು 403, ಪಶ್ಚಿಮಕ್ಕೆ : ಥಿಯೋಬೋಲ್ಡ್ ರಸ್ತೆ, ಉತ್ತರಕ್ಕೆ : ಸ್ವತ್ತಿನ ಸಂಖ್ಯೆ 405/2, ದಕ್ಷಿಣಕ್ಕೆ : 3 ಅಡಿ ಗಲ್ಲಿ ಮತ್ತು ಸ್ವತ್ತಿನ ಸಂಖ್ಯೆ 400.

Sd/- S.Umesh, M.S.Vani,
K.Sheshaiah, Advocates
#369, Jhansi Lakshmi Bai Road,
Mysuru - 570 005.
e-mail: umeshadvocate1@gmail.com
0821-2429670 & 3552106,
Cell: 9448342677
ದಿನಾಂಕ: 11/03/2023
ಮೈಸೂರು

ಮೈಸೂರು ಮಿತ್ರ ಭಾನುವಾರ 12 ಮಾರ್ಚ್ 2023

ಧ್ರುವನಾರಾಯಣ ನಿಧನಕ್ಕೆ ಗಣ್ಯರ ಕಂಬನಿ




ಬೆಂಗಳೂರು, ಮಾ. 11 (ಕೆಎಂಶಿ)–ಮಾಜಿ ಸಂಸದ ಧ್ರುವನಾರಾಯಣ ಅವರ ಅಕಾಲಿಕ ನಿಧನಕ್ಕೆ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣಾ, ಹೆಚ್.ಡಿ. ಕುಮಾರಸ್ವಾಮಿ, ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ, ಸಚಿವರು, ಗಣ್ಯರು ಸೇರಿದಂತೆ ಹಲವರು ತೀವ್ರ ಸಂತಾಪ ಸೂಚಿಸಿದ್ದಾರೆ.







ಕಾಗೇರಿ: ಅಜಾತಶತ್ರು ಎಂದೇ ಹೆಸರಾಗಿದ್ದ ಮಾಜಿ ಸಂಸದ ಹಾಗೂ ರಾಜ್ಯದ ಒಬ್ಬ ಹಿರಿಯ ರಾಜಕಾರಣಿಯಾಗಿದ್ದ ಧ್ರುವನಾರಾಯಣ ಅವರನ್ನು ಕಳೆದುಕೊಂಡಂತಾಗಿದೆ ಎಂದು ಸಭಾಧ್ಯಕ್ಷರು ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.



ದೇವೇಗೌಡರು : ಕಾಂಗ್ರೆಸ್‌ನ ಹಿರಿಯ ಮುಖಂಡ ಧ್ರುವನಾರಾಯಣ ನಿಧನ ಸುದ್ದಿ ಕೇಳಿ ಆಘಾತವಾಗಿದ್ದು, ಅವರ ಅಗಲಿಕೆಯಿಂದ ರಾಜ್ಯ ರಾಜಕಾರಣಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಕಂಬನಿ ಮಿಡಿದಿದ್ದಾರೆ.



ಕುಮಾರಸ್ವಾಮಿ : ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಧ್ರುವನಾರಾಯಣ ನಿಧನ ಬಹಳ ನೋವುಂಟು ಮಾಡಿದ್ದು, ಬಡವರ ಪರ ಧ್ವನಿಯಾಗಿದ್ದ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ ಎಂದು ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.



ಸಿದ್ದರಾಮಯ್ಯ : ಸಂಸದೀಯ ಪಟುವಾಗಿ ತನ್ನ ಶ್ರಮ ಪ್ರಬುದ್ಧತೆ ಮತ್ತು ಬದ್ಧತೆಯಿಂದ ಉನ್ನತ ಸ್ಥಾನಕ್ಕೇರುವ ಎಲ್ಲಾ ಲಕ್ಷಣಗಳನ್ನು ಹೊಂದಿದ್ದ, ಧ್ರುವನಾರಾಯಣ ಅವರ ಬದುಕು ಅರ್ಧ ದಾರಿಯಲ್ಲೇ ಕೊನೆಗೊಂಡಿದ್ದು ತುಂಬಲಾರದ ನಷ್ಟವೆಂದು ಸಿದ್ದರಾಮಯ್ಯ ಶೋಕ ವ್ಯಕ್ತಪಡಿಸಿದ್ದಾರೆ.



ಅಶ್ವತ್ಥ್‌ನಾರಾಯಣ, ಸಿಸಿ ಪಾಟೀಲ್ : ಸಚಿವರಾದ ಸಿ.ಎನ್. ಅಶ್ವತ್ಥ್ ನಾರಾಯಣ, ಸಿಸಿ ಪಾಟೀಲ್ ಸೇರಿದಂತೆ ಹಲವು ಶಾಸಕರು, ವಿವಿಧ ಪಕ್ಷಗಳ ರಾಜಕೀಯ ಮುಖಂಡರು ಧ್ರುವನಾರಾಯಣ ಅವರ ನಿಧನಕ್ಕೆ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.



ಎಸ್.ಎಂ. ಕೃಷ್ಣ : ಸಂಭಾವಿತ ಸಜ್ಜನ ಉತ್ಸಾಹಿ ನಾಯಕರಾಗಿದ್ದ ಧ್ರುವನಾರಾಯಣ ಅವರ ಅಕಾಲಿಕ ನಿಧನದ ಸುದ್ದಿ ಕೇಳಿ ದುಃಖವಾಗಿದೆ. ನಾನು ಮುಖ್ಯಮಂತ್ರಿಯಾಗಿದ್ದಾಗ, ಸಂತೇಮರಹಳ್ಳಿಯ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿ, ಚಾಮರಾಜನಗರ ಜಿಲ್ಲೆ ಅಭಿವೃದ್ಧಿಗೆ ಶ್ರಮಿಸಿದ್ದರು ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.



ಬಿ.ಕೆ.ಹರಿಪ್ರಸಾದ್: ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಮಾತನಾಡಿ, ವಿದ್ಯಾರ್ಥಿಯಾಗಿದ್ದಾಗಿನಿಂದ ಕಾಂಗ್ರೆಸ್ ಪಕ್ಷ ಹಾಗೂ ಸಿದ್ಧಾಂತದ ಬಗ್ಗೆ ಅಚಲವಾದ ನಂಬಿಕೆ ಇಟ್ಟುಕೊಂಡು ಕಾರ್ಯಕರ್ತನಾಗಿ ಇಷ್ಟು ಎತ್ತರಕ್ಕೆ ಬೆಳೆದಿದ್ದಾರೆ. ಅವರು ಎನ್‌ಎಸ್‌ಯುಐ, ಯೂಥ್ ಕಾಂಗ್ರೆಸ್, ನಂತರ ಕೆಪಿಸಿಸಿಯಲ್ಲಿ ಕೆಲಸ ಮಾಡಿಕೊಂಡು 2 ಬಾರಿ ಶಾಸಕರಾಗಿ, 2 ಬಾರಿ ಸಂಸದರಾಗಿ ಕೆಲಸ ಮಾಡಿದ್ದಾರೆ ಎಂದರು.



ಡಿ.ಕೆ. ಶಿವಕುಮಾರ್ : ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, 'ಕಾಂಗ್ರೆಸ್ ಪಕ್ಷ ಹಾಗೂ ರಾಜಕಾರಣದ ಪರಿವಾರಕ್ಕೆ ಧ್ರುವನಾರಾಯಣ ಅವರ ಅಗಲಿಕೆ ದೊಡ್ಡ ಆಘಾತ ತಂದಿದೆ. ಭಗವಂತ ಯಾಕೆ ಇಷ್ಟು ಕ್ರೂರಿಯಾಗಿದ್ದಾನೆ ಎಂದು ತಿಳಿಯುತ್ತಿಲ್ಲ. ಧ್ರುವನಾರಾಯಣ ಅವರು ಅಜಾತ ಶತ್ರು. ಕಾಂಗ್ರೆಸ್ ಪಕ್ಷಕ್ಕೆ ಧೃವತಾರೆಯಾಗಿ ಸಮಾಜದ ಎಲ್ಲ ಸಮಾಜದವರನ್ನು ಒಟ್ಟಾಗಿ ತೆಗೆದುಕೊಂಡು ಹೋಗುತ್ತಿದ್ದ ಸರಳ ನಾಯಕರು ಎಂದು ಸ್ಮರಿಸಿದರು.


ತಮಗೆ ಕೊಟ್ಟ ಜವಾಬ್ದಾರಿಯನ್ನು ಚಾಚೂ ತಪ್ಪದೆ ನಿಭಾಯಿಸಿ ಪಕ್ಷಕ್ಕೆ ನಿಷ್ಠೆ, ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆಗೆ ಮತ್ತೊಂದು ಹೆಸರಾಗಿದ್ದರು. ನಮ್ಮ ಕಾರ್ಯಾಧ್ಯಕ್ಷರಾಗಿ ಕೋವಿಡ್ ಸಮಯದಲ್ಲಿ ಆರೋಗ್ಯ ಹಸ್ತ ಕಾರ್ಯಕ್ರಮವನ್ನು ನಿರ್ವಹಿಸಿದ ರೀತಿ, ಅವರ ಬದ್ಧತೆ ಅವಿಸ್ಮರಣೀಯವಾಗಿದೆ ಎಂದು ಕಂಬನಿ ಮಿಡಿದರು.



ಸುರ್ಜೇವಾಲ: ಕೆಪಿಸಿಸಿ ಕಚೇರಿಯಲ್ಲಿ ಧ್ರುವನಾರಾಯಣ ಅವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ಸಭೆಯಲ್ಲಿ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ, ಶೋಷಿತ ಮತ್ತು ವಂಚಿತ ವರ್ಗದ ಜನರ ಕಲ್ಯಾಣಕ್ಕೆ ಶ್ರಮಿಸುತ್ತಿದ್ದ ಧ್ರುವನಾರಾಯಣ ಅವರ ಅಗಲಿಕೆ ನಂಬಲು ಸಾಧ್ಯವಾಗುತ್ತಿಲ್ಲ. ನಂಜನಗೂಡಿನಲ್ಲಿ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ವಿತರಣೆ ಚಾಲನೆ ನೀಡುವುದಾಗಿ ನಿನ್ನೆ ಹೇಳಿದ್ದರು. ಇಂದು ಬೆಳಿಗ್ಗೆ ಅವರಿಂದ ಕರೆಯೇ ಬರಲಿಲ್ಲ ಎಂದು ದುಃಖ ವ್ಯಕ್ತಪಡಿಸಿದ್ದಾರೆ.



ಎಂ.ಬಿ. ಪಾಟೀಲ್ : ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್ ಮಾತನಾಡಿ ಧ್ರುವನಾರಾಯಣ ಅವರ ಅಗಲಿಕೆ ಸುದ್ದಿ ಕೇಳಿ ನಮ್ಮೆಲ್ಲರಿಗೂ ದಿಗ್ಭ್ರಮೆಯಾಗಿದೆ. ಅವರೊಬ್ಬ ಸರಳ ಸಜ್ಜನಿಕೆ, ಕ್ರಿಯಾಶೀಲ ರಾಜಕಾರಣಿ. ಅವರು ಶಾಸಕರಾಗಿದ್ದಾಗಲೂ ಕ್ರಿಯಾಶೀಲರಾಗಿ ಕೆಲಸ ಮಾಡಿದ್ದರು. ಸಂಸದರಾಗಿದ್ದಾಗ ರಾಜ್ಯದ ನೆಲ, ಜಲ, ಭಾಷೆ ವಿಚಾರ ಬಂದಾಗ ಸದನದಲ್ಲಿ ಧ್ವನಿ ಎತ್ತಿ ರಾಜ್ಯಕ್ಕೆ ನ್ಯಾಯ ಸಿಗುವಂತೆ ಮಾಡಲು ಹೋರಾಟ ಮಾಡಿದ್ದರು. ಅವರು ಕಾಳಜಿ ಹಾಗೂ ಬದ್ಧತೆ ಇದ್ದ ನಾಯಕ ಎಂದು ಸ್ಮರಿಸಿದರು.



ಚಾಮರಾಜನಗರ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ ನಿಧನ ಸುದ್ದಿ ಕೇಳಿ ಬರ ಸಿಡಿಲು ಬಡಿದಂತಾಯಿತು. ಸುದೀರ್ಘ ರಾಜಕೀಯ ಪಯಣದುದ್ದಕ್ಕೂ ಸರಳ, ಸಜ್ಜನ ಜನಪ್ರತಿನಿಧಿಯಾಗಿಯೇ ಉಳಿದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಕುಟುಂಬ ವರ್ಗಕ್ಕೆ ದೇವರು ದುಃಖ ಭರಿಸುವ ಶಕ್ತಿ ನೀಡಲಿ.

–ಕುರುಬೂರು ಶಾಂತಕುಮಾರ್, ರಾಜ್ಯ ಕಬ್ಬು ಬೆಳೆಗಾರರ ಸಂಘ

ಒಂದೇ ಮತದಿಂದ ಗೆದ್ದ ಅದೃಷ್ಟವಂತ ಧ್ರುವನಾರಾಯಣ

ಮೃದು ಭಾಷೆ, ಯಾರೊಂದಿಗೂ ದ್ವೇಷ ಕಟ್ಟಿಕೊಳ್ಳದ ವ್ಯಕ್ತಿತ್ವ, ಸದಾ ಅಭಿವೃದ್ಧಿ, ಜನರ ಜೊತೆ ಇರುತ್ತಿದ್ದ ರಾಜಕಾರಣಿ ಧ್ರುವನಾರಾಯಣ್. ಚುನಾವಣೆಯಲ್ಲಿ ಪ್ರತಿಯೊಂದು ಮತಕ್ಕೂ ಮೌಲ್ಯವಿದೆ ಎಂಬುದನ್ನು ರಾಜಕಾರಣಿಗಳಿಗೆ ಹಾಗೂ ಮತದಾರರಿಗೆ ಮನವರಿಕೆ ಮಾಡಿಕೊಟ್ಟ ಪ್ರಜಾಪ್ರಭುತ್ವದ ಅದೃಷ್ಟದ ಕೂಸು.

2004ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಧ್ರುವನಾರಾಯಣ್ ಪ್ರಥಮ ಬಾರಿಗೆ ಗೆದ್ದದ್ದು ಕೇವಲ ಒಂದು ಮತದ ಅಂತರದಿಂದ. ಆಗ ಈ ವಿಷಯ ಇಡೀ ದೇಶದ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಿತ್ತು. ಮೊದಲಿಗೆ 1999ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸಂತೇಮರಹಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಧ್ರುವನಾರಾಯಣ್, ಜೆಡಿಯು ಅಭ್ಯರ್ಥಿಯಾಗಿದ್ದ ಎ.ಆರ್. ಕೃಷ್ಣಮೂರ್ತಿ ವಿರುದ್ಧ ಪರಾಭವಗೊಂಡಿದ್ದರು. ನಂತರ 2004ರ ಚುನಾವಣೆ ವೇಳೆಗೆ ಕಾಂಗ್ರೆಸ್ ಸೇರ್ಪಡೆಯಾಗಿದ್ದ ಅವರು, ಅದೇ ಕ್ಷೇತ್ರದಲ್ಲಿ ಸ್ಪರ್ಧಿಸಿ, ಆಗ ಜೆಡಿಎಸ್ ಅಭ್ಯರ್ಥಿಯಾಗಿದ್ದ ಅದೇ ಎ.ಆರ್.ಕೃಷ್ಣಮೂರ್ತಿ ವಿರುದ್ಧ ಕೇವಲ ಒಂದೇ ಒಂದು ಮತದ ಅಂತರದಲ್ಲಿ ಗೆಲುವು ಸಾಧಿಸಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದರು.

ಆ ಚುನಾವಣೆಯಲ್ಲಿ ರಾಜ್ಯದಲ್ಲಿ ಅತೀ ಹೆಚ್ಚಿನ ಮತದ ಅಂತರದಿಂದ ಗೆದ್ದ ಕೃಷ್ಣ ಭೈರೇಗೌಡ ಹಾಗೂ ಕಡಿಮೆ ಮತದ ಅಂತರದಿಂದ ಗೆದ್ದು ಬೀಗಿದ್ದ ಧ್ರುವನಾರಾಯಣ್ ಅವರಿಬ್ಬರನ್ನೂ ಕರೆದು ಅಂದಿನ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಸನ್ಮಾನಿಸಿದ್ದು ಈಗ ಇತಿಹಾಸ. ತಮ್ಮ ಸಾರ್ವಜನಿಕ ಜೀವನದಲ್ಲಿ ಎಲ್ಲೂ ಎಡವದ ಧ್ರುವನಾರಾಯಣ, ಯಾವುದೇ ಕಪ್ಪುಚುಕ್ಕೆ ಹೊಂದಿರಲಿಲ್ಲ. ಕ್ಷೇತ್ರದ ಜನರ ಸಂಪರ್ಕಕ್ಕೆ ಸದಾ ಸಿಗುವ ಧ್ರುವನಾರಾಯಣ ಎದುರಾಳಿ ಪಕ್ಷಗಳ ಮುಖಂಡರೊಂದಿಗೂ ಉತ್ತಮ ಬಾಂಧವ್ಯವನ್ನೂ ಹೊಂದಿದ್ದರು.

ಚಾಮರಾಜನಗರದಲ್ಲಿ ಕೇಂದ್ರೀಯ ವಿದ್ಯಾಲಯದ ಹೊಸ ಕಟ್ಟಡದ ಉದ್ಘಾಟನೆಗೆ ಬಂದಿದ್ದ ಕೇಂದ್ರ ಸಚಿವ ದಿವಂಗತ ಅನಂತ ಕುಮಾರ್ ಅವರು, ಧ್ರುವನಾರಾಯಣ ಅವರು ನನ್ನ ಮೆಚ್ಚಿನ ಸಂಸದರಲ್ಲಿ ಒಬ್ಬರು ಎಂದು ಶ್ಲಾಘಿಸಿದ್ದರು.

ರಾಜಕಾರಣದ ಎಲ್ಲ ಪಟ್ಟುಗಳನ್ನು ಅರಿತಿದ್ದ ಅವರು, ಚಾಣಾಕ್ಷ ರಾಜಕಾರಣಿ ಎಂದೇ ರಾಜಕೀಯ ವಲಯದಲ್ಲಿ ಜನಜನಿತರಾಗಿದ್ದರು. ಶ್ರೀನಿವಾಸ ಪ್ರಸಾದ್ ನಂತರ ಮೈಸೂರು ಭಾಗದ ದಲಿತ ಸಮುದಾಯದ ಪ್ರಮುಖ ನಾಯಕರಾಗಿ ಹೊರಹೊಮ್ಮುತ್ತಿದ್ದರು.

ನಾನು ನಂಜನಗೂಡಿನಿಂದ ಸ್ಪರ್ಧಿಸ್ತೇನೆ, ತಮ್ಮ ಬೆಂಬಲ ಬೇಕು ಎಂದು ಕೇಳಿದ್ದರು

ಕಂಬನಿ ಮಿಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ



ಮೈಸೂರು, ಮಾ.11– 'ನಾನು ನಂಜನಗೂಡಿನಿಂದ ಸ್ಪರ್ಧಿಸುತ್ತೇನೆ, ತಮ್ಮ ಬೆಂಬಲ ಬೇಕು' ಎಂದು ಆರ್.ಧ್ರುವನಾರಾಯಣ್ ನಾಲ್ಕು ದಿನಗಳ ಹಿಂದೆ ಕೇಳಿದ್ದರು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಮರಿಸಿಕೊಂಡರು.

ವಿಜಯನಗರ ನಿವಾಸದಲ್ಲಿ ಆರ್.ಧ್ರುವನಾರಾಯಣ್ ಅಂತಿಮ ದರ್ಶನ ಪಡೆದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಧ್ರುವನಾರಾಯಣ್ ಅವರ ನಿಧನ ದೊಡ್ಡ ಆಘಾತ. ಇದನ್ನು ಯಾರೂ ನಿರೀಕ್ಷೆ ಮಾಡಿರಲಿಲ್ಲ. ನಾಲ್ಕು ದಿನಗಳ ಹಿಂದೆ ನಮ್ಮ ಮನೆಗೆ ಬಂದು 'ನಾನು ನಂಜನಗೂಡಿನಿಂದ ಸ್ಪರ್ಧಿಸುತ್ತೇನೆ, ತಮ್ಮ ಬೆಂಬಲ ಬೇಕು' ಎಂದು ಕೇಳಿದ್ದರು. ನಾನು ದೆಹಲಿಗೆ ಹೋಗುತ್ತಿದ್ದೇನೆ, ಎಲ್ಲವೂ ರಿವ್ಯೂ ಆದ ಮೇಲೆ ನೋಡಿಕೊಂಡು ತಿಳಿಸುತ್ತೇನೆ. ನೀನು ಚಿಂತೆ ಮಾಡಬೇಡ ಎಂದು ಹೇಳಿದ್ದೆ ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷದ ಆಶಾವಾದಿ, ಶಿಸ್ತಿನ ಮನುಷ್ಯರಾಗಿದ್ದ ಧ್ರುವನಾರಾಯಣ್, ಯಾರ ಬಳಿಯೂ ಒಂದು ನಯಾಪೈಸೆಯನ್ನೂ ಮುಟ್ಟಿಲ್ಲ. ಪ್ರಾಮಾಣಿಕವಾಗಿ ಜೀವನ ನಡೆಸಿ, ಜನರ ಸೇವೆ ಮಾಡುವ ಮೂಲಕ ಅವರ ನಿಜವಾದ ಪ್ರೀತಿ ಗಳಿಸಿದ್ದರು. ಬೆಂಗಳೂರಿಗೆ ಬಂದಾಗಲೆಲ್ಲಾ ಭೇಟಿ ಮಾಡುತ್ತಿದ್ದರು. 20 ವರ್ಷಗಳ ಹಿಂದೆ ಅವರು ಪೆಟ್ರೋಲ್ ಬಂಕ್ ಆರಂಭಿಸುವ ಸಂದರ್ಭದಲ್ಲೂ ನನ್ನನ್ನು ಭೇಟಿ ಮಾಡಿ ಆಶೀರ್ವಾದ ಪಡೆದುಕೊಂಡಿದ್ದರು ಎಂದು ನೆನೆದು ಕಂಬನಿ ಮಿಡಿದರು.

ಧ್ರುವನಾರಾಯಣ್ ನಿಧನದಿಂದ ತುಂಬಾ ನೋವಾಗಿದೆ. ಇಂದು ಮುಂಜಾನೆ ಸುದ್ದಿ ತಿಳಿದಾಗ ಶಾಕ್ ಆಯಿತು. ತಕ್ಷಣ ನಾನು ಸೋನಿಯಾ ಗಾಂಧಿ ಅವರಿಗೆ ವಿಷಯ ತಿಳಿಸಿದೆ ನಂತರ ಅವರು ಧ್ರುವನಾರಾಯಣ್ ಅವರ ಪುತ್ರನೊಂದಿಗೆ ಫೋನ್ ಮೂಲಕ ಮಾತನಾಡಿದ್ದಾರೆ. ಈಗ ರಾಹುಲ್ ಗಾಂಧಿ ಅವರು ಮಾತನಾಡಿದರು. ಧ್ರುವನಾರಾಯಣ್ ಕುಟುಂಬದ ಜೊತೆ ಸದಾ ಕಾಂಗ್ರೆಸ್ ಪರಿವಾರ ಇದ್ದೇ ಇರುತ್ತದೆ ಎಂದು ಹೇಳಿದರು.



ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ ಅಕಾಲಿಕ ಅಗಲಿಕೆಯಿಂದ ತೀವ್ರ ನೋವುಂಟಾಗಿದೆ. ಸರಳ, ಸಜ್ಜನ ರಾಜಕಾರಣಿಯಾಗಿದ್ದ ಅವರು, ಜನಪ್ರತಿನಿಧಿಗಳಿಗೆ ಮಾದರಿಯಾಗಿದ್ದರು. ಅವರು ಯಾರ ಬಗ್ಗೆಯೂ ಲಘುವಾಗಿ ಮಾತನಾಡಿರುವ ಉದಾಹರಣೆ ಇಲ್ಲ. ಎಲ್ಲರನ್ನೂ ಅತ್ಯಂತ ಪ್ರೀತಿ, ವಿಶ್ವಾಸದಿಂದ ಕಾಣುತ್ತಿದ್ದರು. ಅವರ ಆತ್ಮಕ್ಕೆ ಭಗವಂತ ಚಿರಶಾಂತಿ ನೀಡಲಿ.

–ಸಂದೇಶ್ ಸ್ವಾಮಿ, ಮಾಜಿ ಮೇಯರ್

ಧ್ರುವನಾರಾಯಣ್ ನಿಧನ ಕಾಂಗ್ರೆಸ್, ನಾಡಿಗೆ ತುಂಬಲಾರದ ನಷ್ಟ


ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಇತರ ನಾಯಕರ ಕಂಬನಿ

ಮೈಸೂರು, ಮಾ.11– ಆರ್.ಧ್ರುವನಾರಾಯಣ್ ಅಕಾಲಿಕ ಅಗಲಿಕೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಮಾತ್ರವಲ್ಲ ಇಡೀ ನಾಡಿಗೆ ತುಂಬಲಾಗದ ನಷ್ಟವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾವುಕರಾಗಿ ನುಡಿದರು.

ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಕ್ಕೆ ತೆರಳಿ ಧ್ರುವನಾರಾಯಣ್ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು, ಕುಟುಂಬದವರಿಗೆ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ಪಕ್ಷದ ನಾಯಕ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ನಿಧನದ ವಾರ್ತೆ ಕೇಳಿ ತುಂಬಾ ಆಘಾತವಾಯಿತು. ಅವರು ತಮ್ಮ ಯಾವುದೇ ಜವಾಬ್ದಾರಿಯಲ್ಲಿ ಬದ್ಧತೆ, ಪ್ರಬುದ್ಧತೆ ಮೆರೆದಿದ್ದರು ಎಂದು ಸ್ಮರಿಸಿಕೊಂಡರು.

ಅವರ ಅಕಾಲಿಕ ಸಾವು ಎಲ್ಲರಿಗೂ ಭಾರೀ ನೋವುಂಟು ಮಾಡಿದೆ. ಅಂತಹ ಸಜ್ಜನ, ಸರಳ ವ್ಯಕ್ತಿಗೆ ಅಕಾಲಿಕ ಸಾವು ಬಂದಿದೆ ಎಂಬುದನ್ನು ನಂಬಲು ಸಾಧ್ಯವಾಗುತ್ತಿಲ್ಲ. ಶಿಸ್ತುಬದ್ಧ ಜೀವನ ನಡೆಸುತ್ತಿದ್ದ ಧ್ರುವನಾರಾಯಣ್‌ಗೆ ಡಯಾಬಿಟಿಸ್ ಇತ್ತು ಎಂಬುದನ್ನು ಬಿಟ್ಟರೆ ತುಂಬಾ ಆರೋಗ್ಯವಾಗಿದ್ದರು. ನಂಜನಗೂಡಲ್ಲಿ ಶುಕ್ರವಾರವೂ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಕಾಂಗ್ರೆಸ್ ಕಾರ್ಯಾಧ್ಯಕ್ಷರಾಗಿ ಒಂದು ದಿನವೂ ವಿಶ್ರಮಿಸದೆ ಇಡೀ ರಾಜ್ಯ ಸಂಚಾರ ಮಾಡಿ ಪಕ್ಷ ಸಂಘಟನೆ ಮಾಡುತ್ತಿದ್ದರು. ಅವರ ಸಾವಿನಿಂದ ಪಕ್ಷಕ್ಕೆ ಹಾಗೂ ನಾಡಿಗೆ ತುಂಬಲಾರದ ನಷ್ಟವಾಗಿದೆ ಎಂದರು.

ಜನಪ್ರತಿನಿಧಿಯಾಗಿದ್ದಾಗಲೂ ಹಗಲಿರುಳು ಕೆಲಸ ಮಾಡುತ್ತಿದ್ದರು. ಸಂಸದರಾಗಿದ್ದಾಗ 'ನಂಬರ್–1 ಎಂಪಿ' ಎಂದೇ ಖ್ಯಾತರಾಗಿದ್ದ ಧ್ರುವನಾರಾಯಣ್ ಎಲ್ಲಾ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದರು. ಸೌಮ್ಯ ಸ್ವಭಾವದ ಜಾತಿ, ಧರ್ಮ ಭೇದವಿಲ್ಲದೆ ಎಲ್ಲರನ್ನೂ ಪ್ರೀತಿಸುತ್ತಿದ್ದ ಅಪರೂಪದ ವ್ಯಕ್ತಿತ್ವ ಅವರದ್ದಾಗಿತ್ತು. ಹೆಚ್.ಎಸ್. ಮಹದೇವಪ್ರಸಾದ್ ನಿಧನದಿಂದ ಉಂಟಾಗಿದ್ದ ಪಕ್ಷದ ಹಿನ್ನಡೆಯನ್ನು ಧ್ರುವನಾರಾಯಣ್ ತುಂಬಿದ್ದರು. ಇದೀಗ ಅವರೇ ನಿಧನರಾಗಿರುವುದರಿಂದ ಮತ್ತೆ ನಮ್ಮ ಪಕ್ಷಕ್ಕೆ ಬಹು ದೊಡ್ಡ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಕುಟುಂಬಕ್ಕೆ ಹಾಗೂ ಅಭಿಮಾನಿಗಳಿಗೆ ದೇವರು ದುಃಖ ಭರಿಸುವ ಶಕ್ತಿ ನೀಡಲಿ ಎಂದು ಸಿದ್ದರಾಮಯ್ಯ ನುಡಿದರು.



ಮಾಜಿ ಸಂಸದರು ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಆರ್.ಧ್ರುವನಾರಾಯಣ್ ಅವರ ಅಕಾಲಿಕ ನಿಧನದಿಂದ ಬಹಳ ನೋವುಂಟಾಗಿದೆ. ಅವರು ಅತ್ಯಂತ ಸಜ್ಜನ ರಾಜಕಾರಣಿಯಾಗಿದ್ದರು. ನನಗೆ ಆತ್ಮೀಯರೂ ಆಗಿದ್ದ ಅವರು ಸಾಮಾಜಿಕ ಬದ್ಧತೆಯಿಂದ ಜನಾನುರಾಗಿಯಾಗಿ ಎಲ್ಲರ ಪ್ರೀತಿ ಸಂಪಾದಿಸಿದ್ದರು. ಎರಡು ಬಾರಿ ಶಾಸಕರಾಗಿ, ಎರಡು ಬಾರಿ ಸಂಸದರಾಗಿ ಜನರ ಆಶೋತ್ತರಗಳಿಗೆ ಧ್ವನಿಯಾಗಿದ್ದರು. ಅಧಿಕಾರ ಇಲ್ಲದಿದ್ದಾಗಲೂ ಅವರು ಜನರಿಂದ ವಿಮುಖರಾಗದೆ ಕಷ್ಟ–ಸುಖಗಳಲ್ಲಿ ಭಾಗಿಯಾಗುತ್ತಿದ್ದರು. ಇವರ ನಿಧನ ಅಪಾರ ಸಂಖ್ಯೆಯ ಅವರ ಅಭಿಮಾನಿಗಳಿಗೆ ನೋವುಂಟು ಮಾಡಿದೆ.

–ಎಸ್.ಟಿ.ಸೋಮಶೇಖರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು.



ಆರ್.ಧ್ರುವನಾರಾಯಣ್ ನಾಡು ಕಂಡ ಅಪರೂಪದ ಸರಳ ಸಜ್ಜನಿಕೆಯ ರಾಜಕಾರಣಿಯಾಗಿದ್ದರು. ಸದಾ ನಗುಮೊಗದಿಂದ ಎದುರಾಗುತ್ತಿದ್ದ ಧ್ರುವನಾರಾಯಣ್ ನಿಧನದಿಂದ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ. ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ರಾಜ್ಯದಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದ ಅವರು, ಅತ್ಯಂತ ಪ್ರಾಮಾಣಿಕ ಮತ್ತು ಶಿಸ್ತಿನ ಸಿಪಾಯಿಯಾಗಿದ್ದರು. ಎಂದೂ ಸಹ ದ್ವೇಷದ ರಾಜಕಾರಣ ಮಾಡದ ಅಪರೂಪದ ರಾಜಕಾರಣಿಯಾಗಿದ್ದರು. ನಂಜನಗೂಡಿಂದ ಸ್ಪರ್ಧಿಸಲು ಬಯಸಿದ್ದೇನೆ ಎಂದು ಹೇಳಿದ್ದರು. ರಾಜಶೇಖರಮೂರ್ತಿ ಅವರೊಂದಿಗಿದ್ದ ಕಾಲದಿಂದಲೂ ನನ್ನ ಆತ್ಮೀಯ ಸ್ನೇಹಿತರಾಗಿದ್ದ ಧ್ರುವನಾರಾಯಣ್ ನಿಧನ ಅತೀವ ನೋವುಂಟು ಮಾಡಿದೆ. ಅವರ ಕುಟುಂಬವರ್ಗ ಹಾಗೂ ಅಪಾರ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ದಯಪಾಲಿಸಲಿ.

–ಜಿ.ಟಿ.ದೇವೇಗೌಡ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ



ಧ್ರುವನಾರಾಯಣ್ ಅವರ ನಿಧನ ತುಂಬಾ ಆಘಾತ ತಂದಿದೆ. ಅವರ ಜೀವನ ಶೈಲಿ ಅತ್ಯಂತ ಶಿಸ್ತಿನಿಂದ ಕೂಡಿತ್ತು. ಅವರಿಗೆ ಯಾವುದೇ ಆರೋಗ್ಯ ಸಮಸ್ಯೆಗಳು ಇರಲಿಲ್ಲ. ಬೆಳಗಿನ ಜಾವ ಅವರ ನಿಧನ ವಿಷಯ ಕೇಳಿ ಆಘಾತವಾಯಿತು. ಅವರು ಆಯ್ಕೆಗೊಂಡ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುತ್ತಿದ್ದರು. ಅಭಿವೃದ್ಧಿ ಪರವಾದ ನಿಲುವುಗಳನ್ನು ಹೊಂದಿದ್ದರು. ಹಾಗೇ ಪಕ್ಷ ವಹಿಸಿದ ಜವಾಬ್ದಾರಿಗಳನ್ನು ಶಿಸ್ತಿನಿಂದ ನಿರ್ವಹಿಸುತ್ತಿದ್ದರು. ಆರೋಗ್ಯವಾಗಿದ್ದ ಅವರ ಅಗಲಿಕೆ ಕುಟುಂಬ ಮತ್ತು ಜನತೆಗೆ ತೀವ್ರ ದುಃಖ ತಂದಿದೆ.

–ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವ



ವಿ.ಶ್ರೀನಿವಾಸಪ್ರಸಾದ್ ನನಗೆ ರಾಜಕೀಯ ಗುರುಗಳು. ನನ್ನ ಆಡಳಿತಾತ್ಮಕ ಗುರು ಆರ್.ಧ್ರುವನಾರಾಯಣ್ ಅವರಾಗಿದ್ದರು. ಧ್ರುವನಾರಾಯಣ್ ಅವರ ಅಕಾಲಿಕ ಅಗಲಿಕೆಯಿಂದ ವೈಯಕ್ತಿಕವಾಗಿ ನಷ್ಟವಾಗಿದೆ. ಅವರನ್ನು ನೋಡಿ ನಾನು ಸಾಕಷ್ಟು ಕಲಿತಿದ್ದೇನೆ. ಸಂಸದರಾಗಿ ಅವರು ಕ್ಷೇತ್ರಕ್ಕೆ ಹೇಗೆ ಅನುದಾನ ತರುತ್ತಿದ್ದರು ಎನ್ನುವುದನ್ನು ಕಂಡು ಅದರಿಂದ ಪ್ರೇರೇಪಿತನಾಗಿ ನಂಜನಗೂಡು ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ತಂದು ಅವರಂತೆ ಕೆಲಸ ಮಾಡಿದ್ದೇನೆ. ಶುಕ್ರವಾರ ತಾಲೂಕಿನ ಕಣ್ಣನವರು ಗ್ರಾಮದಲ್ಲಿ ಪ್ರಚಾರದ ವೇಳೆ ಅವರನ್ನು ನೋಡಿದ್ದೆ. ಕಾಂಗ್ರೆಸ್ ಪಕ್ಷ ನಂಜನಗೂಡು ಕ್ಷೇತ್ರದ ಟಿಕೆಟ್ ವಿಚಾರವಾಗಿ ಇಬ್ಬರು ಹೆಸರನ್ನು ಹೈಕಮಾಂಡ್‌ಗೆ ಕಳುಹಿಸಿದ್ದರು. ಇದರಿಂದ ಅವರು ಉದ್ವೇಗಕ್ಕೆ ಒಳಗಾಗಿದ್ದರು ಎಂದು ಕೇಳಿದ್ದೇನೆ. ಅವರ ಅಗಲಿಕೆ ದಲಿತ ಸಮುದಾಯಕ್ಕೆ ಹಾಗೂ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ.

–ಬಿ.ಹರ್ಷವರ್ಧನ್, ನಂಜನಗೂಡು ಶಾಸಕ



ಸದಾ ಹಸನ್ಮುಖಿಯಾಗಿದ್ದ ಆರ್.ಧ್ರುವನಾರಾಯಣ್ ಅವರು ಕಳೆದ 3 ದಶಕಗಳಿಂದ 2 ಬಾರಿ ಶಾಸಕರಾಗಿ, 2 ಸಂಸದರಾಗಿ ಜನಾನುರಾಗಿದ್ದರು. ಸಂತೆಮರಹಳ್ಳಿ ಕ್ಷೇತ್ರದಿಂದ ಒಂದು ಮತದಿಂದ ಗೆದ್ದು, ದೇಶವೇ ಒಮ್ಮೆ ತಿರುಗಿ ನೋಡುವಂತೆ ಮಾಡಿದ್ದ ಅವರು ಎಂದೂ ದೊಡ್ಡ ರಾಜಕಾರಣಿಯಂತೆ ವರ್ತಿಸಲಿಲ್ಲ. ಅಜಾತಶತ್ರು ಧ್ರುವನಾರಾಯಣ್ ಅವರ ಅಗಲಿಕೆ ನಾಡಿಗೆ ತುಂಬಲಾರದ ನಷ್ಟ, ದೇವರು ಅವರ ಕುಟುಂಬ ವರ್ಗದವರಿಗೆ ನೋವು ಭರಿಸುವ ಶಕ್ತಿ ಕರುಣಿಸಲಿ.

–ಕೆ.ವಿ.ಮಲ್ಲೇಶ್, ಜೆಡಿಎಸ್ ಮುಖಂಡ




ಆರ್.ಧ್ರುವನಾರಾಯಣ್ ಅವರ ಅಗಲಿಕೆ ಅತೀವ ನೋವು ತಂದಿದೆ. ಅವರ ಅಗಲಿಕೆಯಿಂದ ಸಮಾಜಮುಖಿ ರಾಜಕಾರಣಕ್ಕೆ ತುಂಬಲಾರದ ನಷ್ಟವಾಗಿದೆ. ಸಂತೇಮರಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿ ಒಂದು ಮತದಿಂದ ಗೆಲುವು ಸಾಧಿಸುವ ಮೂಲಕ ಮೊದಲ ಬಾರಿ ವಿಧಾನಸಭೆ ಪ್ರವೇಶಿಸಿದ ಅವರು, ಜನರ ಸಮಸ್ಯೆಗಳ ಪಟ್ಟಿ ಮಾಡಿಕೊಂಡು ಆ ಬಗ್ಗೆ ಸದನದಲ್ಲಿ ಧ್ವನಿ ಎತ್ತಿ ಪರಿಹಾರ ಕಂಡುಕೊಳ್ಳುತ್ತಿದ್ದರು. ನಂತರ ಚಾಮರಾಜನಗರ ಲೋಕಸಭಾ ಸದಸ್ಯರಾಗಿಯೂ ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸಿದ್ದರು. ಚುನಾವಣೆಯಲ್ಲಿ ಸೋತಾಗಲೂ ಕ್ಷೇತ್ರದಿಂದ ವಿಮುಖರಾಗದೆ ಸದಾ ಜನರೊಂದಿಗಿದ್ದ ಅಪರೂಪದ ರಾಜಕಾರಣಿಯಾಗಿದ್ದರು.

–ಬಡಗಲಪುರ ನಾಗೇಂದ್ರ, ಕರ್ನಾಟಕ ರಾಜ್ಯ ರೈತ ಸಂಘ



ಮಾಜಿ ಸಂಸದ ಆರ್.ಧ್ರುವನಾರಾಯಣ ಅವರ ಹಠಾತ್ ನಿಧನ ಆಘಾತ ಉಂಟು ಮಾಡಿದೆ. ನನಗೆ ವೈಯಕ್ತಿಕವಾಗಿ ಬಹಳ ಆತ್ಮೀಯರಾಗಿದ್ದರು. 2019ರ ಲೋಕಸಭಾ ಚುನಾವಣೆಯಲ್ಲಿ ಅವರಿಗೆ ನಮ್ಮ ಪಕ್ಷ ಬೆಂಬಲ ನೀಡಿತ್ತು. ಚಾಮರಾಜನಗರದ ನಗರಸಭಾ ಚುನಾವಣೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳು ಗೆದ್ದಾಗ ಧ್ರುವನಾರಾಯಣ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿದ್ದೆವು. ಆ ವೇಳೆ ನಮ್ಮ ಪಕ್ಷಕ್ಕೆ ಉಪಾಧ್ಯಕ್ಷ ಸ್ಥಾನವನ್ನು ನೀಡಲಾಗಿತ್ತು. ಬಹಳ ಸೌಮ್ಯ ಸ್ವಭಾವದ ಅವರು ಎಲ್ಲರ ಮಾತನ್ನೂ ಅತ್ಯಂತ ಸಹನೆಯಿಂದ ಆಲಿಸಿ ಸ್ಪಂದಿಸುತ್ತಿದ್ದರು. ಅವರು ಸಂಸದರಾಗಿದ್ದಾಗ ಚಾಮರಾಜನಗರದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಅವರ ಅಕಾಲಿಕ ಅಗಲಿಕೆಯನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಕರುಣಿಸಲಿ.

–ಅಬ್ದುಲ್ ಮಜೀದ್, ಎಸ್‌ಡಿಪಿಐ ರಾಜ್ಯಾಧ್ಯಕ್ಷ



ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ ಅಕಾಲಿಕ ಮರಣ ದಲಿತ ಸಮುದಾಯಕ್ಕೆ ಹಾಗೂ ರಾಜ್ಯ ರಾಜಕಾರಣಕ್ಕೆ ತುಂಬಲಾರದ ನಷ್ಟ, ಎಲ್ಲಾ ಸಮುದಾಯದ ಜನರು ಸಹ ಅತ್ಯಂತ ಪ್ರೀತಿಯಿಂದ ಇಷ್ಟಪಡುತ್ತಿದ್ದ ರಾಜಕಾರಣಿಗಳಲ್ಲಿ ಆರ್.ಧ್ರುವನಾರಾಯಣ್ ಒಬ್ಬರು. ಯಾರನ್ನು ದ್ವೇಷಿಸದ ಜನಾನುರಾಗಿ ಸಜ್ಜನ ರಾಜಕಾರಣಿಯಾಗಿದ್ದರು. ದಲಿತ ಸಮುದಾಯದ ಬಹುದೊಡ್ಡ ನಾಯಕರಾಗಿ ಬೆಳೆದಿದ್ದರು. ಅವರ ಅಕಾಲಿಕ ಮರಣ ಅತ್ಯಂತ ದುಃಖವನ್ನುಂಟು ಮಾಡಿದೆ.

–ಎಸ್.ಮಹದೇವಯ್ಯ, ಬಿಜೆಪಿ ಮುಖಂಡ

ಚಾಮರಾಜನಗರ ಜಿಲ್ಲೆಗೆ ರಾಷ್ಟ್ರೀಯ ಹೆದ್ದಾರಿ, ಶಿಕ್ಷಣ– ಸಂಸ್ಥೆಗಳು, ಪಾಸ್‌ಪೋರ್ಟ್ ಕೇಂದ್ರ ದಕ್ಕಿತು

ಕ್ರಿಯಾಶೀಲ ಹಾಗೂ ಸಜ್ಜನ ರಾಜಕಾರಣಿಯಾಗಿದ್ದ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರು ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಯ ಕನಸು ಕಂಡಿದ್ದರು.

ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಯಲ್ಲಿ ಆರ್. ಧ್ರುವನಾರಾಯಣ್ ಕೊಡುಗೆ ಅಪಾರ. ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ, ಕೇಂದ್ರೀಯ ವಿದ್ಯಾಲಯ ಸ್ಥಾಪನೆ, ಪಾಸ್‌ಪೋರ್ಟ್ ಕೇಂದ್ರ ಸ್ಥಾಪನೆ, ಕೃಷಿ ವಿಜ್ಞಾನ ಕಾಲೇಜು ಸ್ಥಾಪನೆ, ಕಾನೂನು ಕಾಲೇಜು ಮಂಜೂರು, ಜಿಲ್ಲೆಯ ಹೋಬಳಿಗೊಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ, ನಳಂದ ಬೌದ್ಧ ವಿಹಾರಕ್ಕೆ ಸರ್ಕಾರದಿಂದ ಅನುದಾನ ಮಂಜೂರು, ಸಂತೇಮರಹಳ್ಳಿಯಲ್ಲಿ ಬಿಲ್ವಿ ವಿದ್ಯೆ ಶಾಲೆ ಸ್ಥಾಪನೆ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದರು.

ಶಾಸಕರು, ಸಂಸದರಾಗಿದ್ದಾಗ ಕ್ಷೇತ್ರ ಹಾಗೂ ಜಿಲ್ಲೆಯ ಅಭಿವೃದ್ಧಿಯೇ ನನ್ನ ಮಾನದಂಡ ಎಂದು ಧ್ರುವನಾರಾಯಣ್ ಭಾವಿಸಿದ್ದರು. ಇದಕ್ಕಾಗಿ ಅವರು ಅಪಾರವಾಗಿ ಶ್ರಮಿಸಿದ್ದರು. ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗೆ ನಾಂದಿ ಹಾಡಿದ್ದೆ ಧ್ರುವನಾರಾಯಣ್.

ಕೇಂದ್ರೀಯ ವಿದ್ಯಾಲಯ ಸ್ಥಾಪನೆ ಆಗಬೇಕಾದರೆ ಕನಿಷ್ಠ 10 ಎಕರೆ ಜಾಗ ಇರಲೇಬೇಕು ಎಂಬುದು ಕೇಂದ್ರ ಸರ್ಕಾರದ ಮಾರ್ಗಸೂಚಿ. ಆದರೆ, ಚಾಮರಾಜನಗರದ ಮಾದಾಪುರದ ಬಳಿ ಸರ್ಕಾರದ ಭೂಮಿ 7.5 ಎಕರೆ ಮಾತ್ರ ಇತ್ತು. ಇದನ್ನು ಗುರುತಿಸಿದ್ದ ಧ್ರುವನಾರಾಯಣ್ ತಾವು ಸಂಸದರಾಗಿದ್ದಾಗ ಸರ್ಕಾರದ ಮೇಲೆ ಒತ್ತಡ ತಂದು ಚಾಮರಾಜನಗರ ಹಿಂದುಳಿದ ಜಿಲ್ಲೆ ಎಂಬುದನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟು 10 ಎಕರೆ ಇರಬೇಕಾದ ನಿಯಮಾವಳಿಯನ್ನು ಬದಲಾಯಿಸಿ ನಗರದಲ್ಲಿ ಕೇಂದ್ರೀಯ ವಿದ್ಯಾಲಯ ಸ್ಥಾಪನೆಗೆ ಕಾರಣೀಭೂತರಾದರು.

ಕೇಂದ್ರೀಯ ವಿದ್ಯಾಲಯ ಸ್ಥಾಪನೆಯಾಗಿ 8 ವರ್ಷ ಆಗಿದ್ದು, ಈಗ ಪ್ರಸ್ತುತ ಶಾಲೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ

ಜಿಲ್ಲೆಯ ಜನರು ಪಾಸ್‌ಪೋರ್ಟ್ ಮಾಡಿಸಲು ಮೈಸೂರು, ಬೆಂಗಳೂರಿಗೆ ತೆರಳುತ್ತಿದ್ದರು. ಈ ವಿಷಯ ಅರಿತ ಧ್ರುವನಾರಾಯಣ್ ಅವರು ನಗರದ ಸಂತೇಮರಹಳ್ಳಿ ರಸ್ತೆಯಲ್ಲಿರುವ ಮುಖ್ಯ ಅಂಚೆ ಕಚೇರಿಯಲ್ಲಿ ಪಾಸ್‌ಪೋರ್ಟ್ ಕೇಂದ್ರ ಸ್ಥಾಪನೆಗೆ ಕಾರಣೀಭೂತರಾದರು. ಈಗ ಈ ಕೇಂದ್ರದಲ್ಲಿ ಸಾವಿರಾರು ಜನರು ಪಾಸ್‌ಪೋರ್ಟ್ ಮಾಡಿಸಿದ್ದಾರೆ. ಹೊರ ಜಿಲ್ಲೆಗಳಿಂದಲೂ ಜನರು ಇಲ್ಲಿಗೆ ಬಂದು ಪಾಸ್‌ಪೋರ್ಟ್ ಮಾಡಿಸುತ್ತಿದ್ದಾರೆ.

ಹರದನಹಳ್ಳಿ ಸಮೀಪ ಕೃಷಿ ವಿಜ್ಞಾನ ಕಾಲೇಜು ಸ್ಥಾಪನೆ ನಗರಕ್ಕೆ ಕಾನೂನು ಕಾಲೇಜು ಮಂಜೂರಾಗಲು ಧ್ರುವನಾರಾಯಣ್ ಕಾರಣರಾಗಿದ್ದು, ತಾಂತ್ರಿಕ ಕಾರಣಗಳಿಂದ ಇನ್ನು ಕಾಲೇಜು ಆರಂಭವಾಗಿಲ್ಲ. ಆದರೆ, ಈ ಕಾಲೇಜು ನಗರಕ್ಕೆ ಮಂಜೂರಾಗಲು ಧ್ರುವನಾರಾಯಣ್ ಪಟ್ಟ ಕಷ್ಟ ಅಷ್ಟಿಷ್ಟಲ್ಲ.

ಧ್ರುವನಾರಾಯಣ್ ಸಂಸದರಾಗಿದ್ದ ಎರಡು ಅವಧಿಯಲ್ಲಿ ಜಿಲ್ಲೆಯ ಹೋಬಳಿಗೊಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾರಂಭಿಸಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. ಎಲ್ಲಾ ಸಭೆ–ಸಮಾರಂಭಗಳಲ್ಲಿ ಶಿಕ್ಷಣಕ್ಕೆ ಆದ್ಯತೆ ನೀಡುವಂತೆ ಮನವಿ ಮಾಡುತ್ತಿದ್ದರು.

ನಗರದಲ್ಲಿ ನಿರ್ಮಾಣವಾಗುತ್ತಿರುವ ನಳಂದ ಬೌದ್ಧ ವಿಹಾರಕ್ಕೆ ಜಾಗ ಮಂಜೂರು ಮತ್ತು ಅನುದಾನ ಬಿಡುಗಡೆ ಮಾಡಿಸುವಲ್ಲಿ ಧ್ರುವನಾರಾಯಣ್ ಪಾತ್ರ ಅಪಾರ. ಇದನ್ನು ಸ್ವತಃ ಬೌದ್ಧ ವಿಹಾರದ ಮುಖ್ಯಸ್ಥರೇ ಬಹಿರಂಗವಾಗಿ ಹೇಳುತ್ತಿದ್ದರು. ಇದಲ್ಲದೇ ಜಿಲ್ಲೆಯಲ್ಲಿ ನಾನಾ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಜಿಲ್ಲೆಯ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಜಿಲ್ಲೆಯ ಸಮಗ್ರ ಅಭಿವೃದ್ಧಿಯ ಕನಸು ಹೊತ್ತಿದ್ದರು.

ಆರು ಬಾರಿ ಸ್ಪರ್ಧೆ; ನಾಲ್ಕು ಬಾರಿ ಗೆಲುವು, ಎರಡು ಬಾರಿ ಸೋಲು

ಮೂರು ಬಾರಿ ವಿಧಾನಸಭೆಗೆ, ಮೂರು ಬಾರಿ ಲೋಕಸಭೆಗೆ ಸ್ಪರ್ಧಿಸಿದ್ದ ಧ್ರುವನಾರಾಯಣ್ ಅವರು ನಾಲ್ಕು ಬಾರಿ ಗೆದ್ದು, ಎರಡು ಬಾರಿ ಸೋತಿದ್ದರು. ವಿಶೇಷವೆಂದರೆ ಅವರು ಮೊದಲ ಮತ್ತು ಕೊನೆಯ ಚುನಾವಣೆಯಲ್ಲಿ ಸೋತಿದ್ದರು.

1999ರಲ್ಲಿ ಅವರು ಬಿಜೆಪಿಯಿಂದ ಎ.ಆರ್. ಕೃಷ್ಣಮೂರ್ತಿ ವಿರುದ್ಧ ಸ್ಪರ್ಧಿಸಿ, ಸೋಲು ಕಂಡಿದ್ದರು. ಆ ಬಳಿಕ ಕಾಂಗ್ರೆಸ್ ಸೇರ್ಪಡೆಗೊಂಡಿದ್ದರು. ಕೈ ಪಾಳಯಕ್ಕೆ ಬಂದ ನಂತರ ರಾಜಕೀಯವಾಗಿ ಉನ್ನತ ಸ್ಥಾನಕ್ಕೆ ಏರುತ್ತಾ ಹೋದರು.

2004ರ ವಿಧಾನಸಭಾ ಚುನಾವಣೆಯಲ್ಲಿ ಸಂತೇಮರಹಳ್ಳಿ ಕ್ಷೇತ್ರದಲ್ಲಿ ಎ.ಆರ್. ಕೃಷ್ಣಮೂರ್ತಿ ಅವರ ವಿರುದ್ಧ ಒಂದು ಮತದಿಂದ ರೋಚಕವಾಗಿ ಗೆದ್ದು ದೇಶದಾದ್ಯಂತ ಧ್ರುವನಾರಾಯಣ ಸುದ್ದಿಯಾಗಿದ್ದರು. ಈ ಮೂಲಕ ಜಿಲ್ಲೆಯಲ್ಲಿ ರಾಜಕೀಯ ನೆಲೆ ಭದ್ರಪಡಿಸಿದ್ದರು. ಕ್ಷೇತ್ರ ಮರುವಿಂಗಡಣೆಯ ನಂತರ ಸಂತೇಮರಹಳ್ಳಿ ಕ್ಷೇತ್ರ ಇರಲಿಲ್ಲ. 2008ರ ಚುನಾವಣೆಯಲ್ಲಿ ಕೊಳ್ಳೇಗಾಲದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಎರಡನೇ ಬಾರಿಗೆ ವಿಧಾನಸಭೆಗೆ ಆಯ್ಕೆಯಾಗಿದ್ದರು.

ರಾಷ್ಟ್ರ ರಾಜಕಾರಣಕ್ಕೆ: 2009ರ ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷವು ಧ್ರುವನಾರಾಯಣ ಅವರನ್ನು ಚಾಮರಾಜನಗರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಘೋಷಿಸಿತು. ಬಿಜೆಪಿಯ ಅಭ್ಯರ್ಥಿಯಾಗಿದ್ದ ಎ.ಆರ್. ಕೃಷ್ಣಮೂರ್ತಿ ವಿರುದ್ಧ 4,002 ಮತಗಳ ಅಂತರದಿಂದ ಗೆದ್ದು ರಾಷ್ಟ್ರ ರಾಜಕಾರಣಕ್ಕೆ ಹೋದರು. ಸಂಸದರಾಗಿ ಆಯ್ಕೆಯಾದ ನಂತರ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

2014ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಅವರು ಮತ್ತೆ ಎ.ಆರ್. ಕೃಷ್ಣಮೂರ್ತಿ ವಿರುದ್ಧ 1,41,182 ಮತಗಳ ಭಾರೀ ಅಂತರದಲ್ಲಿ ಗೆಲುವು ಸಾಧಿಸಿದ್ದರು. ಕ್ಷೇತ್ರದಾದ್ಯಂತ ಉತ್ತಮ ಸಂಸದ ಎಂದು ಮನೆ ಮಾತಾಗಿದ್ದ ಅವರು, ಸಂಸದರ ಪ್ರದೇಶಾಭಿವೃದ್ಧಿ ನಿಧಿ ಬಳಕೆಯಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದ್ದರು. ಅವರ ಎರಡು ಅವಧಿಯಲ್ಲಿ ಜಿಲ್ಲೆಯಲ್ಲಿ ಹಲವು ಅಭಿವೃದ್ಧಿ ಕೆಲಸಗಳಾಗಿದ್ದವು.

2019ರ ಚುನಾವಣೆಯಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸುವ ನಿರೀಕ್ಷೆಯಲ್ಲಿದ್ದರು. ಆದರೆ ಬಿಜೆಪಿಯಿಂದ ಸ್ಪರ್ಧಿಸಿದ್ದ ವಿ.ಶ್ರೀನಿವಾಸ ಪ್ರಸಾದ್ ವಿರುದ್ಧ 1,817 ಮತಗಳ ಅಂತರದಲ್ಲಿ ಸೋತಿದ್ದರು.

ಮೈಸೂರು ಮಿತ್ರ

ಮೂರನೇ ಪುಟದಿಂದ

ಆರ್.ಧ್ರುವನಾರಾಯಣ ಇನ್ನಿಲ್ಲ

ಉದ್ಯಮಿಗಳಾದ ಮಂಜುನಾಥ್ ಮತ್ತು ಸತೀಶ್ ಧಾವಿಸಿದ್ದಾರೆ. ಅದೇ ವೇಳೆ ಅವರ ನೆರೆಮನೆಯವರೇ ಆದ ಡಿಆರ್‌ಎಂ ಆಸ್ಪತ್ರೆ ಮುಖ್ಯಸ್ಥ ಡಾ. ಮಂಜುನಾಥ್, ಜಾಗಿಂಗ್ ಮುಗಿಸಿ ಬರುತ್ತಿದ್ದ ವೇಳೆ ಮನೆಯಲ್ಲಿದ್ದವರು ಕೂಗಿದ ಹಿನ್ನೆಲೆಯಲ್ಲಿ ಮನೆ ಒಳಗೆ ಹೋಗಿ ನೋಡಿದಾಗ ರಕ್ತಸ್ರಾವದಿಂದ ಅವರು ಬೆಡ್‌ನಿಂದ ಕೆಳಗೆ ಮಕಾಡೆ ಬಿದ್ದಿದ್ದರು. ಅವರನ್ನು ಪರೀಕ್ಷಿಸಿ ದಾಗ ನಾಡಿ ಮಿಡಿತ ಮತ್ತು ಹೃದಯ ಬಡಿತ ನಿಂತಿತ್ತು ಎಂದು ಹೇಳಲಾಗಿದ್ದು, ತಕ್ಷಣವೇ ಅವರು ಧ್ರುವನಾರಾಯಣ್ ಅವರ ಕುಟುಂಬ ವೈದ್ಯರಾದ ಹೃದ್ರೋಗ ತಜ್ಞ ಡಾ. ಸದಾನಂದ ಅವರಿಗೆ ವಿಷಯ ತಿಳಿಸಿ ಧ್ರುವ ಅವರನ್ನು ಡಿಆರ್‌ಎಂ ಆಸ್ಪತ್ರೆಗೆ ಕೊಂಡೊಯ್ದು, ಚಿಕಿತ್ಸೆ ಪ್ರಾರಂಭಿಸಿದ್ದಾರೆ. ಅಷ್ಟರಲ್ಲೇ ಆಸ್ಪತ್ರೆಗೆ ಧಾವಿಸಿ ಬಂದ ಡಾ.ಸದಾನಂದ ಅವರು ಡಾ.ಮಂಜುನಾಥ್ ಹಾಗೂ ವೈದ್ಯರ ತಂಡದೊಡ ಗೂಡಿ ಧ್ರುವನಾರಾಯಣ ಅವರನ್ನು ಉಳಿಸಲು ಸುಮಾರು ಒಂದೂವರೆ ಗಂಟೆಗಳ ಕಾಲ ಎಲ್ಲಾ ಪ್ರಯತ್ನವನ್ನು ಮಾಡಿದರಾದರೂ, ಅದಕ್ಕೆ ಧ್ರುವ ಸ್ಪಂದಿಸಲಿಲ್ಲ. ಕೊನೆಗೆ ಬೆಳಗ್ಗೆ 8.50ರ ಸುಮಾರಿಗೆ ವೈದ್ಯರು ಧ್ರುವನಾರಾಯಣ್ ಅವರು ನಿಧನರಾದ ವಿಷಯವನ್ನು ಅಧಿಕೃತವಾಗಿ ಘೋಷಿಸಿದ್ದಾರೆ.

ಶಾಸಕರಾದ ಡಾ.ಯತೀಂದ್ರ, ಎಲ್.ನಾಗೇಂದ್ರ, ಅನಿಲ್ ಚಿಕ್ಕಮಾದು, ಹೆಚ್.ಪಿ. ಮಂಜುನಾಥ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯಕುಮಾರ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಸೇರಿದಂತೆ ಪಕ್ಷಾತೀತವಾಗಿ ರಾಜಕೀಯ ಮುಖಂಡರು ಡಿಆರ್‌ಎಂ ಆಸ್ಪತ್ರೆಗೆ ಧಾವಿಸಿ ಬಂದರು. ಧ್ರುವನಾರಾಯಣ್ ಅವರ ನಿಧನದ ವಿಷಯ ಹರಡುತ್ತಿದ್ದಂತೆಯೇ ರಾಜಕೀಯ ಮುಖಂಡರು ಹಾಗೂ ಅಭಿಮಾನಿಗಳ ದಂಡು ಧ್ರುವನಾರಾಯಣ್ ಅವರ ನಿವಾಸದತ್ತ ದೌಡಾಯಿಸಿದೆ. ಬೆಳಗ್ಗೆ 9.15ರ ಸುಮಾರಿನಲ್ಲಿ ಪಾರ್ಥಿವ ಶರೀರವನ್ನು ಅವರ ನಿವಾಸಕ್ಕೆ ತರಲಾಯಿತು.

ಧ್ರುವನಾರಾಯಣ್ ಅವರ ಸಾವಿರಾರು ಅಭಿಮಾನಿಗಳು ನಿವಾಸದತ್ತ ಧಾವಿಸಿ ಅಗಲಿದ ನಾಯಕನಿಗಾಗಿ ಕಂಬನಿ ಮಿಡಿದರು. ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳ ಆಕ್ರಂದನ ಮುಗಿಲು ಮುಟ್ಟಿತ್ತು. ಅದೇ ವೇಳೆ ಧ್ರುವನಾರಾಯಣ ನಿವಾಸದ ಪಕ್ಕದ ರಸ್ತೆಯಲ್ಲೇ ವಾಸವಿರುವ ಸಂಸದ ಪ್ರತಾಪ್ ಸಿಂಹ ಅವರೂ ಕೂಡ ಆಗಮಿಸಿ ಹಿರಿಯ ರಾಜಕಾರಣಿಗೆ ಅಶ್ರುತರ್ಪಣ ಸಲ್ಲಿಸಿದರು.

ಧ್ರುವನಾರಾಯಣ್ ಅವರ ರಾಜಕೀಯ ಮಾರ್ಗದರ್ಶಿಗಳೂ ಆಗಿದ್ದ ಚಾಮರಾಜ ನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು ತಮ್ಮ ಅಳಿಯ ನಂಜನಗೂಡು ಶಾಸಕ ಹರ್ಷವರ್ಧನ್ ಜೊತೆ ಧ್ರುವನಾರಾಯಣ್ ನಿವಾಸಕ್ಕೆ ಆಗಮಿಸಿ ಅಂತಿಮ ದರ್ಶನ ಪಡೆದು, ಕಂಬನಿ ಮಿಡಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಅವರ ಸಹೋದರರೂ ಆದ ಸಂಸದ ಡಿ.ಕೆ.ಸುರೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಶಾಸಕರಾದ ಸಾ.ರಾ.ಮಹೇಶ್, ಸಿ.ಎನ್. ಮಂಜೇಗೌಡ, ಮಾಜಿ ಸಂಸದ ಎಸ್.ವಿ.ಉಗ್ರಪ್ಪ, ಮಾಜಿ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ಹೆಚ್.ಆಂಜನೇಯ, ತನ್ವೀರ್ ಸೇಠ್, ಯು.ಟಿ.ಖಾದರ್, ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ, ಕೆ.ವೆಂಕಟೇಶ್, ಪ್ರೊ ಮಲ್ಲಿಕಾರ್ಜುನಪ್ಪ ಧರ್ಮಸೇನಾ, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್ ಗೌಡ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮುಖಂಡರಾದ ಹೆಚ್.ಎ.ವೆಂಕಟೇಶ್, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಪುಷ್ಪಲತಾ ಜಗನ್ನಾಥ್, ಭಾಗ್ಯವತಿ, ಪಿ.ಗೋವಿಂದರಾಜ್ ಸೇರಿದಂತೆ ಪಕ್ಷಾತೀತವಾಗಿ ನೂರಾರು ರಾಜಕೀಯ ಮುಖಂಡರು ಅಜಾತಶತ್ರು ಧ್ರುವನಾರಾಯಣ್ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಸಂಜೆ 4.50ಕ್ಕೆ ಸಂಪೂರ್ಣ ಪಾರದರ್ಶಕ, ವಿಶೇಷ ವಾಹನದಲ್ಲಿ ಪಾರ್ಥಿವ ಶರೀರವನ್ನು ರೈಲ್ವೆ ನಿಲ್ದಾಣದ ಬಳಿ ಇರುವ ಕಾಂಗ್ರೆಸ್ ಕಚೇರಿಗೆ ತರಲಾಯಿತು. ಸಂಜೆ 5.40ರ ಸುಮಾರಿಗೆ ಪಾರ್ಥಿವ ಶರೀರ ಕಾಂಗ್ರೆಸ್ ಕಚೇರಿ ತಲುಪಿದಾಗ ಅದಾಗಲೇ ವ್ಯವಸ್ಥೆ ಮಾಡಿದ್ದ ವಿಶೇಷ ವೇದಿಕೆಯಲ್ಲಿ ಪಾರ್ಥಿವ ಶರೀರವನ್ನಿಟ್ಟು 6.30ರವರೆಗೆ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ನೆರೆದಿದ್ದ ಸಾವಿರಾರು ಅಭಿಮಾನಿಗಳು 'ಧ್ರುವನಾರಾಯಣ್ ಅಮರ್ ಹೈ' ಎಂದು ಘೋಷಣೆ ಕೂಗಿದರು. ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾ ಸೇವಾ ದಳದ ವತಿಯಿಂದ ಧ್ರುವನಾರಾಯಣ್ ಪಾರ್ಥಿವ ಶರೀರಕ್ಕೆ ಕಾಂಗ್ರೆಸ್ ಧ್ವಜ ಹೊದಿಸಿ ಧ್ವಜ ವಂದನೆ ಸಲ್ಲಿಸಲಾಯಿತು.

ನಂತರ ಧ್ರುವನಾರಾಯಣ ಪಾರ್ಥಿವ ಶರೀರವನ್ನು ನಂಜನಗೂಡು ಮಾರ್ಗವಾಗಿ ಚಾಮರಾಜನಗರ ಜಿಲ್ಲೆಯ ಅವರ ಸ್ವಗ್ರಾಮ ಹೆಗ್ಗವಾಡಿಗೆ ಕೊಂಡೊಯ್ಯಲಾಯಿತು.

ಸ್ವಗ್ರಾಮ ತಲುಪಿದ ಪಾರ್ಥಿವ ಶರೀರ

ಶರೀರ ರಾತ್ರಿ 12.05ಕ್ಕೆ ಚಾಮರಾಜನಗರ ತಲುಪಿತು. ಚಾಮರಾಜನಗರದ ನಂಜನಗೂಡು ಸರ್ಕಲ್‌ನಲ್ಲಿ ಪಾರ್ಥಿವ ಶರೀರವನ್ನು ಬರಮಾಡಿಕೊಂಡರು. ಈ ವೇಳೆ ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಅಂತಿಮ ನಮನ ಸಲ್ಲಿಸಿದರು.

ನಂತರ ಚಾಮರಾಜನಗರದ ಜಿಲ್ಲಾ ಕಾಂಗ್ರೆಸ್ ಕಚೇರಿ ಬಳಿ ಕೆಲ ಕಾಲ ಇಡಲಾಗಿತ್ತು. ಈ ವೇಳೆ ಶಾಸಕ ಪುಟ್ಟರಂಗಶೆಟ್ಟಿ, ಮಾಜಿ ಶಾಸಕರುಗಳಾದ ಎ.ಆರ್.ಕೃಷ್ಣಮೂರ್ತಿ, ಬಾಲರಾಜ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಮರಿಸ್ವಾಮಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ನಾರಾಯಣ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದು, ಅಂತಿಮ ದರ್ಶನ ಪಡೆದರು. ನಂತರ ಅಲ್ಲಿಂದ ಹೊರಟ ಪಾರ್ಥಿವ ಶರೀರ ಹೆಗ್ಗವಾಡಿ ಗ್ರಾಮವನ್ನು ತಲುಪಿತು.

ಪ್ರಧಾನಮಂತ್ರಿ ನರೇಂದ್ರ ಮೋದಿ ಉದ್ಘಾಟನೆ

ಆಗಮಿಸಲಿದ್ದಾರೆ. ಅಲ್ಲಿಂದ ರೋಡ್ ಶೋ ಮೂಲಕ 14 ಕಿ.ಮೀ. ಅಂತರದಲ್ಲಿರುವ ಗೆಜ್ಜಲಗೆರೆಗೆ ಪ್ರಧಾನಿ ಮೋದಿ ತೆರಳಲಿದ್ದು, ಮಧ್ಯಾಹ್ನ 12 ಗಂಟೆಗೆ ದಶಪಥ ಹೆದ್ದಾರಿ ಲೋಕಾರ್ಪಣೆ ಮಾಡಲಿದ್ದಾರೆ. ಮೋದಿ ರೋಡ್ ಶೋ ಹಿನ್ನೆಲೆಯಲ್ಲಿ ಮಂಡ್ಯ ನಗರದಿಂದ ಗೆಜ್ಜಲಗೆರೆವರೆಗೆ ಬಿಜೆಪಿ ಬಾವುಟ ಹಾಗೂ ನಾಯಕರ ಫ್ಲೆಕ್ಸ್‌ಗಳು ರಾರಾಜಿಸುತ್ತಿವೆ. ಭದ್ರತಾ ದೃಷ್ಟಿಯಿಂದ ಈ ಮಾರ್ಗದಲ್ಲಿ ರಸ್ತೆಯ ಎರಡೂ ಬದಿಯಲ್ಲೂ ಕಬ್ಬಿಣದ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿದೆ. ಪಿಇಎಸ್ ಕಾಲೇಜಿನಿಂದ ನಂದ ಚಿತ್ರಮಂದಿರದವರೆಗಿನ ರಸ್ತೆಯ ಇಕ್ಕೆಲಗಳಲ್ಲಿರುವ ಕಟ್ಟಡಗಳು, ಪಾರ್ಕ್‌ಗಳು, ಸಣ್ಣಪುಟ್ಟ ಅಂಗಡಿ-ಮುಂಗಟ್ಟುಗಳನ್ನು ಎಸ್‌ಪಿಜಿ ಅಧಿಕಾರಿಗಳು ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನ ದಳದೊಂದಿಗೆ ತಪಾಸಣೆ ನಡೆಸಿ, ಸದರಿ ಸ್ಥಳಗಳಲ್ಲಿ ಶನಿವಾರದಿಂದಲೇ ಹದ್ದಿನ ಕಣ್ಣಿಟ್ಟಿದ್ದಾರೆ. ರಸ್ತೆಯ ಎರಡೂ ಬದಿಗಳಲ್ಲೂ ನಿಂತು ಸಾರ್ವಜನಿಕರು ಪ್ರಧಾನಿ ಮೋದಿಯವರ ರೋಡ್ ಶೋ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಆದರೆ ಯಾರೊಬ್ಬರೂ ಬ್ಯಾರಿಕೇಡ್ ದಾಟಿ ರಸ್ತೆಗಿಳಿಯದಂತೆ ಈ ಮಾರ್ಗದುದ್ದಕ್ಕೂ ಸುಮಾರು 6 ಸಾವಿರ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ರೋಡ್ ಶೋ ಹಿನ್ನೆಲೆಯಲ್ಲಿ ಇಂದು ಎಸ್‌ಪಿಜಿ ಅಧಿಕಾರಿಗಳು ತಾಲೀಮು ನಡೆಸಿದರು. ಇಂದಿನಿಂದಲೇ ರೋಡ್ ಶೋ ಮಾರ್ಗದ ಅಂಗಡಿ-ಮುಂಗಟ್ಟುಗಳನ್ನು ಬಂದ್ ಮಾಡಲಾಗಿದೆ. ಕೆಲವೆಡೆ ಸಾರ್ವಜನಿಕರಿಗಾಗಿ ಪೆಂಡಾಲ್ ಹಾಕಿರುವುದು ಕಂಡು ಬಂದಿದೆ.

ಈ ಹಿಂದೆ ಭಾರತದ ಪ್ರಧಾನಿಗಳಾಗಿದ್ದ ಜವಹಾರ್ ಲಾಲ್ ನೆಹರು, ಚರಣ್ ಸಿಂಗ್ ಮಂಡ್ಯಕ್ಕೆ ಭೇಟಿ ನೀಡಿದ್ದರು. ಅದಾದ ನಂತರ ಇದೀಗ ನಾಳೆ ಪ್ರಧಾನಿ ಮೋದಿ ಮಂಡ್ಯಗೆ ಆಗಮಿಸುತ್ತಿದ್ದಾರೆ. ಮಾಜಿ ಪ್ರಧಾನಿಗಳಾದ ದಿವಂಗತ ಇಂದಿರಾ ಗಾಂಧಿ, ರಾಜೀವ್ ಗಾಂಧಿ ಹಾಗೂ ಅಟಲ್ ಬಿಹಾರಿ ವಾಜಪೇಯಿ ಮಂಡ್ಯಕ್ಕೆ ಆಗಮಿಸಿದ್ದರು. ಮೋದಿ ಸಹ ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ 2004ರಲ್ಲಿ ಮದ್ದೂರಲ್ಲಿ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿದ್ದ ಬಿಜೆಪಿ ಅಭ್ಯರ್ಥಿ ಮಹೇಶ್ ಚಂದ್ ಪರ ಪ್ರಚಾರಕ್ಕೆ ಬಂದಿದ್ದರು.

ವೇದಿಕೆ ಕಾರ್ಯಕ್ರಮಕ್ಕೆ ತೆರಳಲು ವಾಹನಗಳ ಮಾರ್ಗ

ಹುಣ್ಣನದೊಡ್ಡಿ- ಬೋರಾಪರ ಗೇಟ್ ಮಾರ್ಗವಾಗಿ ಮದ್ದೂರು ಪಟ್ಟಣದ 4 ಕಿಲೋ ಮೀಟರ್ ಹಿಂದಕ್ಕೆ ಎಡ ಭಾಗದಲ್ಲಿ ಕುದುರುಗುಂಡಿ ಕಾಲೋನಿಗೆ ಹೋಗುವ ಮಾರ್ಗದಲ್ಲಿ ಹೋಗಿ ವಾಹನ ಪಾರ್ಕಿಂಗ್ ಮಾಡಿ, ವೇದಿಕೆಯತ್ತ ಬರಬೇಕು.

ಮದ್ದೂರು ಮಾರ್ಗ: ಮದ್ದೂರು ಮತ್ತು ಸುತ್ತಮುತ್ತಲ ಕಡೆಯಿಂದ ತೆರಳುವ ವಾಹನಗಳು, ಮದ್ದೂರು- ಐ.ಬಿ.ವೃತ್ತ- ಮಳವಳ್ಳಿ ರಸ್ತೆಯಿಂದ 4 ಕಿಮೀ ಮುಂದಕ್ಕೆ ಹೋಗಿ ಬಲಗಡೆಗೆ ಕುದುರುಗುಂಡಿ ಕಾಲೋನಿಗೆ ಹೋಗುವ ಮಾರ್ಗದಲ್ಲಿ ಹೋಗಿ ಪಾರ್ಕಿಂಗ್ ಸ್ಥಳಕ್ಕೆ ತೆರಳಿ ಬಳಿಕ ವೇದಿಕೆಗೆ ಆಗಮಿಸಬೇಕು.

ಮಂಡ್ಯ ಮಾರ್ಗ: ಮಂಡ್ಯ ಕಡೆಯಿಂದ ಬರುವ ವಾಹನಗಳು ಹನಕೆರೆ ಸರ್ವೀಸ್ ರೋಡ್‌ನಿಂದ ಗೆಜ್ಜಲಗೆರೆ ಗ್ರಾಮದ ಬಳಿ ಬಂದು ಗೆಜ್ಜಲಗೆರೆ ಅಂಡರ್‌ಪಾಸ್‌ನಿಂದ ಕುದುರುಗುಂಡಿ ಗ್ರಾಮದ ಮೂಲಕ ಕುದುರುಗುಂಡಿ ಕಾಲೋನಿ ಮಾರ್ಗವಾಗಿ ಪಾರ್ಕಿಂಗ್ ಜಾಗಕ್ಕೆ ತೆರಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ತಿಳಿಸಿದ್ದಾರೆ.

ವಾಹನ ಸಂಚಾರ ಮಾರ್ಗ ಬದಲಾವಣೆ

ಶ್ರೀರಂಗಪಟ್ಟಣ-ಪಾಂಡವಪುರ-ನಾಗಮಂಗಲ-ಬೆಳ್ಳೂರು ಕ್ರಾಸ್-ಕುಣಿಗಲ್-ನೆಲಮಂಗಲ-ಬೆಂಗಳೂರು ಮಾರ್ಗವಾಗಿ ಬೆಂಗಳೂರು ಮತ್ತು ಮೈಸೂರಿಗೆ ಸಂಚರಿಸಬಹುದು. ಮೈಸೂರು ನಗರದಿಂದ ಬೆಂಗಳೂರಿಗೆ ಅಥವಾ ಬೆಂಗಳೂರಿನಿಂದ ಮೈಸೂರಿಗೆ ತಲುಪಲು ಮತ್ತೊಂದು ಬದಲಿ ರಸ್ತೆ ಇದ್ದು, ಮೈಸೂರು-ಬನ್ನೂರು-ಕಿರುಗಾವಲು-ಮಳವಳ್ಳಿ-ಹಲಗೂರು-ಕನಕಪುರ-ಬೆಂಗಳೂರು ಮಾರ್ಗವಾಗಿ ಬೆಂಗಳೂರು ಮತ್ತು ಮೈಸೂರಿಗೆ ಸಂಚಾರ ಮಾಡಬಹುದು. ಮೈಸೂರು ನಗರದಿಂದ ಬೆಂಗಳೂರಿಗೆ ಅಥವಾ ಬೆಂಗಳೂರಿನಿಂದ ಮೈಸೂರಿಗೆ ತಲುಪಲು ಮಗದೊಂದು ಬದಲಿ ವ್ಯವಸ್ಥೆ ಇದ್ದು, ಬೆಂಗಳೂರು-ಕೆಂಗೇರಿ-ರಾಮನಗರ- ಚನ್ನಪಟ್ಟಣ-ಹಲಗೂರು-ಮಳವಳ್ಳಿ-ಕಿರುಗಾವಲು-ಬನ್ನೂರು-ಮೈಸೂರು ಮಾರ್ಗವಾಗಿಯೂ ಬೆಂಗಳೂರು ಮತ್ತು ಮೈಸೂರಿಗೆ ಸಂಚರಿಸಬಹುದು. ಮೈಸೂರು ನಗರದಿಂದ ತುಮಕೂರಿಗೆ ಮಂಡ್ಯ, ಮದ್ದೂರು ಮಾರ್ಗವಾಗಿ ಸಂಚರಿಸಲಿರುವ ಎಲ್ಲಾ ರೀತಿಯ ವಾಹನಗಳು ಮೈಸೂರು-ಶ್ರೀರಂಗಪಟ್ಟಣ-ಪಾಂಡವಪುರ-ನಾಗಮಂಗಲ-ಕುಣಿಗಲ್-ತುಮಕೂರು ಮಾರ್ಗವಾಗಿ ಮೈಸೂರು ಮತ್ತು ತುಮಕೂರಿಗೆ ತೆರಳಬಹುದು. ಬೆಂಗಳೂರಿನಿಂದ ಮದ್ದೂರು ಮಾರ್ಗವಾಗಿ ಮಹದೇಶ್ವರ ಬೆಟ್ಟಕ್ಕೆ ತೆರಳುವ ಎಲ್ಲಾ ರೀತಿಯ ವಾಹನಗಳು ಬೆಂಗಳೂರು-ಕೆಂಗೇರಿ-ರಾಮನಗರ-ಚನ್ನಪಟ್ಟಣ-ಹಲಗೂರು-ಮಳವಳ್ಳಿ-ಕೊಳ್ಳೇಗಾಲ-ಮಹದೇಶ್ವರಬೆಟ್ಟ ಮಾರ್ಗವಾಗಿ ಬೆಂಗಳೂರು, ಮಹದೇಶ್ವರ ಬೆಟ್ಟಕ್ಕೆ ಸಂಚರಿಸಬಹುದು.

ಶರಣರ ಕಾಯಕ, ರಾಷ್ಟ್ರೀಯತೆ ಕುರಿತು ವಿಚಾರ ಸಂಕಿರಣ

'ರಾಷ್ಟ್ರೀಯತೆ' ಪರಿಕಲ್ಪನೆ ನಮ್ಮಲ್ಲಿ ಕರ್ತವ್ಯ ಪ್ರಜ್ಞೆ ಮೂಡಿಸುತ್ತದೆ

ಆರ್‌ಎಸ್‌ಎಸ್ ಹಿರಿಯ ಪ್ರಚಾರಕ ಸು.ರಾಮಣ್ಣ ಅಭಿಮತ



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣವನ್ನು ಆರ್‌ಎಸ್‌ಎಸ್ ಹಿರಿಯ ಪ್ರಚಾರಕ ಸು.ರಾಮಣ್ಣ ಉದ್ಘಾಟಿಸಿದರು.

ಮೈಸೂರು,ಮಾ.11(ಪಿಎಂ)- 'ರಾಷ್ಟ್ರೀಯತೆ' ಪರಿಕಲ್ಪನೆ ದೇಶದ ಕುರಿತಾಗಿ ನಮ್ಮಲ್ಲಿ ಕರ್ತವ್ಯ ಪ್ರಜ್ಞೆ ಮೂಡಿಸುತ್ತದೆ. ಈ ಪರಿಕಲ್ಪನೆಯಲ್ಲಿ ಕರ್ತವ್ಯ ಭಾವವಿದೆಯೇ ಹೊರತು ಹಕ್ಕೊತ್ತಾಯವಿಲ್ಲ. ದೇಶ ಮತ್ತು ಆಡಳಿತದಿಂದ ಹಕ್ಕಿನ ರೂಪದಲ್ಲಿ ಅಪೇಕ್ಷಿಸುವುದು ಆರೋಗ್ಯಕರವಲ್ಲ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಹಿರಿಯ ಪ್ರಚಾರಕ ಸು.ರಾಮಣ್ಣ ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕದ ವತಿಯಿಂದ '12ನೇ ಶತಮಾನದ ದೇಶೀಜ್ಞಾನ-ಕಾಯಕ', '21ನೇ ಶತಮಾನದ ರಾಷ್ಟ್ರೀಯ ಶಿಕ್ಷಣ ನೀತಿ' ಮತ್ತು 'ಶರಣರ ಚಳುವಳಿ-ಒಂದು ರಾಷ್ಟ್ರೀಯ ಚಳುವಳಿ' ಕುರಿತಂತೆ ಶನಿವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ 'ರಾಷ್ಟ್ರೀಯತೆ-ಪ್ರಸ್ತುತತೆ' ಕುರಿತು ಅವರು ಆಶಯ ನುಡಿಗಳನ್ನಾಡಿದರು.

'ರಾಷ್ಟ್ರ', 'ರಾಷ್ಟ್ರೀಯತೆ' ಮತ್ತು 'ರಾಷ್ಟ್ರೀಯ' ಈ ಮೂರು ಶಬ್ದಗಳ ಭಾವಾರ್ಥ ಮರೆತ ಪರಿಣಾಮ ದೇಶವು ಬ್ರಿಟೀಷರ ಗುಲಾಮಗಿರಿಗೆ ಒಳಗಾಯಿತು. ಇದರ ವಿರುದ್ಧ ನಡೆದ ಹೋರಾಟದಿಂದ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಡಿಸುವಲ್ಲಿ ಸಫಲವಾಗಲಿಲ್ಲ. ಇದು ದುಃಖದ ಸಂಗತಿ. ದೇಶ, ರಾಜ್ಯ ಮತ್ತು ರಾಷ್ಟ್ರ ಎಂಬ ಶಬ್ದಗಳು ಬೇರೆ ಬೇರೆ ಅರ್ಥ ಹೊಂದಿವೆ. 'ರಾಜ್ಯ' ಎನ್ನುವುದು ಆಡಳಿತಾತ್ಮಕ ಪರಿಕಲ್ಪನೆ ಆಗಿದ್ದು, ಅಂತೆಯೇ ಬ್ರಿಟಿಷರು ರಾಜ್ಯಾಳ್ವಿಕೆಗೆ ಆದ್ಯತೆ ನೀಡಿದ್ದರು. 'ದೇಶ' ಎಂದರೆ ಭೌಗೋಳಿಕ ಕಲ್ಪನೆ. 'ರಾಷ್ಟ್ರ' ಭೌಗೋಳಿಕ, ಆಡಳಿತಾತ್ಮಕ ಎಂಬ ಎರಡೂ ಅಲ್ಲ. ಅದು ಈ ಎಲ್ಲವನ್ನೂ ಒಳಗೊಂಡಿದೆ ಎಂದು ವಿಶ್ಲೇಷಿಸಿದರು.

'ನಾಗರಿಕ' ಮತ್ತು 'ರಾಷ್ಟ್ರೀಯತೆ' ಈ ಎರಡೂ ಬೇರೆ ಬೇರೆಯೇ ಆಗಿವೆ. 12 ವರ್ಷಗಳು ಈ ದೇಶದಲ್ಲಿ ನೆಲೆಸಿದರೆ ಸಿಟಿಜನ್ ಆಗಬಹುದು. ಇದಾದ ತಕ್ಷಣ ತಲೆಯಲ್ಲಿ ಹಕ್ಕು ಪಡೆಯುವ ವಿಚಾರ ಮೊಳಕೆಯೊಡೆಯುತ್ತದೆ. ಅದಕ್ಕಾಗಿ ಹೋರಾಟ ನಡೆಸಲಾಗುತ್ತದೆ. ಎಲ್ಲಿ ಹಕ್ಕೊತ್ತಾಯ ಎಂದು ಬರುತ್ತದೋ ಅಲ್ಲಿ ಒಡಕು ಮತ್ತು ಸಂಘರ್ಷ ಬರುತ್ತದೆ. ರಾಷ್ಟ್ರ ಎನ್ನುವುದರೊಳಗೆ ಇದು ಇಲ್ಲ ಎಂದರು.

'ರಾಷ್ಟ್ರೀಯತೆ'ಯಲ್ಲಿ ಎಲ್ಲಾ ಜನರ ಸುಖ-ದುಃಖದಲ್ಲಿ ಸಮನಾಭೂತಿ ವ್ಯಕ್ತವಾಗುತ್ತದೆ. ಬದಲಿಗೆ ಸಹಾನುಭೂತಿಯಲ್ಲ. ಸಮನಾಭೂತಿ ಎಂದರೆ ಸಂಕಷ್ಟ ದೂರು ಮಾಡುವ ಪ್ರಯತ್ನ ಮತ್ತು ಸಂತೋಷ ಹಂಚಿಕೊಳ್ಳುವ ಉದಾರತೆಯಾಗಿದೆ. ಹಾಗಾಗಿ ರಾಷ್ಟ್ರೀಯತೆ ಎನ್ನುವುದರಲ್ಲಿ ಕರ್ತವ್ಯ ಭಾವವಿದೆಯೇ ಹೊರತು, ಹಕ್ಕೊತ್ತಾಯ ಇಲ್ಲ. ಈ ದೇಶ ಮತ್ತು ಸರ್ಕಾರದಿಂದ ಸದಾ ಕಾಲವೂ ಹಕ್ಕಿನ ರೂಪದಲ್ಲಿ ಅಪೇಕ್ಷಿಸುವುದು ಅನಾರೋಗ್ಯಕರ. ರಾಷ್ಟ್ರೀಯತೆಯಲ್ಲಿ ಕರ್ತವ್ಯ ಪ್ರಧಾನವಾಗಿದ್ದು, ಇಲ್ಲಿ ಹಕ್ಕೊತ್ತಾಯವಿಲ್ಲ. ರಾಷ್ಟ್ರದ ರಾಷ್ಟ್ರೀಯನಾಗಬೇಕಾದರೆ ಕರ್ತವ್ಯ ಪ್ರಜ್ಞೆ ಮುಖ್ಯ ಎಂದು ತಿಳಿಸಿದರು.

ಒಳಾರ್ಥ ಅರಿಯದೇ ಹಾಡುತ್ತೇವೆ: ಒಬ್ಬ ದೇಶಭಕ್ತ ಎನ್ನಿಸಿಕೊಂಡವನು ಒಂದು ಹಾಡು ಬರೆದಿದ್ದು, ಅದರಲ್ಲಿ 'ಹಿಂದೂಸ್ಥಾನ್' ಶಬ್ದ ಪ್ರಯೋಗ ಕೂಡ ಮಾಡಲಾಗಿದೆ. 'ಬುಲ್ ಬುಲ್ ಪಕ್ಷಿಗಳು ನಾವು ಹೊರಗಿನಿಂದ ಬಂದಿದ್ದೇವೆ. ಇದೊಂದು ಸುಂದರವಾದ ಹಣ್ಣು-ಹೂಗಳ ತೋಟ. ನಾವು ಇಲ್ಲಿ ಬಂದಿರುವುದೇ ಇಲ್ಲಿನ ಎಲ್ಲಾ ಸುಖ ಅನುಭವಿಸುವುದಕ್ಕೆ. ಈ ಸುಖ ಕೊಟ್ಟಿರುವುದರಿಂದ ಭಾರತ ನಮಗೆ ತುಂಬ ಪ್ರಿಯವಾದುದು' ಎಂದಿದ್ದು, ಇದರ ಅರ್ಥವನ್ನು ನಾವು ಒಳ ಹೊಕ್ಕು ನೋಡದೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಇದನ್ನು ಹಾಡುತ್ತೇವೆ ಮತ್ತು ಆಲಿಸುತ್ತೇವೆ ಎಂದ ಸು.ರಾಮಣ್ಣ, ಈ ಹಾಡು ಯಾವುದೆಂದು ನಾನು ಹೇಳುವುದಿಲ್ಲ ಎಂದು ಕುತೂಹಲ ಉಳಿಸಿದರು.

ನಮ್ಮ ಜನ್ಮಭೂಮಿಯಾದ ಭಾರತ ನಮಗೆ ಭೋಗಭೂಮಿಯಲ್ಲ. ಹಾಗೆಂದು ಅಂದುಕೊಂಡರೆ ಅದು ರಾಷ್ಟ್ರವಾಗಲ್ಲ. ಎಲ್ಲಾ ಭಾರತೀಯ ಭಾಷೆಗಳ ಭಾವ ಒಂದೇ. ದೇಶದ ಎಲ್ಲಾ ಪ್ರದೇಶ, ಜಾತಿ, ಎಲ್ಲಾ ಸಂತರು ನಮಗೆ ಕೊಟ್ಟ ಸಂಸ್ಕಾರವೆಂದರೆ ಅದು ದೇಶದ ಬಗ್ಗೆ ಕೃತಜ್ಞತೆಯಿಂದ ನಡೆದುಕೊಳ್ಳಬೇಕು ಎಂಬುದಾಗಿದೆ. ದೇವರು, ಧರ್ಮವನ್ನು ಧಿಕ್ಕರಿಸಿದವರು ದೇಶದಲ್ಲಿ ರಾಷ್ಟ್ರನಾಯಕರಾಗಲಿಲ್ಲ. ಬದಲಿಗೆ ಅವರೆಲ್ಲರೂ ಖಳನಾಯಕರಾದರು ಎಂದರು.

ಜಗತ್ತಿನ ಬೇರೆ ದೇಶಗಳ ರಾಷ್ಟ್ರೀಯತೆ 'ರಾಜಕೀಯ ಕೇಂದ್ರಿತ'. ನಮ್ಮ ರಾಷ್ಟ್ರೀಯತೆ ನಮ್ಮ ಭೂ ಭಾಗದಿಂದ ಹೋದಾಗ ಯಾರಿಗೂ ಅಪಾಯ ಉಂಟು ಮಾಡುವುದಿಲ್ಲ ವಿಶ್ವ ಕಲ್ಯಾಣ ಮತ್ತು ವಸುದೈವ ಕುಟುಂಬಕಂ ಎಂಬುದರಲ್ಲಿ ನಾವು ನಂಬಿಕೆ ಇಟ್ಟಿದ್ದೇವೆ.

12ನೇ ಶತಮಾನದಲ್ಲಿ ಬಸವಣ್ಣನವರು ಎಲ್ಲಾ ವೃತ್ತಿಯವರನ್ನು ಒಟ್ಟಾಗಿ ಸೇರಿಸುವಾಗ ಯಾವ ವೃತ್ತಿ ಬಗ್ಗೆಯೂ ಮೇಲು-ಕೀಳು ಎಂಬ ಭಾವನೆ ಕನಸಿನಲ್ಲಿ ಸುಳಿಯಬಾರದು ಎಂಬ ಎಚ್ಚರಿಕೆ ವಹಿಸಿದ್ದರು. ವೃತ್ತಿ ಗೌರವ ರಾಷ್ಟ್ರೀಯತೆಯ ಒಂದು ಲಕ್ಷಣ. ಕಾಯಕವೇ ಕೈಲಾಸ ಎಂಬುದು ರಾಷ್ಟ್ರೀಯತೆ ಎಂದು ತಿಳಿಸಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಭಾರತ ಸರ್ಕಾರದ ಕೆಪಾಸಿಟಿ ಬಿಲ್ಡಿಂಗ್ ಕಮಿಷನ್‌ನ ಮಾನವ ಸಂಪನ್ಮೂಲಗಳ ಸದಸ್ಯ ಡಾ.ಬಾಲಸುಬ್ರಹ್ಮಣ್ಯಂ, ರಂಗಕರ್ಮಿ ಪ್ರೊ.ಹೆಚ್.ಎಸ್.ಉಮೇಶ್, ಸಾಹಿತಿ ಡಾ.ಬಿ.ವಿ.ವಸಂತಕುಮಾರ್, ಕಾರ್ಯಕ್ರಮದ ದತ್ತಿ ದಾನಿಗಳೂ ಆದ ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಪರಿಷತ್ತಿನ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ಮತ್ತಿತರರು ಹಾಜರಿದ್ದರು.

ಇಂದು ಭಾರತ ಜಗತ್ತಿನ ಗೌರವಕ್ಕೆ ಪಾತ್ರವಾಗಿದೆ

ಮೈಸೂರು,ಮಾ.11(ಪಿಎಂ)- ಪ್ರಸ್ತುತದ ನಮ್ಮ ರಾಷ್ಟ್ರೀಯತೆ ಬಗ್ಗೆ ಹೇಳುವುದಾದರೆ, ಇಂದು ಭಾರತ ಭರವಸೆಯೊಂದಿಗೆ ಮುನ್ನಡೆಯುತ್ತಿದೆ. ವಿಶ್ವದ ದೃಷ್ಟಿಯಲ್ಲಿ ಭಾರತ ಕೇಂದ್ರ ಸ್ಥಾನದಲ್ಲಿದ್ದು, ಜಗತ್ತಿನ ಗೌರವಕ್ಕೆ ಪಾತ್ರವಾಗಿದೆ ಎಂದು ಆರ್‌ಎಸ್‌ಎಸ್ ಹಿರಿಯ ಪ್ರಚಾರಕ ಸು.ರಾಮಣ್ಣ ಹೇಳಿದರು.

ರಾಷ್ಟ್ರೀಯತೆ ಸಾರ್ವಕಾಲಿಕ ಪ್ರಸ್ತುತತೆ ಆಗಿದೆ. ಆದರೂ ಕೆಲವೊಮ್ಮೆ ವಿಶೇಷ ಪರಿಸ್ಥಿತಿಯಲ್ಲಿ ಹೆಚ್ಚು ಮಹತ್ವ ಪಡೆಯುತ್ತದೆ. ಇಂದಿನ ನಮ್ಮ ರಾಷ್ಟ್ರೀಯತೆ ಬಗ್ಗೆ ಹೇಳುವುದಾದರೆ, ಇಂದು ಭಾರತ ಭರವಸೆಯೊಂದಿಗೆ ಮುನ್ನಡೆಯುತ್ತಿದೆ. ಅನ್ಯ ದೇಶಗಳು ಸಂಕಷ್ಟಕ್ಕೆ ಸಿಲುಕಿದಾಗ ಸ್ಪಂದಿಸುವ ಮೊದಲ ದೇಶವಾಗಿ ಹೊರಹೊಮ್ಮಿದೆ ಎಂದರು.

ನಾವೆಲ್ಲಾ ಕನ್ನಡ ಶಾಲೆಯಲ್ಲಿ ಕಲಿಯುತ್ತಿದ್ದಾಗ 'ಭಾರತ' ಏಷ್ಯಾಖಂಡದಲ್ಲಿ ಇರುವುದರಿಂದ ಇದೊಂದು ಉಪಖಂಡ ಎಂದು ಪಾಠ ಹೇಳಲಾಗುತ್ತಿತ್ತು. ನಾನಾ ಭಾಷೆ, ಸಂಸ್ಕೃತಿ ಇರುವ ಹಿನ್ನೆಲೆಯಲ್ಲಿ ಭಾರತ ಒಂದು ರಾಷ್ಟ್ರವಲ್ಲ ಎಂದು ಪಾಠ ಮಾಡುತ್ತಿದ್ದರು. ಹಲವು ರಾಷ್ಟ್ರಗಳು ಒಂದು ಖಂಡದಲ್ಲಿ ಇರುತ್ತವೆ. ಆದರೆ ಭಾರತ ಒಂದು ರಾಷ್ಟ್ರವಲ್ಲ, ಇದೊಂದು ಉಪಖಂಡ ಎಂದು ಬಾಯಿ ಪಾಠ ಮಾಡಿಸುತ್ತಿದ್ದರು. ಇದರ ಹಿಂದೆ ಭಾರೀ ಕುತಂತ್ರ ಇತ್ತು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಚಾಣಕ್ಯ ಅಧರ್ಮ ನಾಶಗೊಳಿಸಿ ಧರ್ಮ ಸ್ಥಾಪನೆಗಾಗಿ ತಂತ್ರಗಾರಿಕೆ ಮಾಡುತ್ತಿದ್ದರು. ಹಾಗಾಗಿ ಇವರು ಪ್ರಾತಃಸ್ಮರಣೀಯರು. ಆದರೆ ದ್ವಾಪರಯುಗದಲ್ಲಿದ್ದ ಶಕುನಿ ಅಧರ್ಮ ಪ್ರೋತ್ಸಾಹಿಸಲು ಕುತಂತ್ರ ಮಾಡುತ್ತಿದ್ದ. ನಮಗೆ ಬೇಕಿರುವುದು ಚಾಣಕ್ಯನ ತಂತ್ರಗಾರಿಕೆಯೇ ಹೊರತು ಶಕುನಿಯ ಕುತಂತ್ರಗಾರಿಕೆಯಲ್ಲ. ವ್ಯಾಪಾರದ ಹೆಸರಿನಲ್ಲಿ ಭಾರತಕ್ಕೆ ಬಂದ ಬ್ರಿಟಿಷರು ಕ್ರಮೇಣ ರಾಜ್ಯಭಾರ ಸ್ಥಾಪನೆ ಮಾಡಿದರು. ಆ ಮೂಲಕ ಭಾರತವನ್ನು ಬ್ರಿಟನ್ ಸಾಮ್ರಾಜ್ಯದ ಭಾಗವಾಗಿ ಮಾಡಿಕೊಂಡರು. ಇದು ಅವರ ಕುತಂತ್ರ ಎಂದರು.

ರಾಜಕೀಯವಾಗಿ ನಮ್ಮನ್ನು ಗುಲಾಮರನ್ನಾಗಿ ಮಾಡಿದರೆ ಸಾಲದೆಂದು ಮಾನಸಿಕವಾಗಿಯೂ ಗುಲಾಮರನ್ನಾಗಿ ಮಾಡಲು ಭಾರತ ಒಂದು ರಾಷ್ಟ್ರ ಎಂಬುದನ್ನೇ ಬ್ರಿಟಿಷರು ನಮ್ಮ ತಲೆಯಿಂದ ತಗೆದು ಹಾಕಿದರು. ಅದಕ್ಕಾಗಿ ವ್ಯವಸ್ಥಿತ ಶಿಕ್ಷಣ ಪದ್ಧತಿ ಜಾರಿ ಮಾಡಿದರು. ಹೀಗಾಗಿ ಭಾರತ ಒಂದು ರಾಷ್ಟ್ರ ಎಂದು ಕಲಿಯುವುದರಿಂದ ನಮ್ಮ ಪೀಳಿಗೆಯವರು ವಂಚಿತರಾದೆವು ಎಂದು ಬೇಸರ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಹೋರಾಟ ದೇಶದಲ್ಲಿ ಪ್ರಾರಂಭವಾದಾಗ, 'ಭಾರತ್ ಮಾತಾ ಕಿ ಜೈ' ಘೋಷಣೆ, 'ವಂದೇ ಮಾತರಂ' ಗೀತೆ ರಾಷ್ಟ್ರೀಯತೆ ಭಾವನೆ ಪ್ರಜ್ವಲಿಸುವಂತೆ ಮಾಡಿದವು. ಈ ಸಂದರ್ಭದಲ್ಲಿ ಸ್ವರಾಜ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರಿಗೆ (ಹೆಸರು ಹೇಳಲು ಹೋಗಲ್ಲ, ಅದು ಮುಖ್ಯವಲ್ಲ) ಬ್ರಿಟಿಷರು ಬೇಡದನ್ನು ತಲೆಗೆ ತುಂಬಿದರು ಎಂದರು.

ನಾವು ನಿಮ್ಮನ್ನು ಒಂದುಗೂಡಿಸಿದೆವು. ನಿಮ್ಮಲ್ಲಿ ಒಂದು ಆಡಳಿತ ವ್ಯವಸ್ಥೆ ಇರಲಿಲ್ಲ. ನಮ್ಮಿಂದಾಗಿ ಇಡೀ ಭಾರತ ಇಂದು ಒಂದಾಗಿ ನಿಂತಿದೆ ಎಂಬ ಬ್ರಿಟಿಷರ ಮಾತುಗಳಿಗೆ ಸ್ವರಾಜ್ಯ ಹೋರಾಟದ ಮುಂಚೂಣಿಯಲ್ಲಿದ್ದ ಧೀಮಂತ ವ್ಯಕ್ತಿಗಳು ಬಲಿಯಾದರು. ಇದರಿಂದ ನಮ್ಮದು ನಿರ್ಮಾಣವಾಗುತ್ತಿರುವ ರಾಷ್ಟ್ರ ಎಂದು ಹೇಳಿಕೊಂಡರು. ಇದು ನಮ್ಮನ್ನು ನಾವೇ ವಂಚನೆ ಮಾಡಿಕೊಂಡಂತೆ. ಬ್ರಿಟಿಷರು ಬರುವ ಮೊದಲು ಭಾರತ ಎಷ್ಟೋ ವರ್ಷಗಳಿಂದ ರಾಷ್ಟ್ರೀಯತೆ ಪ್ರಜ್ಞೆಯಿಂದ ಇಡೀ ಪ್ರಪಂಚಕ್ಕೆ ಗುರುವಾಗಿತ್ತು ಎಂದು ಹೇಳಿದರು.

'ಚೀನಿ ಮಾಮ, ತಿಂಗಳ ಮಾಮ' ರಂಗಗೀತೆ ಕಾರ್ಯಕ್ರಮ

ಮೈಸೂರು, ಮಾ.11(ಎಸ್‌ಪಿಎನ್)- ರಂಗಾಯಣ ಕಲಾವಿದ ದಿ.ಶ್ರೀನಿವಾಸ್ ಭಟ್(ಚೀನಿ) ಅವರ ಸ್ಮರಣಾರ್ಥ 'ಚೀನೀ ಮಾಮ, ತಿಂಗಳ ಮಾಮ' ಶೀರ್ಷಿಕೆಯಡಿ ರಂಗಗೀತೆಗಳ ಕಾರ್ಯಕ್ರಮಕ್ಕೆ ಶನಿವಾರ ಚಾಲನೆ ದೊರಕಿತು.



ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಬ್ಯಾಂಕ್ ನೌಕರರ ಬಳಗ ಸಹಯೋಗದೊಂದಿಗೆ ಶ್ರೀನಿವಾಸ್ ಭಟ್ ಅವರು ಸಂಯೋಜಿಸಿರುವ ರಂಗ ಸಂಗೀತ ಪ್ರಸ್ತುತಿ 'ಚೀನೀ ಮಾಮ, ತಿಂಗಳ ಮಾಮ' ಶೀರ್ಷಿಕೆಯಡಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಹಿಳಾ ಚಿಂತಕಿ ಡಿ.ಶೀಲ ಕುಮಾರಿ ಭಾಗವಹಿಸಿ ಮಾತನಾಡಿದರು.

ಶ್ರೀನಿವಾಸ್‌ಭಟ್ ಅವರು ರಂಗಾಯಣದಲ್ಲಿ ಆಯೋಜಿಸುತ್ತಿದ್ದ ಕಾಲೇಜು ರಂಗೋತ್ಸವದಲ್ಲಿ ಪರಿಚಿತರಾಗಿ, ಕಾಲೇಜು ವಿದ್ಯಾರ್ಥಿಗಳಿಗೆ ರಂಗ ಸಂಗೀತ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದರು. ಇದರಿಂದ ವಿದ್ಯಾರ್ಥಿಗಳು ರಂಗ ಭೂಮಿಯಲ್ಲಿ ತೊಡಗಿಸಿಕೊಳ್ಳಲು ಹೆಚ್ಚಿನ ಆಸಕ್ತಿ ತೋರುತ್ತಿದ್ದರು ಎಂದರು.

ಹಲವು ವರ್ಷಗಳಿಂದ ಕಾಲೇಜು ವಿದ್ಯಾರ್ಥಿಗಳಿಗೆ ರಂಗಗೀತೆಗಳನ್ನು ಕಲಿಸುವುದರ ಮೂಲಕ ರಂಗಭೂಮಿಯಲ್ಲಿ ಆಸಕ್ತಿಯಿಂದ ವಿದ್ಯಾರ್ಥಿಗಳು ತೊಡಗಿಸಿಕೊಳ್ಳಲು ಶ್ರೀನಿವಾಸ್ ಭಟ್ಟರ ವಿಶೇಷ ಆಸಕ್ತಿಯೇ ಕಾರಣ ಎಂದ ಅವರು, ಅವರೊಂದಿಗೆ ರಂಗಭೂಮಿಯಲ್ಲಿ ಕೆಲಸ ಮಾಡಿದ ವಿದ್ಯಾರ್ಥಿಗಳು ಇಂದು ಬೇರೆ ಬೇರೆ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಉತ್ತಮ ಜೀವನ ಕಟ್ಟಿಕೊಂಡಿದ್ದಾರೆ ಎಂದು ತಿಳಿಸಿದರು.

ನಂತರ ಚಾರು ಸಾಂಸ್ಕೃತಿಕ ಪ್ರತಿಷ್ಠಾನ ಕಲಾವಿದರು ಮತ್ತು ಇತರೆ ಹವ್ಯಾಸಿ ಕಲಾವಿದರಾದ ಸನ್ನತ್ ಮೋಹನ್, ಅಕ್ಷತಾ ಕುಮಟಾ, ಸಿ.ಅರುಣಾ, ಕಿರಣ್, ಪ್ರಯಾಗ್ ಕೋರೆ, ಶ್ರೀಕಂಠಸ್ವಾಮಿ, ಅನುಷ್ ಶೆಟ್ಟಿ, ಸುಂದರೇಶ್, ಚಿದಂಬರ್ ಕುಲಕರ್ಣಿ ಸೇರಿದಂತೆ ಇತರೆ ಕಲಾವಿದು ರಂಗಗೀತೆಗಳನ್ನು ಹಾಡಿ, ಚೀನಿ ಸಂಯೋಜಿಸಿರುವ ರಂಗಗೀತೆಗಳನ್ನು ಪ್ರಸ್ತುತಪಡಿಸಿದರು.



ಮೈಸೂರು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ನೂತನ ಜಂಟಿ ನಿರ್ದೇಶಕರಾದ ಬಿ. ರಂಗೇಗೌಡ ಅವರು ವರ್ಗಾವಣೆಗೊಂಡ ಬಿ. ಮಾಲತಿಯವರಿಂದ ಅಧಿಕಾರ ವಹಿಸಿಕೊಂಡರು.

ಏ.10ರಿಂದ ಮೇ 5ರವರೆಗೆ ರಂಗಾಯಣ ಚಿಣ್ಣರ ಮೇಳ

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮಾಹಿತಿ

ಮೈಸೂರು,ಮಾ.11(ಪಿಎಂ)- ಕೋವಿಡ್ ಕಾರಣದಿಂದ ಕಳೆದ ಮೂರು ವರ್ಷಗಳು ನಡೆಯದ ಮೈಸೂರು ರಂಗಾಯಣದ ಜನಪ್ರಿಯ ಬೇಸಿಗೆ ಶಿಬಿರ 'ಚಿಣ್ಣರ ಮೇಳ' ಈ ಬಾರಿ ಹೊಸ ಹುರುಪಿನೊಂದಿಗೆ ಆರಂಭಗೊಳ್ಳಲು ಸಿದ್ಧತೆ ನಡೆದಿದೆ. 'ನಮ್ಮೀ ತಾಯ್ನೆಲ' ವಿಷಯದಡಿ 'ಕಿಶೋರೊಲ್ಲಾಸ' ಉಪಶೀರ್ಷಿಕೆಯಡಿ ಏ.10ರಿಂದ ಮೇ 5ರವರೆಗೆ ರಂಗಾಯಣದ ಅಂಗಳದಲ್ಲಿ ಚಿಣ್ಣರ ಚಿಲಿಪಿಲಿಯ 'ಚಿಣ್ಣರಮೇಳ-2023' ಕಳೆಗಟ್ಟಲಿದೆ.



ರಂಗಾಯಣದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಈ ಬಾರಿಯ ಚಿಣ್ಣರ ಮೇಳಕ್ಕೆ ಸಂಬಂಧಿಸಿದಂತೆ ಏ.1ರಂದು ಬೆಳಗ್ಗೆ 10ಕ್ಕೆ ರಂಗಾಯಣದ ಕಚೇರಿಯಲ್ಲಿ ಒಬ್ಬರಿಗೆ ಒಂದರಂತೆ ಅರ್ಜಿ ವಿತರಿಸಲಾಗುವುದು. ಪ್ರತಿ ಅರ್ಜಿಗೆ 100 ರೂ. ಶುಲ್ಕ ನಿಗದಿ ಮಾಡಲಾಗಿದೆ. 2023ರ ಮಾರ್ಚ್ 31ಕ್ಕೆ 7 ವರ್ಷ ತುಂಬಿದ ಮತ್ತು ಇದೇ ದಿನಾಂಕಕ್ಕೆ 14 ವರ್ಷದೊಳಗಿರುವ ಮಕ್ಕಳಿಗೆ ಮೇಳಕ್ಕೆ ಪ್ರವೇಶ ದೊರೆಯಲಿದೆ. ಅರ್ಜಿ ವಿತರಣೆ ಪೂರ್ವದಲ್ಲೇ ಮಕ್ಕಳ ವಯಸ್ಸಿನ ಸಂಬಂಧ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

250 ಮಕ್ಕಳಿಗೆ ಪ್ರವೇಶಾವಕಾಶ ದೊರೆಯಲಿದ್ದು, 250 ಅರ್ಜಿಗಳನ್ನು ಮಾತ್ರ ನೀಡಲಾಗುವುದು. ಮೊದಲು ಬಂದವರಿಗೆ ಮೊದಲ ಆದ್ಯತೆ. ಯಾವುದೇ ಶಿಫಾರಸಿಗೆ ಆಸ್ಪದವಿಲ್ಲ. ಭರ್ತಿ ಮಾಡಿದ ಅರ್ಜಿಗಳನ್ನು ಏ.5ರ ಸಂಜೆ 5ರೊಳಗೆ ರಂಗಾಯಣದ ಕಚೇರಿಗೆ ಖುದ್ದಾಗಿ ಸಲ್ಲಿಸಬೇಕು. ಮಗುವೊಂದಕ್ಕೆ 3 ಸಾವಿರ ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ. ಈ ಮೊತ್ತವನ್ನು 'ಉಪ ನಿರ್ದೇಶಕರು, ರಂಗಾಯಣ, ಮೈಸೂರು' ಹೆಸರಿಗೆ ಡಿಡಿ ತೆಗೆದು ಅರ್ಜಿ ಜೊತೆಗೆ ಲಗತ್ತಿಸಬೇಕು. ಮಗುವಿನ ಜನ್ಮದಿನದ ದೃಢೀಕರಣಕ್ಕಾಗಿ ಆಧಾರ್ ಕಾರ್ಡ್ ಪ್ರತಿ ಅಥವಾ ಮಗುವಿನ ಹೆಸರು ನಮೂದಿಸಿದ ಜನನ ಪ್ರಮಾಣಪತ್ರವನ್ನು ಅರ್ಜಿ ಜೊತೆಗೆ ಲಗತ್ತಿಸಿ, ಸಲ್ಲಿಸಬೇಕು ಎಂದು ಹೇಳಿದರು.

ಅರ್ಜಿ ಪಡೆಯುವವರು ಅರ್ಜಿ ಮತ್ತು ರಸೀದಿಯಲ್ಲಿ ಕಡ್ಡಾಯವಾಗಿ ಮಗುವಿನ ಹೆಸರನ್ನು ಬರೆಸಿ, 100 ರೂ. (ನಗದಾಗಿ ಮಾತ್ರ) ಪಾವತಿಸಿ ಅರ್ಜಿ ಪಡೆಯಬೇಕು. ಪಡೆದ ಅರ್ಜಿಯನ್ನು ರಸೀದಿಯೊಂದಿಗೆ ಮರಳಿ ಸಲ್ಲಿಸಬೇಕು. ಇದು ರಂಗಾಯಣದ 22ನೇ ವರ್ಷದ ಚಿಣ್ಣರ ಮೇಳ. 2020, 2021 ಮತ್ತು 2022ರಲ್ಲಿ ಕೋವಿಡ್ ಕಾರಣಕ್ಕೆ ಮೇಳ ಆಯೋಜನೆ ಸಾಧ್ಯವಾಗಿರಲಿಲ್ಲ. 2019ರಲ್ಲಿ ನಡೆದ ಚಿಣ್ಣರ ಮೇಳದಲ್ಲಿ 2,500 ರೂ. ಪ್ರವೇಶ ಶುಲ್ಕ ಇತ್ತು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮಾ.19ರಂದು 'ಟಿಪ್ಪು ನಿಜಕನಸುಗಳು' 50ನೇ ಪ್ರದರ್ಶನ

ಮೈಸೂರು,ಮಾ.11(ಪಿಎಂ)- ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ಮಾ.19ರಂದು ಸಂಜೆ 6ಕ್ಕೆ 'ಟಿಪ್ಪು ನಿಜಕನಸುಗಳು' ನಾಟಕ 50ನೇ ಪ್ರದರ್ಶನ ಕಾಣುತ್ತಿದೆ. ಇದಕ್ಕೂ ಪೂರ್ವದಲ್ಲಿ ಮಾ.12, 15 ಮತ್ತು 18ರಂದು ಸಂಜೆ 6ಕ್ಕೆ ಭೂಮಿಗೀತದಲ್ಲಿ ಪ್ರದರ್ಶನಗಳು ನಡೆಯಲಿವೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ತಿಳಿಸಿದರು.



'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನ ಚಾರಿತ್ರಿಕ ದಾಖಲೆ ನಿರ್ಮಿಸಿದ್ದು, ಪ್ರದರ್ಶನ ಕಂಡಲ್ಲೆಲ್ಲಾ ಟಿಕೆಟ್ ಸೋಲ್ಡ್ ಔಟ್ ಆಗಿದೆ. ಕಲಬುರಗಿಯಲ್ಲಿ 300 ಮಂದಿ ಮಠಾಧೀಶರು ನಾಟಕ ವೀಕ್ಷಿಸಿದ್ದು, ಹಲವು ಗಣ್ಯರು, ನ್ಯಾಯಾಧೀಶರು, ಸಚಿವರು, ಶಾಸಕರು ಈ ನಾಟಕ ನೋಡಿದ್ದಾರೆ. ಈವರೆಗೆ ಸುಮಾರು 40 ಸಾವಿರ ಪ್ರೇಕ್ಷಕರು ಈ ನಾಟಕ ವೀಕ್ಷಿಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

'ಟಿಪ್ಪು ನಿಜಕನಸುಗಳು' ನಾಟಕ ಕೃತಿ 12ನೇ ಆವೃತ್ತಿ ಮುದ್ರಣವಾಗಿದ್ದು, 20 ಸಾವಿರ ಪ್ರತಿಗಳು ಈವರೆಗೆ ಮಾರಾಟವಾಗಿವೆ. ಸುಮಾರು 50 ಸಾವಿರ ಪ್ರೇಕ್ಷಕರು ನಾಟಕವನ್ನು ಓದಿದ್ದಾರೆಂದು ಅಂದಾಜಿಸಲಾಗಿದೆ. ಅಲ್ಪಾವಧಿಯಲ್ಲಿ ಈ ನಾಟಕಕೃತಿಯ ಓದುವಿಕೆಯೂ ದಾಖಲೆಯಾಗಿದೆ ಎನ್ನಲಾಗಿದೆ. ಈ ವಿಶೇಷ ನಾಟಕಕ್ಕೆ ಸರ್ಕಾರದಿಂದ ಯಾವುದೇ ಅನುದಾನ ಸಿಕ್ಕಿರುವುದಿಲ್ಲ. ಪ್ರೇಕ್ಷಕರು ಟಿಕೆಟ್ ಖರೀದಿಸಿದ ಹಣದಿಂದಲೇ ಪ್ರದರ್ಶನ ನೀಡುತ್ತಾ ಬರಲಾಗಿದೆ ಎಂದರು.

ವಿವಿಧೆಡೆ ಪ್ರದರ್ಶನಗಳಲ್ಲಿ ಸ್ಥಳೀಯ ಸಂಘಟಕರು ಕಾರ್ಯಕ್ರಮಕ್ಕೆ ಸಹಕಾರ ನೀಡಿದ್ದು, ತಂಡದ ವಸತಿ-ಊಟೋಪಹಾರ ನೋಡಿಕೊಂಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನದ ಜಿಲ್ಲಾ ರಂಗಮಂದಿರಗಳಲ್ಲಿ ಪ್ರದರ್ಶನವನ್ನು ನೀಡಲಾಗಿದೆ. ಖರ್ಚು-ವೆಚ್ಚ ಹಾಗೂ ಆದಾಯದ ಪರಿಶೀಲನಾ ಪ್ರಕ್ರಿಯೆ ನಡೆಯುತ್ತಿದ್ದು, ಮುಂದೆ ವಿವರ ನೀಡಲಾಗುವುದು. ನಟರು, ತಂತ್ರಜ್ಞರು ಸೇರಿದಂತೆ 38 ಮಂದಿಯ ರಂಗಾಯಣ ರೆಪರ್ಟರಿ ತಂಡ ಯಶಸ್ವಿ ರಂಗಪ್ರವಾಸ ಮುಗಿಸಿದೆ. ಭಾರತೀಯ ರಂಗಭೂಮಿಯಲ್ಲಿ ಈ ದಶಕದ ಯಶಸ್ವಿ ರಂಗಯಾನ ಇದಾಗಿದೆ ಎಂದು ತಿಳಿಸಿದರು.

ತಡೆಯಾಜ್ಞೆ ತೆರವು: ಕೆಲವರು ಈ ನಾಟಕ ಕೃತಿಯನ್ನು ನಿಷೇಧಿಸುವಂತೆ ಕೋರ್ಟ್‌ಗೆ ದೂರು ಅರ್ಜಿ ಸಲ್ಲಿಸಿದ್ದರು. ಬೆಂಗಳೂರು ಸಿಟಿ ಕೋರ್ಟ್ ಈ ಕೃತಿಗೆ ತಾತ್ಕಾಲಿಕ ತಡೆಯಾಜ್ಞೆ ನೀಡಿತ್ತು. ಕೃತಿಯನ್ನು ಪ್ರಕಟಿಸಿದ ಅಯೋಧ್ಯಾ ಪ್ರಕಾಶನ ಸಂಸ್ಥೆ ಮತ್ತು ನಾನು ಈ ತಡೆಯಾಜ್ಞೆ ತೆರವುಗೊಳಿಸುವುದರಲ್ಲಿ ಸಫಲರಾದೆವು ಎಂದು ತಿಳಿಸಿದರು.

ನಾಟಕದ ವಿರುದ್ಧ ಕೋರ್ಟ್‌ನಲ್ಲಿ ದೂರು ಅರ್ಜಿ ಸಲ್ಲಿಸಿದ್ದ ದೂರುದಾರರು, ಕೃತಿಕಾರರು ಕೋರ್ಟ್‌ಗೆ ಸಲ್ಲಿಸಿದ ಸಾಕ್ಷ್ಯಾಧಾರಗಳನ್ನು ಗಮನಿಸಿ, ತಮ್ಮ ದೂರು ಅರ್ಜಿ ವಾಪಸ್ಸು ಪಡೆದರು. ಪ್ರಕಾಶಕರು ಹಾಗೂ ಕೃತಿಕಾರರಿಗೆ ತಲಾ 3 ಸಾವಿರ ರೂ. ಪಾವತಿಸುವಂತೆ ದೂರುದಾರರಿಗೆ ಕೋರ್ಟ್ ದಂಡ ವಿಧಿಸಿದೆ. ಹೀಗೆ 'ಟಿಪ್ಪು ನಿಜಕನಸುಗಳು' ನಾಟಕ ಕೃತಿ ಕೋರ್ಟ್‌ನಲ್ಲಿ ಗೆಲುವು ಸಾಧಿಸಿದೆ. ನಾಟಕ ಯಾವುದೇ ತಡೆಯಿಲ್ಲದೆ 2022ರ ನ.20ರಿಂದ ಯಶಸ್ವಿಯಾಗಿ ಪ್ರದರ್ಶನ ಕಾಣುತ್ತಿದೆ ಎಂದು ಹೇಳಿದರು.

ರಂಗಾಯಣದ 'ಟಿಪ್ಪು ನಿಜಕನಸುಗಳು' ರೆಪರ್ಟರಿ ತಂಡ 3 ಹಂತದಲ್ಲಿ ರಾಜ್ಯಾದ್ಯಂತ ಪ್ರದರ್ಶನ ನೀಡಿದೆ. ಮೊದಲ ಹಂತದಲ್ಲಿ ಬೆಂಗಳೂರು, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಹಾಸನ, ಮಂಗಳೂರು, ಪುತ್ತೂರು, ಪೊನ್ನಂಪೇಟೆ, ಮಂಡ್ಯದಲ್ಲಿ 14 ಪ್ರದರ್ಶನಗಳನ್ನು ನೀಡಿದೆ. 2ನೇ ಹಂತದಲ್ಲಿ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ರಾಯಚೂರು, ಬಾಗಲಕೋಟೆ, ಕಲಬುರಗಿ, ಬೀದರ್, ಬಳ್ಳಾರಿಯಲ್ಲಿ 10 ಪ್ರದರ್ಶನಗಳು, 3ನೇ ಹಂತದಲ್ಲಿ ಕುಶಾಲನಗರ, ತೀರ್ಥಹಳ್ಳಿ, ಚಿಕ್ಕಮಗಳೂರು, ತುಮಕೂರು, ಬೆಂಗಳೂರು, ಕೋಲಾರ, ಚಾಮರಾಜನಗರದಲ್ಲಿ 9 ಪ್ರದರ್ಶನಗಳು ಹಾಗೂ ಮೈಸೂರಿನಲ್ಲಿ ಈವರೆಗೆ 13 ಪ್ರದರ್ಶನಗಳು ಸೇರಿದಂತೆ ಒಟ್ಟು 46 ಪ್ರದರ್ಶನಗಳನ್ನು ನೀಡಿದೆ ಎಂದು ಮಾಹಿತಿ ನೀಡಿದರು. ರಂಗಾಯಣ ಉಪನಿರ್ದೇಶಕಿ ನಿರ್ಮಲ ಮಠಪತಿ ಗೋಷ್ಠಿಯಲ್ಲಿದ್ದರು.



ಧ್ರುವ ಅವರ ತಂದೆ ರಂಗಸ್ವಾಮಿ, ತಾಯಿ ಸಿದ್ದಮ್ಮ

ಧ್ರುವನಾರಾಯಣ ಅವರದು ಪರಿಶ್ರಮದ ರಾಜಕೀಯ ಪಯಣ...



ಧ್ರುವನಾರಾಯಣ, ಪತ್ನಿ ವೀಣಾ, ಪುತ್ರರಾದ ದರ್ಶನ್ (ಎಡ ತುದಿಯಲ್ಲಿರುವವರು) ಮತ್ತು ಧೀರನ್.



ಸಿದ್ದಲಿಂಗಸ್ವಾಮಿ

ವಿದ್ಯಾರ್ಥಿ ದೆಸೆಯಲ್ಲೇ ಸಂಘಟನಾ ಚತುರರಾಗಿದ್ದ ಧ್ರುವನಾರಾಯಣ್, 1983ರಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಮುಖಂಡರಾಗಿ ರಾಜಕಾರಣಕ್ಕೆ ಪಾದಾರ್ಪಣೆ ಮಾಡಿ ಹಂತ-ಹಂತವಾಗಿ ಮೇಲೇರುತ್ತಾ ಕೆಪಿಸಿಸಿ ಕಾರ್ಯಾಧ್ಯಕ್ಷರಾದರು. ಹಳೇ ಮೈಸೂರು ಭಾಗದಲ್ಲಿ ರಾಜಕೀಯ ಮುತ್ಸದ್ಧಿ ವಿ.ಶ್ರೀನಿವಾಸಪ್ರಸಾದ್ ಬಿಟ್ಟರೆ ಮುಂದಿನ ಪ್ರಬಲ ದಲಿತ ಮುಖಂಡರಾಗಿ ಹೊರ ಹೊಮ್ಮುತ್ತಿದ್ದರು. ಚಾಮರಾಜನಗರ ಜಿಲ್ಲೆಯ ಕುಗ್ರಾಮವಾದ ಹೆಗ್ಗವಾಡಿಯಲ್ಲಿ ರಂಗಸ್ವಾಮಿ ಮತ್ತು ಸಿದ್ದಮ್ಮ ದಂಪತಿಯ ಪುತ್ರನಾಗಿ 1961ರ ಜುಲೈ 31ರಂದು ಜನಿಸಿದ ಧ್ರುವನಾರಾಯಣ, ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದಿದ್ದು, ಆಗಲೇ ಸಂಘಟನಾ ಚತುರರಾಗಿದ್ದರು. ಕೃಷಿ ವಿವಿಯ ವಿದ್ಯಾರ್ಥಿ ಸಂಘದ ನಾಯಕರಾಗಿದ್ದ ಅವರು, ಆಗಲೇ ಚಿತ್ರರಂಗದ ಗಣ್ಯರು ಹಾಗೂ ಖ್ಯಾತ ಕ್ರೀಡಾಪಟುಗಳನ್ನು ವಿವಿಗೆ ಕರೆಸಿ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಗಮನ ಸೆಳೆದಿದ್ದರು. ಅಂತರ ವಿವಿ ಫುಟ್ಬಾಲ್ ಆಟಗಾರರಾಗಿ ಕ್ರೀಡಾ ಕ್ಷೇತ್ರದಲ್ಲೂ ಮಿಂಚಿದ್ದರು.

ಸಂಘಟನಾ ಚತುರತೆಯಿಂದಾಗಿ ರಾಜಕಾರಣದತ್ತ ಆಕರ್ಷಿತರಾದ ಧ್ರುವನಾರಾಯಣ್ ಅವರನ್ನು 1983ರಲ್ಲಿ ಕಾಂಗ್ರೆಸ್ ಪಕ್ಷ ಬೆಂಗಳೂರು ನಗರ ಎನ್‌ಎಸ್‌ಯುಐ ಅಧ್ಯಕ್ಷರಾಗಿ ನೇಮಕ ಮಾಡಿತ್ತು. ತನಗೆ ದೊರೆತ ಅವಕಾಶವನ್ನು ಸದುಪಯೋಗಪಡಿಸಿಕೊಂಡ ಧ್ರುವನಾರಾಯಣ್, ಬೆಂಗಳೂರಿನಲ್ಲಿ ಕಾಂಗ್ರೆಸ್ ಸಂಘಟನೆಗೆ ಅಪಾರವಾಗಿ ಶ್ರಮಿಸಿದ್ದರು. ಅವರ ಸಂಘಟನಾ ಶಕ್ತಿಯನ್ನು ಮನಗಂಡ ಕಾಂಗ್ರೆಸ್ ಮುಖಂಡರು 1986ರಲ್ಲಿ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಅವರನ್ನು ನೇಮಕ ಮಾಡಿ ತುಮಕೂರು ಜಿಲ್ಲೆಯ ಉಸ್ತುವಾರಿಯನ್ನೂ ನೀಡಿದ್ದರು. ತಾನು ವ್ಯಾಸಂಗ ಮಾಡಿದ್ದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಸದಸ್ಯರಾಗಿ ಧ್ರುವನಾರಾಯಣ್, 1994 ರಿಂದ 97ರವರೆಗೆ ಕಾರ್ಯ ನಿರ್ವಹಿಸಿದ್ದರು. 1993ರಲ್ಲಿ ಮಾಜಿ ಸಚಿವ ಬಿ.ಬಸವಲಿಂಗಪ್ಪನವರು ನಿಧನರಾದಾಗ ನಡೆದ ಯಲಹಂಕ ಉಪ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್‌ಗಾಗಿ ಧ್ರುವನಾರಾಯಣ್ ಪ್ರಯತ್ನಿಸಿದ್ದರಾದರೂ, ಅವರಿಗೆ ಟಿಕೆಟ್ ದೊರೆಯಲಿಲ್ಲ. ಆ ಚುನಾವಣೆಯಲ್ಲಿ ಬಸವಲಿಂಗಪ್ಪ ಅವರ ಪುತ್ರ ಪ್ರಸನ್ನ ಕುಮಾರ್ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು.





ರಾಜಶೇಖರಮೂರ್ತಿ

ಹಿರಿಯ ರಾಜಕೀಯ ಮುತ್ಸದ್ಧಿ ರಾಜಶೇಖರಮೂರ್ತಿಯವರ ವಿಶ್ವಾಸ ಗಳಿಸಿದ್ದ ಧ್ರುವನಾರಾಯಣ್, ಅವರ ಕಟ್ಟಾ ಬೆಂಬಲಿಗನಾಗಿ ರಾಜಕಾರಣದಲ್ಲಿ ತೊಡಗಿಸಿಕೊಂಡಿದ್ದರು. ಹಳೇ ಮೈಸೂರು ಭಾಗದಲ್ಲಿ ರಾಜಶೇಖರಮೂರ್ತಿ ಮತ್ತು ಶ್ರೀನಿವಾಸಪ್ರಸಾದ್ ನಡುವೆ ರಾಜಕೀಯ ಜಿದ್ದಾಜಿದ್ದಿ ಏರ್ಪಟ್ಟ ವೇಳೆ 1996ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರದಿಂದ ಕಾಂಗ್ರೆಸ್ ಟಿಕೆಟ್ ಪಡೆಯಲು ಧ್ರುವ ಪ್ರಯತ್ನಿಸಿ ವಿಫಲರಾಗಿದ್ದರು. ರಾಜಶೇಖರಮೂರ್ತಿಯವರ ಸಲಹೆಯಂತೆ ತವರು ಜಿಲ್ಲೆಯಾದ ಚಾಮರಾಜನಗರವನ್ನೇ ತನ್ನ ರಾಜಕೀಯ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಸಂಘಟನೆಯಲ್ಲಿ ತೊಡಗಿದರು.

ಈ ನಡುವೆ ಅವರ ರಾಜಕೀಯ ಗುರುಗಳಾದ ರಾಜಶೇಖರಮೂರ್ತಿ ಬಿಜೆಪಿ ಸೇರ್ಪಡೆಯಾದಾಗ ಧ್ರುವನಾರಾಯಣ್ ಕೂಡ ತಮ್ಮ ಗುರುಗಳನ್ನು ಹಿಂಬಾಲಿಸಿದರು. ಆಗ ರಾಜ್ಯಸಭಾ ಸದಸ್ಯರಾಗಿದ್ದ ರಾಜಶೇಖರಮೂರ್ತಿ ತಮ್ಮ ಶಿಷ್ಯ ಧ್ರುವನಾರಾಯಣ್ ಅವರನ್ನು ಕಾವೇರಿ ಗ್ರಾಮೀಣ ಬ್ಯಾಂಕ್‌ನ ನಿರ್ದೇಶಕರನ್ನಾಗಿ ಮಾಡುವ ಮೂಲಕ ಜನಸೇವೆಗೆ ಅನುವು ಮಾಡಿಕೊಟ್ಟಿದ್ದರು. 1997ರಿಂದ 2002ರವರೆಗೆ ಕಾವೇರಿ ಗ್ರಾಮೀಣ ಬ್ಯಾಂಕ್ ನಿರ್ದೇಶಕರಾಗಿದ್ದ ಧ್ರುವ, ಗ್ರಾಮೀಣ ಪ್ರದೇಶದ ಹಲವಾರು ರೈತರಿಗೆ ಹಾಗೂ ಹಿಂದುಳಿದ ವರ್ಗದವರಿಗೆ ಬ್ಯಾಂಕಿಂಗ್ ಸೇವೆ ದೊರೆಯುವಂತೆ ಮಾಡುವ ಮೂಲಕ ಚಾಮರಾಜನಗರ ಜಿಲ್ಲೆಯಲ್ಲಿ ಅದರಲ್ಲೂ ಸಂತೇಮರಹಳ್ಳಿ ಕ್ಷೇತ್ರದಲ್ಲಿ ಉದಯೋನ್ಮುಖ ನಾಯಕನಾಗಿ ಹೊರ ಹೊಮ್ಮಿದ್ದರು.

ಚಾಮರಾಜನಗರ ಜಿಲ್ಲೆಯಲ್ಲೇ ಬಿಜೆಪಿ ಅಷ್ಟೇನೂ ಪ್ರಾಬಲ್ಯವಿಲ್ಲದಿದ್ದಾಗ 1999ರಲ್ಲಿ ನಡೆದ ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದ ಧ್ರುವನಾರಾಯಣ್, ಮಾಜಿ ರಾಜ್ಯಪಾಲ ಬಿ.ರಾಚಯ್ಯನವರ ಪುತ್ರ ಹಾಗೂ ಆಗ ಅಲ್ಲಿ ಹಾಲಿ ಶಾಸಕರಾಗಿದ್ದು, ಜೆಡಿಯು ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಎ.ಆರ್.ಕೃಷ್ಣಮೂರ್ತಿ ವಿರುದ್ಧ ಕೇವಲ 5 ಸಾವಿರ ಮತಗಳ ಅಂತರದಲ್ಲಿ ಪರಾಭವಗೊಂಡಿದ್ದರು. ಕಾಂಗ್ರೆಸ್ ಮತ್ತು ಜನತಾ ಪರಿವಾರದ ಭದ್ರಕೋಟೆಯಾಗಿದ್ದ ಚಾಮರಾಜನಗರ ಜಿಲ್ಲೆಯಲ್ಲಿ ಬಿಜೆಪಿ ಅಭ್ಯರ್ಥಿ ಕೇವಲ 5 ಸಾವಿರ ಮತಗಳ ಅಂತರದಲ್ಲಿ ಪರಾಭವಗೊಂಡು 2ನೇ ಸ್ಥಾನ ಪಡೆದಿದ್ದು, ಅಂದು ತೀವ್ರ ಕುತೂಹಲ ಕೆರಳಿಸಿತ್ತು. ಚಾಮರಾಜನಗರ ಮತ್ತು ಸಂತೇಮರಹಳ್ಳಿ ಕ್ಷೇತ್ರಗಳಲ್ಲಿ ಧ್ರುವನಾರಾಯಣ್ ಎಂಬ ಹೊಸ ರಾಜಕೀಯ ನಾಯಕ ತಲೆ ಎತ್ತಿದಂತಾಗಿತ್ತು. ಮೊದಲ ಚುನಾವಣೆಯಲ್ಲೇ ಸೋಲನನುಭವಿಸಿದರೂ, ಕಿಂಚಿತ್ತೂ ಧೃತಿಗೆಡದ ಧ್ರುವನಾರಾಯಣ್, ತಮ್ಮ ರಾಜಕೀಯ ಗುರು ರಾಜಶೇಖರ ಮೂರ್ತಿಯವರಿಂದ ಸಂಸದರ ನಿಧಿ ಮಂಜೂರು ಮಾಡಿಸಿಕೊಂಡು ಸಂತೇಮ ರಹಳ್ಳಿ ಕ್ಷೇತ್ರದ ಹಲವಾರು ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರು. ಜೊತೆಗೆ ಕಾವೇರಿ ಗ್ರಾಮೀಣ ಬ್ಯಾಂಕ್ ಮೂಲಕವೂ ಸಾರ್ವಜನಿಕರ ಸೇವೆಗೆ ಟೊಂಕಕಟ್ಟಿ ನಿಂತಿದ್ದರು. ಜನಪ್ರತಿನಿಧಿಯಾಗದೆಯೇ ಜನಸೇವೆಯಲ್ಲಿ ತೊಡಗಿದ್ದ ಧ್ರುವನಾರಾಯಣ್ ಬಗ್ಗೆ ಜಿಲ್ಲೆಯಲ್ಲಿ ಮೆಚ್ಚುಗೆಯ ಮಾತುಗಳು ಕೇಳಿ ಬಂದವು.

ಬದಲಾದ ರಾಜಕಾರಣದಲ್ಲಿ ರಾಜಶೇಖರಮೂರ್ತಿಯವರು ಜೆಡಿಎಸ್ ಸೇರ್ಪಡೆಗೊಂಡಾಗ ಧ್ರುವನಾರಾಯಣ್ ತನ್ನ ಮಾತೃ ಪಕ್ಷವಾದ ಕಾಂಗ್ರೆಸ್‌ಗೆ ಸೇರಿದರು. ಅದಾಗಲೇ ಜನ ಮನ್ನಣೆ ಪಡೆದಿದ್ದ ಅವರಿಗೆ 2004ರ ವಿಧಾನಸಭೆ ಚುನಾವಣೆಯಲ್ಲಿ ಸಂತೇಮರಹಳ್ಳಿ ಟಿಕೆಟ್ ದೊರೆಯುವುದು ಕಷ್ಟವೇನಾಗಿರಲಿಲ್ಲ. ಆ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಎ.ಆರ್.ಕೃಷ್ಣಮೂರ್ತಿ 40,751 ಮತ ಪಡೆದರೆ, ಧ್ರುವನಾರಾಯಣ್, 40,752 ಮತ ಪಡೆದು ಒಂದೇ ಒಂದು ಮತದ ಅಂತರದಲ್ಲಿ ಗೆಲುವು ಸಾಧಿಸುವ ಮೂಲಕ ಇಡೀ ದೇಶದ ಗಮನ ಸೆಳೆದು ಪ್ರಪ್ರಥಮವಾಗಿ ವಿಧಾನಸಭೆ ಪ್ರವೇಶಿಸಿದರು.

ಆದರೆ ಅವರ ರಾಜಕೀಯ ಗುರು ರಾಜಶೇಖರಮೂರ್ತಿ ಜೆಡಿಎಸ್‌ನಲ್ಲಿದ್ದುದರಿಂದ ಧ್ರುವನಾರಾಯಣ್ ಅವರಿಗೆ ಗಾಡ್ ಫಾದರ್ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಜೆಡಿಎಸ್ ಸೇರಿದ್ದರೂ ರಾಜಕೀಯವಾಗಿ ತಟಸ್ಥರಾಗಿದ್ದ ಹಿರಿಯ ರಾಜಕೀಯ ಮುತ್ಸದ್ಧಿ ವಿ.ಶ್ರೀನಿವಾಸಪ್ರಸಾದ್ ಚಾಮುಂಡೇಶ್ವರಿ ಉಪ ಚುನಾವಣೆ ವೇಳೆ ಕಾಂಗ್ರೆಸ್ ಸೇರ್ಪಡೆಗೊಂಡಿದ್ದು, ಧ್ರುವನಾರಾಯಣ್ ಅವರಿಗೆ ಆನೆಬಲ ಬಂದಂತಾಗಿದ್ದು, ಅವರ ಮಾರ್ಗದರ್ಶನದಲ್ಲಿ ರಾಜಕಾರಣ ಮುಂದುವರೆಸಿದ್ದರು. 2008ರ ವೇಳೆಗೆ ಕ್ಷೇತ್ರ ಪುನರ್ವಿಂಗಡಣೆಯಾಗಿ ಸಂತೇಮರಹಳ್ಳಿ ಕ್ಷೇತ್ರ ಇಲ್ಲದಾದಾಗ ಕೊಳ್ಳೇಗಾಲ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳು ಪ್ರಬಲರಾಗಿದ್ದರೂ ಕೂಡ ಶ್ರೀನಿವಾಸ ಪ್ರಸಾದ್ ಅವರು ಧ್ರುವನಾರಾಯಣ್ ಅವರಿಗೆ ಟಿಕೆಟ್ ಕೊಡಿಸುವಲ್ಲಿ ಯಶಸ್ವಿಯಾದರು. ಆ ಚುನಾವಣೆಯಲ್ಲೂ ಧ್ರುವ ಜಯಭೇರಿ ಬಾರಿಸಿ, ಎರಡನೇ ಬಾರಿಗೆ ವಿಧಾನಸಭೆ ಪ್ರವೇಶಿಸಿದರು.

2009ರಲ್ಲಿ ಲೋಕಸಭಾ ಚುನಾವಣೆ ನಡೆದಾಗ ಬಿಜೆಪಿಯಿಂದ ಎ.ಆರ್.ಕೃಷ್ಣಮೂರ್ತಿ ಅಭ್ಯರ್ಥಿಯಾಗಿ ಘೋಷಣೆಯಾದ ವೇಳೆ ಕಾಂಗ್ರೆಸ್‌ನಲ್ಲಿ ಪ್ರಬಲ ಅಭ್ಯರ್ಥಿಯ ಕೊರತೆ ಎದುರಾದ ವೇಳೆ ಶ್ರೀನಿವಾಸ ಪ್ರಸಾದ್ ಅವರು ಕೊಳ್ಳೇಗಾಲ ಶಾಸಕರಾಗಿದ್ದ ಧ್ರುವನಾರಾಯಣ್ ಅವರನ್ನೇ ಕಣಕ್ಕಿಳಿಸಲು ನಿರ್ಧರಿಸಿ, ಅಂದು ಎಐಸಿಸಿ ಅಧ್ಯಕ್ಷರಾಗಿದ್ದ ಸೋನಿಯಾ ಗಾಂಧಿ ಅವರ ಮನವೊಲಿಸಿ ಧ್ರುವ ಅವರನ್ನು ಕಣಕ್ಕಿಳಿಸಿದ್ದರು. ಆ ಚುನಾವಣೆಯಲ್ಲಿ ಅಲ್ಪಮತಗಳ ಅಂತರದಿಂದ ಗೆಲುವು ಸಾಧಿಸಿದ ಧ್ರುವ ಲೋಕಸಭೆ ಪ್ರವೇಶಿಸುವ ಮೂಲಕ ರಾಷ್ಟ್ರ ರಾಜಕಾರಣಕ್ಕೆ ಕಾಲಿಟ್ಟಿದ್ದರು. 2014ರಲ್ಲಿ ನಡೆದ ಚುನಾವಣೆಯಲ್ಲೂ ಗೆಲುವು ಸಾಧಿಸಿ ಲೋಕಸಭೆ ಪ್ರವೇಶಿಸಿದ ಧ್ರುವ, ಆ ಸಂದರ್ಭದಲ್ಲಿ ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದರೂ ಕೂಡ ಹೆಚ್ಚಿನ ಅನುದಾನವನ್ನು ಚಾಮರಾಜನಗರ ಕ್ಷೇತ್ರಕ್ಕೆ ತಂದು ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೂಲಕ ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಯ ಹರಿಕಾರ ಎಂದೆನಿಸಿಕೊಂಡರು.



ವಿ.ಶ್ರೀನಿವಾಸ ಪ್ರಸಾದ್

ಬದಲಾದ ರಾಜಕಾರಣದಲ್ಲಿ ಶ್ರೀನಿವಾಸ ಪ್ರಸಾದ್ ಬಿಜೆಪಿ ಸೇರ್ಪಡೆಯಾದಾಗ ನಡೆದ ನಂಜನಗೂಡು ಉಪ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ ಸತತ ಸೋಲನನುಭವಿಸುತ್ತಿದ್ದ ತಮ್ಮ ಸಂಬಂಧಿಕರಾದ ಕಳಲೆ ಕೇಶವಮೂರ್ತಿ ಅವರನ್ನು ಕಾಂಗ್ರೆಸ್‌ಗೆ ಕರೆತಂದು ಕಣಕ್ಕಿಳಿಸುವ ಮೂಲಕ ತನ್ನ ರಾಜಕೀಯ ಮಾರ್ಗದರ್ಶಿ ಶ್ರೀನಿವಾಸಪ್ರಸಾದ್ ವಿರುದ್ಧವೇ ತೊಡೆ ತಟ್ಟಿ ಕಳಲೆ ಕೇಶವಮೂರ್ತಿ ಗೆಲುವಿಗೆ ಕಾರಣರಾದರು.

2019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಧ್ರುವನಾರಾಯಣ್ ವಿರುದ್ಧ ಸ್ಪರ್ಧಿಸಲು ಬಿಜೆಪಿಯಿಂದ ಸಮರ್ಥ ಅಭ್ಯರ್ಥಿಯೇ ಇಲ್ಲ ಎಂಬಂತಹ ವಾತಾವರಣ ನಿರ್ಮಾಣವಾದಾಗ ಚುನಾವಣಾ ರಾಜಕಾರಣದಿಂದ ನಿವೃತ್ತಿ ಘೋಷಿಸಿದ್ದ ಶ್ರೀನಿವಾಸಪ್ರಸಾದ್ ಅವರನ್ನೇ ಮನವೊಲಿಸಿ ಬಿಜೆಪಿ ಕಣಕ್ಕಿಳಿಸಿತ್ತು. ಈ ಚುನಾವಣೆಯಲ್ಲಿ ಧ್ರುವನಾರಾಯಣ್ ಕೇವಲ 1817 ಮತಗಳ ಅಂತರದಲ್ಲಿ ಪರಾಭವಗೊಳ್ಳುವ ಮೂಲಕ ಇಡೀ ರಾಜ್ಯದಲ್ಲಿ ಅತ್ಯಲ್ಪ ಮತಗಳ ಅಂತರದಲ್ಲಿ ಸೋಲನನುಭವಿಸಿದ ಅಭ್ಯರ್ಥಿ ಎಂದೆನಿಸಿಕೊಂಡರು.

ಚುನಾವಣೆಯಲ್ಲಿ ಸೋತರೂ ಕೂಡ ಕಿಂಚಿತ್ತೂ ಧೃತಿಗೆಡದ ಧ್ರುವ, ಫಲಿತಾಂಶ ಬಂದ ನಾಲ್ಕೈದು ದಿನದಲ್ಲೇ ಕ್ಷೇತ್ರಾದ್ಯಂತ ಸಂಚರಿಸಿ ಮತದಾರರಿಗೆ ಕೃತಜ್ಞತೆ ಸಲ್ಲಿಸುವ ಮೂಲಕ ಕ್ರಿಯಾಶೀಲರಾದರು. ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾದ ನಂತರ ಧ್ರುವನಾರಾಯಣ್ ಅವರನ್ನು ಕೆಪಿಸಿಸಿ ಕಾರ್ಯಾಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು. ಈ ವೇಳೆ ಇಡೀ ರಾಜ್ಯ ಸಂಚರಿಸಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದ ಧ್ರುವ ರಾಜ್ಯ ರಾಜಕಾರಣಕ್ಕೆ ನಂಜನಗೂಡು ಕ್ಷೇತ್ರದ ಮೂಲಕ ಬರಲು ಒಲವು ತೋರಿ ಚುನಾವಣಾ ಸಿದ್ಧತೆಗಳಲ್ಲಿ ತೊಡಗಿಸಿಕೊಂಡಿದ್ದಾಗಲೇ ಕಾಲನ ಕರೆಗೆ ಓಗೊಟ್ಟಿದ್ದಾರೆ.



ವಾರಭವಿಷ್ಯ

12.03.2023 ರಿಂದ 18.03.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಕರ, ಕುಂಭ, ಚಂದ್ರ-ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಜ-ವೃಷಭ, ಬುಧ-ಮಕರ, ಗುರು-ಮೀನ, ಶುಕ್ರ-ಕುಂಭ, ಮೀನ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆರಂಭಕ್ಕೆ ಚಂದ್ರ ಬಲದಿಂದ ಗ್ರಹಮಾನ ಚೆನ್ನಾಗಿದೆ. ಕಾರ್ಯಸಿದ್ಧಿಯಿಂದ ಮನೋಬಲ ಹೆಚ್ಚುವುದು. ಹೆಂಗಳೆಯರ ಮನಸ್ಸು ಗೆಲ್ಲುವಿರಿ. ನೌಕರಿ ಹಾಗೂ ವ್ಯವಸಾಯ ಕ್ಷೇತ್ರದಲ್ಲಿ ಇಚ್ಛೆಯ ಪ್ರಕಾರ ಪ್ರಗತಿ ಹೊಂದಲು ಶನಿಗ್ರಹದ ಕೃಪೆಯೂ ಇದೆ. ಪ್ರಾಮಾಣಿಕವಾಗಿ ಮಾಡಿದ ಕಾರ್ಯಗಳಲ್ಲಿ ಯಶಸ್ಸು ದೊರಕುವುದು. ಅನುಭವಿ ವರಿಷ್ಠರ ಅನುಗ್ರಹ ದೊರೆಯುವುದು. ರಾಹು-ಕೇತುಗಳಿಂದ ಕೆಲವು ಅಪ್ರಿಯ ಘಟನೆಗಳು ಸಂಭವಿಸಬಹುದು. ಶ್ರೀ ಗಣಪತಿ ಪ್ರಾರ್ಥನೆ. ಶುಭ ಸಂಖ್ಯೆ-5.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದ ಆದಿಗೆ ನಿಮ್ಮ ರಾಶಿಗೆ ಆಗುವ ಚಂದ್ರ ಪ್ರವೇಶದಿಂದ ಮೈ ಮನಗಳಲ್ಲಿ ಹೊಸ ಉತ್ಸಾಹದ ಸಂಚಲನ. ಆಪ್ತಮಿತ್ರರ ಭೇಟಿ, ಕುಟುಂಬದಲ್ಲಿ ಒಗ್ಗಟ್ಟೇ 'ಒಬ್ಬಟ್ಟು'. ಆದರಣೀಯರ ಸಂಪರ್ಕದಿಂದ ಹರ್ಷಚಿತ್ತರಾಗಿರುತ್ತೀರಿ. ಮನೆಗೆ ವೈಭವದ ವಸ್ತುಗಳ ಖರೀದಿ. ಈ ನಡುವೆ ಯಾವುದೇ ನಿರ್ಧಾರಗಳನ್ನು ಜಾಗರೂಕತೆಯಿಂದ ತೀರ್ಮಾನಿಸಿ. ಪಾಲುದಾರಿಕೆ ವ್ಯವಹಾರಗಳಲ್ಲಿ ಒಮ್ಮತ ಕಾಣದೆ ಧನ ನಷ್ಟ. ಶ್ರೀ ಮನೆದೇವರ ದರ್ಶನ. ಶುಭ ಸಂಖ್ಯೆ-3.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಶುಭ ಗುರುವಿನ ಪರಿಣಾಮ ಹಣಕಾಸಿನ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡು ಬರುವುದು. ವೃತ್ತಿ ಜೀವನದಲ್ಲಿ ನೂತನ ಬೆಳವಣಿಗೆಗಳಿಂದ ಹೊಸ ಹುರುಪು ಉಂಟಾಗುವುದು. ಇದು ನಿಮ್ಮ ವೈಯಕ್ತಿಕ ಜೀವನದ ಮೇಲೆ ಪರಿಣಾಮ ಬೀರಲಿದೆ. ವಾರ ಮಧ್ಯೆ ಎದುರಾಗುವ ವಿಷಮ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವಿರಿ. ನಿಮ್ಮ ರಾಶಿಯಲ್ಲೇ ಇರುವ ಕುಜ ದುಡುಕಿನ ನಿರ್ಧಾರಗಳಿಗೆ ಪ್ರೇರೇಪಿಸುವನು. ಶ್ರೀದೇವೀ ದರ್ಶನ. ಶುಭ ಸಂಖ್ಯೆ-6.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ವಿತ್ತಲಾಭ, ಸುಖ-ಸಂತೋಷ, ಉತ್ತಮ ಭೋಜನ, ಶಯನ ಸುಖಾದಿಗಳನ್ನು ಅನುಭವಿಸುವಿರಿ. ಮನಸ್ಸು ಪ್ರಫುಲ್ಲವಾಗಿರುತ್ತದೆ. ಯತ್ನ ಕಾರ್ಯಗಳಲ್ಲಿ ಪ್ರತಿಸ್ಪರ್ಧಿಗಳು ಹಿಂದೆ ಸರಿಯುವರು. ಅಧ್ಯಾತ್ಮ ವಿಷಯಗಳಲ್ಲಿ ಆಸಕ್ತಿ ಉಂಟಾಗುತ್ತದೆ. ಧರ್ಮಗುರುಗಳ ಭೇಟಿಯಿಂದ ಮಾರ್ಗದರ್ಶನ ದೊರೆಯುತ್ತದೆ. ದುಷ್ಟ ಜನರ ಸಹವಾಸದಿಂದ ದೂರವಿರಿ. ಅನ್ಯಥಾ ತೊಂದರೆಗೆ ಗುರಿಯಾಗುವಿರಿ. ಕೀಲು ನೋವು, ಸ್ನಾಯು ನೋವು ಕಾಡಬಹುದು. ಶ್ರೀ ಗಜವದನ ವಂದನೆ, ಶುಭ ಸಂಖ್ಯೆ-2.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದಾರಂಭಕ್ಕೆ ಉದ್ಯೋಗ ನಿಮಿತ್ತ ಪ್ರಯಾಣಗಳು ಸಂಭವಿಸಬಹುದು. ಆದಾಯ ವೆಚ್ಚಗಳನ್ನು ಸರಿದೂಗಿಸಲು ಹೆಣಗಾಡುವಿರಿ. ಕೆಲಸ ಕಾರ್ಯಗಳು ನಿರೀಕ್ಷಿತ ಫಲ ನೀಡುತ್ತಿಲ್ಲ. ಕೆಲವರ ಒಳ ಪಿತೂರಿಗಳು ನಿಮ್ಮನ್ನು ಕಾಡಲಿದೆ. ನಿರಾಶರಾಗುವ ಅಗತ್ಯವಿಲ್ಲ. ವಾರದ ಕಡೆಗೆ ಚಂದ್ರಗ್ರಹದ ಶುಭ ಸಂಚಾರದಿಂದ ಹಿತೈಷಿಗಳ ಸಹಕಾರ, ಸಮಯಕ್ಕೆ ಸರಿಯಾಗಿ ಹಣ ಒದಗುವಂತಹ ಶುಭ ಫಲಗಳನ್ನು ಕಾಣುವಿರಿ. ಶ್ರೀಸತ್ಯನಾರಾಯಣ ಉಪಾಸನೆ. ಶುಭ ಸಂಖ್ಯೆ-8.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಅಲಂಕಾರ ವಸ್ತು ಹಾಗೂ ಕಾಸ್ಮೆಟಿಕ್ಸ್ ವ್ಯಾಪಾರಿಗಳಿಗೆ ಭರಾಟೆಯ ವ್ಯಾಪಾರದಿಂದ ಧನಲಾಭ. ಆದಾಯಕ್ಕೆ ತಕ್ಕಂತೆ ಖರ್ಚುಗಳೂ ಎದುರಾಗಲಿದೆ. ದುಡುಕಿನ ನಿರ್ಧಾರಗಳಿಂದ ನಂತರ ಪಶ್ಚಾತ್ತಾಪ ಪಡುವಿರಿ. ಮನೆಯಲ್ಲಿ ಸಾಮರಸ್ಯದ ಕೊರತೆಯಿಂದ ಮನಃಶಾಂತಿಯ ಕೊರತೆ ಉಂಟಾಗುತ್ತದೆ. ಹೆಚ್ಚಿನ ಗ್ರಹಗಳು ನಿಮ್ಮ ಸಹಾಯಕ್ಕಿಲ್ಲದ ಕಾರಣ ಮದ್ಯ ಜೂಜುಗಳಿಂದ ದೂರವಿದ್ದರೆ ಕ್ಷೇಮ. ನಿಮಗೀಗ ಅನುಭವಿಗಳ ಮಾರ್ಗದರ್ಶನ ಬೇಕಿದೆ. ಶ್ರೀ ದತ್ತಗುರು ದರ್ಶನ. ಶುಭ ಸಂಖ್ಯೆ-7.

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)

ಈ ವಾರದಲ್ಲಿ ಶುಭ ಸ್ಥಾನ ಸ್ಥಿತ ಗ್ರಹಗಳ ಪರಿಣಾಮ ಲಾಭದಾಯಕ ಪರಿಣಾಮಗಳನ್ನು ಕಾಣಲಿರುವಿರಿ. ವಿವೇಕಿಗಳಾದ ನೀವು ಬಂದ ಅವಕಾಶಗಳನ್ನು ಕೈಜಾರದಂತೆ ನೋಡಿಕೊಳ್ಳಿ. ಸಾಹಿತ್ಯ-ಕಲಾ ಕ್ಷೇತ್ರದಲ್ಲಿರುವವರಿಗೆ ಪ್ರಶಸ್ತಿ, ಪುರಸ್ಕಾರಗಳು ಲಭಿಸಲಿದೆ. ಕೆಲವರಿಗೆ ಹನಿಮೂನ್‌ಗೆ ತೆರಳುವ ಯೋಗ, ಹಲವರಿಗೆ ಪುತ್ರ ಸಂತಾನದ ಸಂತಸ. ವಿದ್ಯಾರ್ಥಿಗಳಿಗೆ ಸಾಧನೆಗೆ ತಕ್ಕ ಪ್ರತಿಫಲ ದೊರೆಯುವುದು. ವಾರಾಂತ್ಯಕ್ಕೆ ಮನೆ ಮಂದಿಯೊಂದಿಗೆ ಪಿಕ್‌ನಿಕ್. ಶ್ರೀ ಲಕ್ಷ್ಮೀಅಷ್ಟಕ ಪಠಿಸಿ. ಶುಭ ಸಂಖ್ಯೆ-1.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಇದು ಸಮ್ಮಿಶ್ರ ಫಲಗಳ ವಾರ. ಕುಟುಂಬದಲ್ಲಿ ಸಡಗರದ ಸಂಚಲನ. ಒದಗಿ ಬಂದ ಅವಕಾಶಗಳು ಕೈ ಜಾರದಂತೆ ನೋಡಿಕೊಳ್ಳಿ. ವಿದ್ಯಾರ್ಥಿಗಳಿಗೆ ಏಕಾಗ್ರತೆಯ ಕೊರತೆಯಿಂದ ನಿರೀಕ್ಷಿತ ಫಲ ದೊರೆಯದು. ಕೃಷಿಕರಿಗೂ ಅಲ್ಪ ಫಲವೆ. ಕುಟುಂಬ ಸಮಸ್ಯೆಗಳು ಎದುರಾದಾಗ ಶ್ರೀಮತಿಯ ಮಾತಿಗೆ ಮಾನ್ಯತೆ ನೀಡಿ ಒಳಿತಾಗುತ್ತದೆ. ನಿಮ್ಮ ಆರೋಗ್ಯದ ಬಗ್ಗೆ ನಿಗಾವಹಿಸಿ ಹಾಗೂ ನಿಮಗೆ ವಿಶ್ರಾಂತಿಯ ಅಗತ್ಯವಿದೆ. ಶ್ರೀ ಕುಲದೇವತಾ ದರ್ಶನ. ಶುಭ ಸಂಖ್ಯೆ-5.

ಸಿಂಹ (ಮ.ಮಿ.ಮು.ಮೆ.ಮೊ.ಟ.ಟಿ.ಟು.ಟೆ)

ನಿಮ್ಮ ವೃತ್ತಿ ಸ್ಥಳದಲ್ಲಿ ಅತಿಯಾದ ಕಾರ್ಯಭಾರ ಹಾಗೂ ಒತ್ತಡವಿರುತ್ತದೆ. ಚತುರರಾದ ನೀವು ಎಲ್ಲವನ್ನೂ ಸ್ಫೂರ್ತಿಯಿಂದ ನಿಭಾಯಿಸುವಿರಿ. ಧನ-ಧಾನ್ಯ-ಲಾಭ, ಸುಭೋಜನ, ಶಯನ ಸುಖಗಳನ್ನು ಅನುಭವಿಸುವಿರಿ. ಕೆಲವೊಮ್ಮೆ ಶತ್ರುಗಳ ಕೈ ಮೇಲೆನಿಸುವುದು. ಋಣಭಾರ ತೀರದೆ ಮನಸ್ಸಿಗೆ ಕಳವಳವೆನಿಸುವುದು. ನಿಮ್ಮ ಹಾಗೂ ನಿಮ್ಮ ಮಾತೃಶ್ರೀಯವರ ಆರೋಗ್ಯದ ಕಡೆ ಎಚ್ಚರವಹಿಸಿ. ಶ್ರೀ ಮಾರುತಿ ದರ್ಶನ. ಶುಭ ಸಂಖ್ಯೆ-4.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಶರೀರ ಸೌಖ್ಯ, ಧನ-ಧಾನ್ಯ ವೃದ್ಧಿ. ಅಧಿಕಾರಿ ವರ್ಗದವರ ಭೇಟಿಯಿಂದ ಕಾರ್ಯಸಾಧನೆ. ವಸ್ತ್ರ ಆಭರಣ ವ್ಯಾಪಾರಿಗಳಿಗೆ ಹೇರಳ ಲಾಭವಾಗುವುದು. ಮನೆಯಲ್ಲಿ ಮಂಗಳ ಕಾರ್ಯಕ್ಕೆ ನಾಂದಿ. ವಿದ್ಯಾ ಕ್ಷೇತ್ರದಲ್ಲಿರುವವರಿಗೆ, ಸಂಶೋಧಕರಿಗೆ ಸುಸಮಯ, ನಿಮ್ಮ ಪರಿಶ್ರಮಕ್ಕೆ ತಕ್ಕ ಫಲವನ್ನು ನಿರೀಕ್ಷಿಸಬಹುದು. ವೈಯಕ್ತಿಕ ಕಾರ್ಯಕಲಾಪಗಳಲ್ಲಿ ಸಜ್ಜನರ ಸಹಕಾರ ದೊರಕುವುದು. ಗ್ಯಾಸ್ ಟ್ರಬಲ್ ಕಾಡುತ್ತದೆ. ಶ್ರೀ ಶನಿಸ್ತುತಿ. ಶುಭ ಸಂಖ್ಯೆ-4.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಆರ್ಥಿಕ ಪರಿಸ್ಥಿತಿಯಲ್ಲಿ ಗಣನೀಯ ಪ್ರಗತಿಯನ್ನು ಕಾಣುವಿರಿ. ಆಪ್ತಮಿತ್ರರ ಮಿಲನದಿಂದ ಮನೆಯಲ್ಲಿ ಹರ್ಷದಾಯಕ ವಾತಾವರಣ. ಹಳೆಯ ಕಾಯಿಲೆಯಿಂದ ಬಿಡುಗಡೆ ಹಾಗೂ ಆರೋಗ್ಯದಲ್ಲಿ ಸುಧಾರಣೆ. ಗೃಹ, ನಿವೇಶನ ಖರೀದಿಗೆ ಸಾಲಕ್ಕಾಗಿ ಪ್ರಯತ್ನಿಸಿದಲ್ಲಿ ಯಶಸ್ವಿಯಾಗುವಿರಿ. ಧಾರ್ಮಿಕ ಕಾರ್ಯಗಳಲ್ಲಿ ಭಾಗಿತ್ವ ಹಾಗೂ ಗುರುಜನರ ಭೇಟಿ. ವಾರದ ಕಡೆಗೆ ಆಕಸ್ಮಿಕ ಘಟನೆಯಿಂದ ವಿಚಲಿತರಾಗುವಿರಿ. ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-9.

ಮೀನ (ದಿ.ದು.ಖ.ಝ.ಥ.ದೆ.ದೊ.ಚ.ಚಿ)

ಹಣಕಾಸಿನ ಆದಾಯವಿದ್ದರೂ, ಅದು ನಿರುಪಯುಕ್ತ ವಿಷಯಗಳಿಗೆ ಹರಿದು ಹೋಗುತ್ತದೆ. ಅತಿಯಾದ ಕೆಲಸದ ಒತ್ತಡದಿಂದ ಮಾನಸಿಕವಾಗಿ ಹಾಗೂ ಶಾರೀರಿಕವಾಗಿ ಬಳಲುವಿರಿ. ಗುರುಜನರ ಸಂಪರ್ಕ ಮಾಡಿ. ಮಾರ್ಗದರ್ಶನ ಚಿತ್ತ ಹಗುರವಾದೀತು. ಅಷ್ಟಮ ಕೇತುವಿನ ಕಾರಣ ಅಪರಿಚಿತರಿಂದ ಮೋಸ ಹೋಗುವ ಸಾಧ್ಯತೆ ಇರುತ್ತದೆ. ಆಹಾರ ಪಾನೀಯಗಳಲ್ಲಿ ಸಂಯಮವಿರಲಿ. ಅಜೀರ್ಣ ಬಾಧೆ ಕಾಡುವುದು. ಶ್ರೀ ನವಗ್ರಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-8.

ಮೈಸೂರು ಮಿತ್ರ ಭಾನುವಾರ 12 ಮಾರ್ಚ್ 2023

ನಂಜನಗೂಡಲ್ಲಿ ಧ್ರುವನಾರಾಯಣ್‌ಗೆ ಕಂಬನಿಯ ವಿದಾಯ





ನಂಜನಗೂಡು, ಮಾ.11– ಲಕ್ಷಾಂತರ ಅಭಿಮಾನಿಗಳು, ಕಾರ್ಯಕರ್ತರ ಅಶ್ರುತರ್ಪಣ, ಕಂಬನಿಯ ನಡುವೆ ಆರ್.ಧ್ರುವನಾರಾಯಣ್ ಪಾರ್ಥಿವ ಶರೀರದ ಮೆರವಣಿಗೆ ನಂಜನಗೂಡಿನ ಪ್ರಮುಖ ಬೀದಿಗಳಲ್ಲಿ ಸಾಗಿತು.

ನಗರದ ಡಿ.ದೇವರಾಜ ಅರಸು ಸೇತುವೆ ಬಳಿ, ಅಪೋಲೋ ವೃತ್ತ, ಹುಲ್ಲಹಳ್ಳಿ ವೃತ್ತಗಳಲ್ಲಿ ಜನಸಾಗರವೇ ಜಮಾಯಿಸಿತ್ತು. ನಗರದ ರಾಷ್ಟ್ರಪತಿ ರಸ್ತೆಯ ಮೂಲಕ ಸಾಗಿದ ಮೆರವಣಿಗೆ ಶ್ರೀಕಂಠೇಶ್ವರ ದೇವಾಲಯದ ಮೂಲಕ ಚಾಮರಾಜನಗರ ಕಡೆಗೆ ಸಾಗಿತು. ದಾರಿಯುದ್ದಕ್ಕೂ ರಸ್ತೆಯ ಇಕ್ಕೆಲಗಳಲ್ಲಿ ನೆರೆದಿದ್ದ ಸಾರ್ವಜನಿಕರು ತಮ್ಮ ನೆಚ್ಚಿನ ನಾಯಕನಿಗೆ ಕಂಬನಿಯ ವಿದಾಯ ಹೇಳಿದರು. ಪಕ್ಷಾತೀತವಾಗಿ ಎಲ್ಲಾ ವರ್ಗ, ಸಮುದಾಯದ ಜನರೊಂದಿಗೆ ಒಡನಾಟ ಹೊಂದಿದ್ದರಿಂದಾಗಿ ಬಿಜೆಪಿಯ ಪ್ರಮುಖ ನಾಯಕರು ಧ್ರುವನಾರಾಯಣ್ ಅಂತಿಮ ದರ್ಶನ ಪಡೆದರು.

ನಗರದ ರಾಷ್ಟ್ರಪತಿ ರಸ್ತೆಯ 4ನೇ ತಿರುವಿನ ಬಳಿಯಿರುವ ಕಾಂಗ್ರೆಸ್ ಕಚೇರಿ ಬಳಿ ಪಾರ್ಥಿವ ಶರೀರ ಆಗಮಿಸುತ್ತಿದ್ದಂತೆ ಕಾರ್ಯಕರ್ತರ ದುಃಖದ ಕೋಡಿ ಒಡೆದು ಆಕ್ರಂದನ ಮುಗಿಲು ಮುಟ್ಟಿತ್ತು. ಅವರ ಅಭಿಮಾನಿಗಳು ಅವರ ಭಾವಚಿತ್ರ ಪ್ರದರ್ಶನ ಮಾಡಿ ಜೈಕಾರ ಕೂಗಿದರು. ಅಲ್ಲದೇ ತಮ್ಮ ನೆಚ್ಚಿನ ನಾಯಕನನ್ನು ಕೊನೆ ಬಾರಿ ಕಣ್ತುಂಬಿಕೊಂಡು ಆತ್ಮೀಯವಾಗಿ ಬೀಳ್ಕೊಟ್ಟರು.

ನಂಜನಗೂಡು ಟಿಕೆಟ್ ಆಕಾಂಕ್ಷಿಯಾಗಿ, ಕ್ಷೇತ್ರದ ಕಾರ್ಯಕರ್ತರ ಜೊತೆಗೆ ಹೆಚ್ಚಿನ ಒಡನಾಟ ಹೊಂದಿದ್ದರಿಂದ ಅಭಿಮಾನಿಗಳು ದಿನನಿತ್ಯ ಹಾರ ತುರಾಯಿ ಪಟಾಕಿಗಳಿಂದ ತಮ್ಮ ನೆಚ್ಚಿನ ನಾಯಕನನ್ನು ಸ್ವಾಗತಿಸುತ್ತಿದ್ದರು. ಇಂದು ಆಂಬುಲೆನ್ಸ್‌ನಲ್ಲಿ ತಮ್ಮ ನೆಚ್ಚಿನ ನಾಯಕನ ಪಾರ್ಥಿವ ಶರೀರವನ್ನು ಕಂಡು ನಮ್ಮ ಸ್ಥಿತಿ ದಿಕ್ಕು ಕಾಣದ ನಾವೆಯಂತಾಗಿದೆ. ಎದ್ದು ಬನ್ನಿ ಅಣ್ಣ ಎಂಬ ಕೂಗು ಮುಗಿಲು ಮುಟ್ಟಿತ್ತು. ನಂಜನಗೂಡು ಬ್ಲಾಕ್ ಕಾಂಗ್ರೆಸ್ ವತಿಯಿಂದ ಪುಷ್ಪಗುಚ್ಛ ಹಾಕಿ ಅಂತಿಮ ನಮನ ಸಲ್ಲಿಸಲಾಯಿತು.

ಇದೇ ವೇಳೆ ಮಾಜಿ ಸಚಿವ ಯು.ಟಿ. ಖಾದರ್, ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ ಅಂತಿಮ ದರ್ಶನ ಪಡೆದರು. ಪಾರ್ಥಿವ ಶರೀರವನ್ನು ಹೊತ್ತ ಆಂಬುಲೆನ್ಸ್‌ನಲ್ಲಿ ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಅನಿಲ್ ಚಿಕ್ಕಮಾದು, ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್, ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಶ್ರೀಕಂಠನಾಯಕ, ಸಿ.ಎಂ. ಶಂಕರ್, ಕಾಂಗ್ರೆಸ್ ಉಸ್ತುವಾರಿ ಹಿರೇಹಳ್ಳಿ ಸೋಮೇಶ್ ಸಾಗಿದರೆ. ಲಕ್ಷಾಂತರ ಅಭಿಮಾನಿಗಳು ಅಂತಿಮ ದರ್ಶನ ಪಡೆದರು. ಮುನ್ನೆಚ್ಚರಿಕೆ ಕ್ರಮವಾಗಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು. ಆದರೆ ಸೇರಿದ ಭಾರೀ ಜನಸ್ತೋಮ ನಿಯಂತ್ರಿಸಲು ಪೊಲೀಸರು ಹರಸಾಹಸ ಪಟ್ಟರು.

ಬನ್ನಿಕುಪ್ಪೆ ಗ್ರಾಪಂಗೆ ಶಿವಮ್ಮ ಅಧ್ಯಕ್ಷೆ



ಹುಣಸೂರು, ಮಾ.11– ತಾಲೂಕಿನ ಬನ್ನಿಕುಪ್ಪೆ ಗ್ರಾಪಂ ಅಧ್ಯಕ್ಷೆಯಾಗಿ ಶಿವಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತೋಟಗಾರಿಕೆ ಸಹಾಯಕ ಹಿರಿಯ ನಿರ್ದೇಶಕಿ ನೇತ್ರಾವತಿ ತಿಳಿಸಿದ್ದಾರೆ.

ಈ ವೇಳೆ ಎಪಿಎಂಸಿ ಮಾಜಿ ಸದಸ್ಯ ಗೋವಿಂದೇಗೌಡ, ಮುಖಂಡರಾದ ಆಸ್ವಾಳ್ ಕೆಂಪೇಗೌಡ, ಶ್ರೀಧರ್, ರಂಜಿತಾ ಚಿಕ್ಕಮಾದು, ತಾಪಂ ಮಾಜಿ ಸದಸ್ಯ ಕೆಂಗಯ್ಯ, ಜಗದೀಶ್, ವಿಜಯ್ ಕುಮಾರ್ ಹಾಗೂ ಇನ್ನಿತರರಿದ್ದರು.

ಮುಖಂಡ ಕೆಂಪೇಗೌಡ ಮಾತನಾಡಿ, ತಾಲೂಕಿನಲ್ಲಿ ಜೆಡಿಎಸ್ ಬಲಿಷ್ಠವಾಗಿದೆ. ಯುವನಾಯಕ ಜಿ.ಡಿ.ಹರೀಶ್‌ಗೌಡರ ನಾಯಕತ್ವ ಮೆಚ್ಚಿ ಸಾವಿರಾರು ಯುವಕರು ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದಾರೆ ಎಂದರು.

ರಂಜಿತಾ ಚಿಕ್ಕಮಾದು ಮಾತನಾಡಿ, ತಾಲೂಕಿನ 41 ಗ್ರಾಪಂಗಳಲ್ಲೂ ಹರೀಶ್ ಗೌಡರನ್ನು ಮುಂದಿನ ಶಾಸಕರನ್ನಾಗಿ ಆಯ್ಕೆ ಮಾಡಲು ಜನತೆ ಪಣತೊಟ್ಟಿರುವುದು ಶುಭ ಸಂಕೇತವಾಗಿದೆ. ನಾವೆಲ್ಲರೂ ಮುಂಬರುವ ಚುನಾವಣೆಯಲ್ಲಿ ಅವರನ್ನು ಭಾರೀ ಅಂತರದಲ್ಲಿ ಗೆಲ್ಲಿಸುವ ಮೂಲಕ ವಿಧಾನಸಭೆಗೆ ಕಳುಹಿಸಿಕೊಡೋಣ ಎಂದರು.

ಈ ವೇಳೆ ಜೆಡಿಎಸ್ ನಗರಾಧ್ಯಕ್ಷ ಹೆಚ್.ಎಂ.ಫಜಲುಲ್ಲಾ ಸೇರಿದಂತೆ ಇತರರಿದ್ದರು.

ಧ್ರುವನಾರಾಯಣ್ ಹಠಾತ್ ಸಾವು ದುರದೃಷ್ಟಕರ: ವಿಷಾದ



ತಿ.ನರಸೀಪುರ, ಮಾ.11– ಕ್ಷೇತ್ರದ ಅಭಿವೃದ್ಧಿಯಲ್ಲಿ ದೇಶದಲ್ಲೇ ನಂಬರ್ ಒನ್ ಸ್ಥಾನ ಪಡೆದಿದ್ದ ಪ್ರಾಮಾಣಿಕ ರಾಜಕಾರಣಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಹಠಾತ್ ಸಾವು ದುರದೃಷ್ಟಕರ ಎಂದು ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್ ವಿಷಾದಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಧ್ರುವನಾರಾಯಣ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಶಾಸಕ, ಸಂಸದರಾಗಿ ಭ್ರಷ್ಟಾಚಾರ ರಹಿತವಾಗಿ ಅಭಿವೃದ್ಧಿ ಕಾರ್ಯ ಮಾಡುವ ಮೂಲಕ ದೇಶದಲ್ಲೇ ಅತ್ಯುತ್ತಮ ರಾಜಕಾರಣಿ ಎಂದು ಹೆಸರು ಪಡೆದಿದ್ದ ಹಾಗೂ ಅನುದಾನ ಬಳಕೆಯಲ್ಲೂ ನಂ.1 ಸ್ಥಾನ ಪಡೆದು ಇತರ ಸಂಸದರಿಗೆ ಮಾದರಿಯಾಗಿದ್ದರು. ಅವರ ದಿಢೀರ್ ಸಾವು ನಾಡಿನ ಜನತೆಗೆ ನೋವುಂಟು ಮಾಡಿದೆ ಎಂದರು.

ಚಾಮರಾಜನಗರ ಮೀಸಲು ಕ್ಷೇತ್ರದಲ್ಲಿ ಅವರು ಮಾಡದ ಯಾವುದೇ ಅಭಿವೃದ್ಧಿ ಕಾರ್ಯಗಳಿಲ್ಲ. ಪ್ರತಿಯೊಂದು ವರ್ಗ, ಧರ್ಮದವರನ್ನು ಸಮಾನವಾಗಿ ಕಂಡ ಮಹಾನ್ ಮಾನವತಾವಾದಿಯಾಗಿದ್ದರು. ರಾಜಕಾರಣ ಎಂದರೆ ಹಣ ಆಸ್ತಿ ಮಾಡಲೆಂದೇ ಬರುವ ಪ್ರಸಕ್ತ ದಿನಗಳಲ್ಲಿ ಧ್ರುವನಾರಾಯಣ್ ಭಿನ್ನರಾಗಿದ್ದರು. ಯಾವುದೇ ಕಪ್ಪು ಚುಕ್ಕೆ ಇಲ್ಲದ ಜನಪ್ರಿಯ ರಾಜಕಾರಣಿಯನ್ನು ಇಂದು ನಾವು ಕಳೆದುಕೊಂಡಿದ್ದೇವೆ. ಆದರೆ ಅವರು ಮಾಡಿರುವ ಅಭಿವೃದ್ಧಿ ಕಾರ್ಯಗಳಲ್ಲಿ ಎಂದೆಂದಿಗೂ ಜೀವಂತವಾಗಿರುತ್ತಾರೆ. 10 ವರ್ಷ ಸಂಸದರಾಗಿ 100 ವರ್ಷಗಳಿಗಾಗುವಷ್ಟು ಅಭಿವೃದ್ಧಿ ಕಾರ್ಯ ಮಾಡಿರುವ ಧ್ರುವನಾರಾಯಣ್ ರಂತಹ ಕ್ರಿಯಾಶೀಲ ರಾಜಕಾರಣಿ ಅಗಲಿಕೆ ತುಂಬಲಾರದ ನಷ್ಟ ದೇವರು ಅವರ ಕುಟುಂಬಕ್ಕೆ ಅವರ ಅಗಲಿಕೆ ಸಹಿಸುವ ಶಕ್ತಿ ಕರುಣಿಸಲಿ ಎಂದು ಪ್ರಾರ್ಥಿಸಿದರು.

ಈ ವೇಳೆ ಕೆಂಪಯ್ಯನಹುಂಡಿ ರಾಜು, ಕನ್ನಾಯಕನಹಳ್ಳಿ ಮರಿಸ್ವಾಮಿ, ನೆರಗ್ಯಾತನಹಳ್ಳಿ ಮನೋಜ್, ನಿಲಸೋಗೆ ಕುಮಾರ್, ಚೌಹಳ್ಳಿ ಪರಶುರಾಮ್, ಜಯಣ್ಣ, ಕೇಶವಮೂರ್ತಿ, ಸೋಸಲೆ ಶಿವು, ಪ್ರಭಾಕರ್, ಮಾದಿಗಹಳ್ಳಿ ಮಹೇಶ್, ಉಮೇಶ್, ಮಂಚಯ್ಯ, ಸಿದ್ದರಾಜು, ಗವಿಸಿದ್ದಯ್ಯ, ಕೊಳತ್ತೂರು ಮಹದೇವ, ಗೋವಿಂದ ಮತ್ತಿತರರಿದ್ದರು.

ಜೈ ಜವಾನ್ ಜೈ ಕಿಸಾನ್ ಪ್ರಶಸ್ತಿಗೆ ಆಯ್ಕೆ



ಹುಣಸೂರು, ಮಾ.11– ಯುವಬಲ ಜಾಗೃತಿ ಪರಿಷತ್, ಯುವಬಲ ಸಬಲೀಕರಣ ಸಂಸ್ಥೆಯಿಂದ ಕೊಡಮಾಡುವ "ಜೈ ಜವಾನ್ ಜೈ ಕಿಸಾನ್" ಪ್ರಶಸ್ತಿಗೆ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಆಯ್ಕೆಯಾಗಿದ್ದಾರೆ ಎಂದು ಸಂಸ್ಥೆ ಅಧ್ಯಕ್ಷ ಪ್ರಾಚಿಗೌಡ ತಿಳಿಸಿದ್ದಾರೆ.

ನಮ್ಮ ಸಂಸ್ಥೆಯಿಂದ ಹಲವು ಕಾರ್ಯಕ್ರಮ ನಡೆಸುತ್ತಿದ್ದು, ಕೃಷಿ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ ರೈತರು ಹಾಗೂ ಸೇನೆಯಲ್ಲಿ ಉತ್ತಮ ಸೇವೆ ಸಲ್ಲಿಸಿರುವ ಯೋಧರಿಗೆ ಜೈ ಜವಾನ್ ಜೈ ಕಿಸಾನ್ ಪ್ರಶಸ್ತಿ ಪ್ರದಾನ ಮಾಡುತ್ತಿದ್ದು, ಕೃಷಿ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿರುವುದನ್ನು ಮನಗಂಡು ಈ ಪ್ರಶಸ್ತಿಗೆ ಹೊಸೂರು ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ. ಮಾ.15 ರಂದು ಬೆಂಗಳೂರಿನ ಪುರಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡುವರು. ಅತಿಥಿಗಳಾಗಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್, ಕ್ರೀಡಾ ಮತ್ತು ಯುವ ಸಬಲೀಕರಣ ಸಚಿವ ಕೆ.ಸಿ.ನಾರಾಯಣಗೌಡ ಭಾಗವಹಿಸುವರು ಎಂದು ತಿಳಿಸಿದ್ದಾರೆ.

ಕೋಟೆ, ಸರಗೂರು ಅಭಿವೃದ್ಧಿಗೆ ಕಾಳಜಿ ವಹಿಸಿದ್ದ ಧ್ರುವನಾರಾಯಣ್



ಹೆಚ್.ಡಿ.ಕೋಟೆ, ಮಾ.11– ಕೋಟೆ ಹಾಗೂ ಸರಗೂರು ತಾಲೂಕಿನ ಅಭಿವೃದ್ಧಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ವಿಶೇಷ ಕಾಳಜಿ ವಹಿಸಿದ್ದರು ಎಂದು ವರ್ತಕರ ಸಂಘದ ಅಧ್ಯಕ್ಷ ವಿನಯ್ ಭಜರಂಗಿ ತಿಳಿಸಿದರು.

ಪಟ್ಟಣದ ಬಾಪೂಜಿ ಸರ್ಕಲ್‌ನಲ್ಲಿ ತಾಲೂಕಿನ ಸಂಘ–ಸಂಸ್ಥೆಗಳು, ಆಟೋ ಚಾಲಕರು, ವಿವಿಧ ಪಕ್ಷಗಳ ಮುಖಂಡರು ಹಾಗೂ ಅಭಿಮಾನಿಗಳಿಂದ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಧ್ರುವನಾರಾಯಣ್ ಅವರು 2009 ಮತ್ತು 2014ರಲ್ಲಿ ಚಾಮರಾಜನಗರ ಸಂಸದರಾಗಿದ್ದ ವೇಳೆ ತಾಲೂಕಿನಲ್ಲಿ ಹಲವು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದರು. ಅದರಲ್ಲೂ ಎಸ್‌ಸಿ, ಎಸ್ಟಿ ಕಾಲೋನಿಗಳಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ನಿರ್ಮಾಣ ಮಾಡಿದ್ದರು. ತಾಲೂಕಿನ ಬಸವನಗಿರಿ ಹಾಡಿಯಲ್ಲಿ 13 ಕೋಟಿ ವೆಚ್ಚದಲ್ಲಿ ಏಕಲವ್ಯ ವಸತಿ ಶಾಲೆ ಸ್ಥಾಪನೆ, ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸ್ಥಾಪಿಸಿದರು. ಅಲ್ಲದೇ ಸಿದ್ದರಾಮಯ್ಯ ಸಿಎಂ ಆಗಿದ್ದಾಗ ಕೋಟೆ ಪುರಸಭೆಯಾಗಿ ಮೇಲ್ದರ್ಜೆಗೇರಲು, ಹೆಬ್ಬಾಳ ಗ್ರಾಮದಲ್ಲಿ ರೈತರ ಅನುಕೂಲಕ್ಕಾಗಿ 2ನೇ ಹಂತದ ತಂಬಾಕು ಹರಾಜು ಮಾರುಕಟ್ಟೆ ಪ್ರಾರಂಭಿಸಲು ಶ್ರಮಿಸಿದ್ದರು. 2013ರಲ್ಲಿ ಶಾಸಕರಾಗಿ ಆಯ್ಕೆಯಾದ ಚಿಕ್ಕಮಾದು ಅವರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಧ್ರುವನಾರಾಯಣ್ ಅಭಿವೃದ್ಧಿ ಕಾರ್ಯಗಳಲ್ಲಿ ಭಾಗಿಯಾಗಿದ್ದರು. 2018ರ ಚುನಾವಣೆಯಲ್ಲಿ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಮಾಜಿ ಶಾಸಕ ದಿ.ಚಿಕ್ಕಮಾದು ಅವರ ಪುತ್ರ ಅನಿಲ್ ಚಿಕ್ಕಮಾದು ಅವರನ್ನು ಕಾಂಗ್ರೆಸ್‌ಗೆ ಕರೆ ತಂದು ಶಾಸಕರನ್ನಾಗಿ ಮಾಡಲು ಶ್ರಮಿಸಿದರು. 2019ರ ಲೋಕಸಭಾ ಚುನಾವಣೆಯಲ್ಲಿ ಪರಾಭವಗೊಂಡರೂ ತಾಲೂಕಿನ ಜನತೆಯ ನಿಕಟ ಸಂಪರ್ಕದಲ್ಲಿದ್ದ ಧ್ರುವನಾರಾಯಣ್ ಜನತೆಯ ಪ್ರೀತಿಗೆ ಪಾತ್ರರಾಗಿದ್ದರು ಎಂದರು.

ಇಂದು ಬೆಳಗ್ಗೆ ಧ್ರುವನಾರಾಯಣ್ ಅವರು ಸಾವನ್ನಪ್ಪಿದ ಸುದ್ದಿ ತಿಳಿದ ಹೆಚ್.ಡಿ.ಕೋಟೆ, ಹ್ಯಾಂಡ್ ಪೋಸ್ಟ್, ಅಂತರಸಂತೆ, ಸರಗೂರು ಪಟ್ಟಣದ ವರ್ತಕರು ಸ್ವಯಂಪ್ರೇರಿತರಾಗಿ ಅಂಗಡಿ ಮುಗ್ಗಟ್ಟು ಮುಚ್ಚಿ ಗೌರವ ಸೂಚಿಸಿದರು.

ವಿದ್ಯೋದಯ ವೃತ್ತದಲ್ಲಿ ಧ್ರುವಗೆ ಶ್ರದ್ಧಾಂಜಲಿ



ತಿ.ನರಸೀಪುರ, ಮಾ.11– ಇಂದು ಬೆಳಗ್ಗೆ ನಿಧನರಾದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಅವರಿಗೆ ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ವಿವಿಧ ಸಂಘಟನೆಗಳ ಮುಖ್ಯಸ್ಥರು ಶ್ರದ್ಧಾಂಜಲಿ ಸಲ್ಲಿಸಿದರು.

ಕಾಲೇಜು ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು ಧ್ರುವನಾರಾಯಣ್ ನಿಧನಕ್ಕೆ ಕಂಬನಿ ಮಿಡಿದು, ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಮೊಂಬತ್ತಿ ಹಚ್ಚಿ ಗೌರವ ಸಲ್ಲಿಸಿದರು. ಈ ವೇಳೆ ಕಾಂಗ್ರೆಸ್ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್, ದಸಂಸ ಆಲಗೂಡು ಶಿವಕುಮಾರ್, ಪುರಸಭಾ ಸದಸ್ಯರಾದ ಬಾದಾಮಿ ಮಂಜು, ಕೆ.ಗಣೇಶ್, ಚೌಹಳ್ಳಿ ಮಲ್ಲೇಶ್, ಎಂ.ಕೆ. ಸಹದೇವ, ಕೆಂಪಯ್ಯನಹುಂಡಿ ಮಹದೇವಣ್ಣ, ರಮೇಶ್, ಪುಟ್ಟಸ್ವಾಮಿ, ಸ್ವಾಮಿ, ಉಮೇಶ್, ಮಣಿಕಂಠ, ಮಹದೇವಮ್ಮ, ಸಂದೇಶ್ ಮತ್ತಿತರರಿದ್ದರು.

ಧ್ರುವನಾರಾಯಣ್ ನಿಧನಕ್ಕೆ ಮಠಾಧೀಶರು, ಗಣ್ಯರ ಸಂತಾಪ



ಬೆಟ್ಟದಪುರ, ಮಾ.11– ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ನಿಧನಕ್ಕೆ ಮಠಾಧೀಶರು ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಮೃತರ ನಿಧನಕ್ಕೆ ಬೆಟ್ಟದಪುರ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ದಿಂಡಗಾಡು ಮಠದ ಶ್ರೀ ಅಪ್ಪಾಜಿ ಸ್ವಾಮೀಜಿ, ರಾವಂದೂರು ಮಠದ ಶ್ರೀಮೋಕ್ಷಪತಿ ಸ್ವಾಮೀಜಿ, ಸೂಳೆಕೋಟೆ ಗ್ರಾಮದ ಶ್ರೀಚನ್ನ ಬಸಪ್ಪ ಸ್ವಾಮೀಜಿ ಸಂತಾಪ ಸೂಚಿಸಿದ್ದು, ಸ್ನೇಹಜೀವಿ, ಜನಾನುರಾಗಿ ಧ್ರುವನಾರಾಯಣ್ ನಿಧನ ಅಪಾರ ನೋವುಂಟು ಮಾಡಿದೆ. ಅವರ ಆತ್ಮಕ್ಕೆ ದೇವರು ಶಾಂತಿ ಕರುಣಿಸಲಿ ಎಂದು ಪ್ರಾರ್ಥಿಸಿದರು.

ಶಾಸಕ ಕೆ.ಮಹದೇವ್, ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ಮಾಜಿ ಶಾಸಕ ಕೆ.ವೆಂಕಟೇಶ್, ಬಿಜೆಪಿ ಮುಖಂಡರಾದ ರಾಜೇಗೌಡ, ಸಮಾಜಸೇವಕ ಸುನೀಲ್ ಕುಮಾರ್, ಜಿಪಂ ಮಾಜಿ ಸದಸ್ಯ ಕೆ.ಎಸ್.ಮಂಜುನಾಥ್, ಜೆಡಿಎಸ್ ತಾಲೂಕು ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಜೆಡಿಎಸ್ ಮುಖಂಡ ಗಗನ್, ಕೌಲನಹಳ್ಳಿ ಸೋಮಶೇಖರ್, ಸಾಹಿತಿ ಜೋಗನಹಳ್ಳಿ ಗುರುಮೂರ್ತಿ, ನಿವೃತ್ತ ಶಿಕ್ಷಕ ಸಣ್ಣಸ್ವಾಮಿಗೌಡ, ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಶಿವಯೋಗಿ, ತಾಲೂಕು ಗ್ರಾಮೀಣ ಶಿಕ್ಷಕರ ಸಂಘದ ಅಧ್ಯಕ್ಷ ಮಹದೇವಪ್ಪ, ತಾಲೂಕು ದಲಿತ ಸಂಘದ ಮುಖಂಡ ಕುಮಾರ್, ರಾಜಣ್ಣ ಮೂರ್ತಿ, ದೇವರಾಜು, ಭೀಮ್ ಆರ್ಮಿ ತಾಲೂಕು ಅಧ್ಯಕ್ಷ ಗಿರೀಶ್, ಭೋವಿ ಸಮಾಜದ ಅಧ್ಯಕ್ಷ ರವಿ, ಆವರ್ತಿ ಗ್ರಾಪಂ ಅಧ್ಯಕ್ಷ ಶಿವು, ಸದಸ್ಯ ಶಿವಕುಮಾರ್, ಮಾಜಿ ತಾಪಂ ಸದಸ್ಯ ಅನಿತಾ ಸೇರಿದಂತೆ ವಿವಿಧ ಸಮಾಜದ ಗಣ್ಯರು ಹಾಗೂ ಇತರರು ಸಂತಾಪ ಸೂಚಿಸಿದ್ದಾರೆ.

ಮಹಿಳಾ ಗ್ರಾಮಲೆಕ್ಕಾಧಿಕಾರಿ ಆತ್ಮಹತ್ಯೆ



ಹುಣಸೂರು, ಮಾ.11– ನವವಿವಾಹಿತ ಮಹಿಳಾ ಗ್ರಾಮಲೆಕ್ಕಿಗರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶನಿವಾರ ಮಧ್ಯಾಹ್ನ ತಾಲೂಕಿನ ಬಿಳಿಕೆರೆಯಲ್ಲಿ ನಡೆದಿದೆ.

ತಾಲೂಕಿನ ಬಿಳಿಕೆರೆ ಹೋಬಳಿ ಶ್ಯಾನುಭೋಗನಹಳ್ಳಿ ವಲಯದ ಗ್ರಾಮಲೆಕ್ಕಾಧಿಕಾರಿ ಕೃಷ್ಣಾಬಾಯಿ ತುಕಾರಾಂ ಪಡ್ಕೆ(25) ಆತ್ಮಹತ್ಯೆ ಮಾಡಿಕೊಂಡವರು. ಈಕೆ ಮೂಲತಃ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಎಸ್‌ಗಳ್ಳಿ ಗ್ರಾಮದವರಾಗಿದ್ದು, ತಿಂಗಳ ಹಿಂದಷ್ಟೆ ಹನೂರಿನ ಅರಣ್ಯ ಇಲಾಖೆ ಫಾರೆಸ್ಟ್ ಗಾರ್ಡ್, ಬೆಳಗಾಂನ ಸುಭಾಸ್ ಬೋಸ್ಲೆ ಅವರನ್ನು ವಿವಾಹವಾಗಿದ್ದು, 4 ದಿನಗಳ ಹಿಂದಷ್ಟೇ ಕರ್ತವ್ಯಕ್ಕೆ ಹಾಜರಾಗಿದ್ದರು. ಕೃಷ್ಣಾಬಾಯಿ ಅವರು ಬಿಳಿಕೆರೆಯ ಎಸ್‌ಬಿಐ ಹಿಂಭಾಗದ ಬಾಡಿಗೆ ಮನೆಯಲ್ಲಿ ಸಹೋದ್ಯೋಗಿ ಗ್ರಾಮ ಲೆಕ್ಕಾಧಿಕಾರಿ ಚೈತ್ರ ಮತ್ತು ಅವರ ತಾಯಿಯೊಂದಿಗೆ ವಾಸವಿದ್ದರು.

ವಿವರ: ಶನಿವಾರ ಚೈತ್ರ ಮತ್ತವರ ತಾಯಿ ಮನೆಯಲ್ಲೇ ಇದ್ದರು. ಕೃಷ್ಣಾಬಾಯಿಯವರು ಬೆಳಗ್ಗೆಯಿಂದ ಯಾರೊಂದಿಗೋ ಮೊಬೈಲ್‌ನಲ್ಲಿ ಜೋರಾಗಿ ಮಾತನಾಡುತ್ತಿದ್ದರು. ನಂತರ ತಮ್ಮ ಕೊಠಡಿ ಚಿಲಕ ಹಾಕಿಕೊಂಡಿದ್ದರು. ಮಧ್ಯಾಹ್ನ ಚೈತ್ರಾ ಅವರು ಊಟಕ್ಕೆಂದು ಕೃಷ್ಣಾಬಾಯಿ ಅವರನ್ನು ಅನೇಕ ಬಾರಿ ಕೂಗಿದರೂ ಬಾಗಿಲು ತೆಗೆಯಲಿಲ್ಲ. ಏನೋ ಅನಾಹುತ ಆಗಿರಬೇಕೆಂದು ಅಕ್ಕಪಕ್ಕದವರ ನೆರವಿನಿಂದ ಬಾಗಿಲು ಒಡೆದು ನೋಡಲಾಗಿ ಕಿಟಕಿಯ ಸರಳಿಗೆ ಬಟ್ಟೆಯಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದರು. ತಕ್ಷಣ ಹಿರಿಯ ಅಧಿಕಾರಿಗಳು ಹಾಗೂ ಪೊಲೀಸರಿಗೆ ಮಾಹಿತಿ ನೀಡಿದ ಮೇರೆಗೆ ಸ್ಥಳಕ್ಕಾಗಮಿಸಿದ ಪೊಲೀಸರು ತಹಸೀಲ್ದಾರ್ ಡಾ.ಅಶೋಕ್ ಸಮ್ಮುಖದಲ್ಲಿ ಶವವನ್ನು ಆಸ್ಪತ್ರೆಗೆ ಸ್ಥಳಾಂತರಿಸಿದ್ದು, ಬಿಳಿಕೆರೆ ಠಾಣೆ ಇನ್ಸ್‌ಪೆಕ್ಟರ್ ಚಿಕ್ಕಸ್ವಾಮಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪತಿ ಸುಭಾಷ್ ಬೋಸ್ಲೆ ಹಾಗೂ ಅಥಣಿಯಲ್ಲಿರುವ ಕುಟುಂಬದವರಿಗೆ ಮಾಹಿತಿ ನೀಡಲಾಗಿದೆ. ಅವರು ಬಂದ ನಂತರವಷ್ಟೇ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬರಲಿದೆ ಎಂದು ತಹಸೀಲ್ದಾರ್ ಡಾ.ಅಶೋಕ್ ಹಾಗೂ ಪೊಲೀಸರು ತಿಳಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಬಿಳಿಕೆರೆ ನಾಡ ಕಚೇರಿ ಉಪತಹಸೀಲ್ದಾರ್ ಅರುಣ್ ಸಾಗರ್ ಹಾಗೂ ಸಹೋದ್ಯೋಗಿಗಳು ಭೇಟಿ ಇತ್ತು ಕಂಬನಿ ಮಿಡಿದರು.

ಹಿಂದುಳಿದ, ದಲಿತ, ಅಲ್ಪಸಂಖ್ಯಾತರು ಒಟ್ಟಾಗಿ ಧ್ವನಿ ಎತ್ತಿದರೆ ಮಾತ್ರ

ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಸಾಧ್ಯ

ಶ್ರೀ ಸರ್ವಜ್ಞ ಜಯಂತೋತ್ಸವದಲ್ಲಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ



ತಿ.ನರಸೀಪುರ, ಮಾ.11– ಹಿಂದುಳಿದ, ದಲಿತ, ಅಲ್ಪಸಂಖ್ಯಾತರು ಒಟ್ಟಾಗಿ ಧ್ವನಿ ಎತ್ತಿದರೆ ಮಾತ್ರ ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಸಾಧ್ಯ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ತಾಲೂಕಿನ ಕಿರಗಸೂರು ಗ್ರಾಮದಲ್ಲಿ ಶ್ರೀಕುಲಾಲ ಗುಂಡ ಬ್ರಹ್ಮಾರ್ಯ ಕುಂಬಾರ ಸಂಘ ತಾಲೂಕು ಶಾಖೆಯಿಂದ ಆಯೋಜಿಸಿದ್ದ ಶ್ರೀಸರ್ವಜ್ಞರ 503ನೇ ಜಯಂತೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಜಾತಿ ಹೆಸರಲ್ಲಿ ಸಮುದಾಯಗಳು ವಿಭಜನೆಗೊಂಡಲ್ಲಿ ಯಾವುದೇ ಸೌಲಭ್ಯ ಪಡೆಯಲು ಸಾಧ್ಯವಿಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿ ನಾವು ಮುಂಚೂಣಿಗೆ ಬರಲು ಒಗ್ಗಟ್ಟು ಅಗತ್ಯ. ಸಣ್ಣ–ಸಣ್ಣ ಸಮುದಾಯಗಳು ಒಂದಾಗಿ ದೊಡ್ಡ ಶಕ್ತಿಯಾಗಿ ರೂಪುಗೊಳ್ಳಬೇಕು. ಆ ನಿಟ್ಟಿನಲ್ಲಿ ಎಲ್ಲರೂ ಕಾರ್ಯೋನ್ಮುಖರಾಗುವಂತೆ ಸಲಹೆ ನೀಡಿದರು.

ಕುಂಬಾರ ಸಮುದಾಯ ಸೇರಿದಂತೆ ಎಲ್ಲಾ ಸಮುದಾಯಗಳು ಶಿಕ್ಷಣಕ್ಕೆ ಒತ್ತು ನೀಡಬೇಕು. ಶಿಕ್ಷಣದಿಂದ ಮಾತ್ರ ಸಮಾಜದ ಅಭ್ಯುದಯ ಸಾಧ್ಯ. ನಮ್ಮ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ತಲಾ 50 ಕೋಟಿ ಕೊಟ್ಟು, ಅನೇಕ ಅಭಿವೃದ್ಧಿ ನಿಗಮಗಳ ಮೂಲಕ ಸಹಕಾರ ನೀಡಲಾಯಿತು. ತಾಲೂಕು ಕೇಂದ್ರದಲ್ಲಿ ಕುಂಬಾರ ಸಮುದಾಯ ಭವನಕ್ಕೆ ನಿವೇಶನ ಕೇಳಿದ್ದು, ಚುನಾವಣೆ ನಂತರ ಮತ್ತೆ ಆಯ್ಕೆಯಾದಲ್ಲಿ ಖಂಡಿತ ನಿವೇಶನ ದೊರಕಿಸುವ ಭರವಸೆ ನೀಡಿದರು.

ಜಿಲ್ಲಾ ಕುಂಬಾರರ ಸಂಘದ ಅಧ್ಯಕ್ಷ ಎಚ್.ಎಸ್. ಪ್ರಕಾಶ್ ಮಾತನಾಡಿ, ಗ್ರಾಮ ಮಟ್ಟದಲ್ಲಿ, ತಾಲೂಕಿನಲ್ಲಿ ಸರ್ವಜ್ಞ ಜಯಂತಿ ಆಚರಿಸುತ್ತಿದ್ದೇವೆ. ಕುಂಬಾರ ಸಮುದಾಯವನ್ನು ರಾಜ್ಯದಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯಲಾಗುತ್ತದೆ. ಆದರೆ ನಾವೆಲ್ಲರೂ ಒಂದೇ. ಸಮಾಜದವರು ಒಗ್ಗೂಡದಿದ್ದರೆ ಸರ್ಕಾರದ ಸವಲತ್ತು ಪಡೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಈ ವೇಳೆ ಜಿಲ್ಲಾ ಶಾಲಿವಾಹನ ಸಹಕಾರ ಸಂಘದ ಅಧ್ಯಕ್ಷ ಕೆ.ಪಿ.ವೆಂಕಟೇಶ್, ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಕೆ.ಆರ್.ಷಣ್ಮುಖ ಸ್ವಾಮಿ, ಜಿಲ್ಲಾ ಕುಂಬಾರರ ಸಂಘದ ನಿರ್ದೇಶಕ ಚಂದ್ರು, ತಾಲೂಕು ಕುಂಬಾರ ಸಂಘದ ಗೌರವಾಧ್ಯಕ್ಷ ಎಂ.ರಾಜಣ್ಣ, ಅಧ್ಯಕ್ಷ ರಮೇಶ್, ಕಿರಗಸೂರು ಗ್ರಾಪಂ ಅಧ್ಯಕ್ಷೆ ಜ್ಯೋತಿ, ಉಪಾಧ್ಯಕ್ಷ ನಾಗರಾಜು, ಸದಸ್ಯರಾದ ಮಹದೇವಸ್ವಾಮಿ, ಸರೋಜಮ್ಮ, ಮುಖಂಡರಾದ ಮಹದೇವಪ್ಪ, ಚಿನ್ನಸ್ವಾಮಪ್ಪ, ಬಸವಣ್ಣಗೌಡ, ಲಿಂಗರಾಜು, ಅಮಾವಾಸ್ಯೆ ನಾಯಕ, ಗುರುಸ್ವಾಮಿಗೌಡ, ಪುಟ್ಟ ಸ್ವಾಮಾಚಾರ್, ಮಹದೇವ್ ಶೆಟ್ಟಿ, ಚಿನ್ನು, ಪುಟ್ಟರಾಜು, ಸೋಮಣ್ಣ, ರಾಜ ಶೆಟ್ಟಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮಹೇಶ್, ವೆಂಕು, ರಾಜಪ್ಪ, ರಾಜಣ್ಣ, ಕಾಂತರಾಜು, ಕೃಷ್ಣಗಾಂಧಿ ಮತ್ತಿತರರಿದ್ದರು.



ಹುಣಸೂರಿಗೆ ಆಗಮಿಸಿದ ಭಾರತೀಯ ಜನತಾ ಪಕ್ಷದ ಎಲ್‌ಇಡಿ ದೂರದರ್ಶನ ಪ್ರಗತಿಪರ ರಥಯಾತ್ರೆಯನ್ನು ಬಿಜೆಪಿ ನಗರಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಗ್ರಾಮಾಂತರ ಅಧ್ಯಕ್ಷ ನಾಗಣ್ಣಗೌಡ, ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯೋಗಾನಂದ ರೈತ ಮೋರ್ಚಾ ಅಧ್ಯಕ್ಷ ರಮೇಶ್, ಮಂಜಣ್ಣ ಕೋಶಾಧ್ಯಕ್ಷ ಮುದ್ದುರಾಮ, ಎಸ್‌ಸಿ ಮೋರ್ಚಾ ಅಧ್ಯಕ್ಷ ರವಿಕುಮಾರ್, ನಗರಸಭಾ ನಾಮ ನಿರ್ದೇಶನ ಸದಸ್ಯರಾದ ಅರುಣ್ ಚಾವಣ್, ಉಮೇಶ್, ಶ್ರೀನಿವಾಸ್, ರಮೇಶ್ ಅಶೋಕ್, ರಾಘವೇಂದ್ರ ಇತರರು ಸ್ವಾಗತಿಸಿದರು.



ಶನಿವಾರ ಬೆಳಗ್ಗೆ ನಿಧನರಾದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಮೈಸೂರು ತಾಲೂಕು ನಾಯಕ ಸಂಘದಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಮೈಸೂರು ತಾಲೂಕು ನಾಯಕ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಕುಮಾರಸ್ವಾಮಿ, ಉಪಾಧ್ಯಕ್ಷ ಜವರ ನಾಯಕ, ಖಜಾಂಚಿ ಮರಿಸ್ವಾಮಿ ನಾಯಕ್, ಪತ್ರಿಕಾ ಕಾರ್ಯದರ್ಶಿ ವಿನೋದ್, ಸಂಘಟನಾ ಕಾರ್ಯದರ್ಶಿ ಕೃಷ್ಣ, ನಿರ್ದೇಶಕರಾದ ಗಗನ್‌ನಾಯಕ, ಸುರೇಶ್ ನಾಯಕ್, ಹಿರಿಯ ಮುಖಂಡರಾದ ರೈಲ್ವೆ ಸಿದ್ದಯ್ಯ, ಶಿವನಂಜಯ್ಯ ಉಮೇಶ್ ಇತರರಿದ್ದರು.



ಐದನೇ ವರ್ಷದ ಪುಣ್ಯಸ್ಮರಣೆ




ಶ್ರೀಕಾಂತ್‌ಗೌಡ

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು :
ಪದ್ಮ–ಪುಟ್ಟೇಗೌಡ,
ಗೀತಾ–ಬಿ.ಎಸ್.ಕಿರಣ್,
ಪಿ.ಸವಿತಾ–ನಂದಕುಮಾರ್,
ಶ್ವೇತಾ–ಸತೀಶ್,
ಕುಟುಂಬವರ್ಗದವರು

ಹಸಿರು ನಮ್ಮ ಉಸಿರು

❀ ಶ್ರದ್ಧಾಂಜಲಿ ❀




ದಿವಂಗತ ಭಾಗ್ಯಶಿಲ್ಪಿ ಶ್ರೀ ಕೆ. ಎನ್. ಶಿವಲಿಂಗಯ್ಯನವರು
ಜನನ : 23–11–1924 ನಿಧನ : 12–03–1999

ಗೌರವ ಕಾರ್ಯದರ್ಶಿಗಳು	ಕಾರ್ಯನಿರ್ವಾಹಕ ಅಧ್ಯಕ್ಷರು
1963–1991	1991–1999

ನೀವು ನಮ್ಮನ್ನು ಅಗಲಿ ಇಂದಿಗೆ 24 ವರ್ಷಗಳಾದವು,
ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿದೆ.
ನೀವು ಹಾಕಿಕೊಟ್ಟ ಮಾರ್ಗವೇ ನಮಗೆ ದಾರಿದೀಪವಾಗಿದೆ
ನಿಮ್ಮ ಆಶೀರ್ವಾದವೇ ನಮ್ಮೆಲ್ಲರಿಗೂ ಶ್ರೀರಕ್ಷೆ

ಪ್ರಾಂಶುಪಾಲರು, ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿವೃಂದ,
ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು



ಕರ್ನಾಟಕ ಸರ್ಕಾರದ ವತಿಯಿಂದ ಪ್ರಥಮ ಬಾರಿಗೆ
ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮತ್ತು ಯುಗಮಾನೋತ್ಸವ 2023
ಉದ್ಘಾಟನೆ : ಮಾನ್ಯಶ್ರೀ ಎಸ್.ಟಿ. ಸೋಮಶೇಖರ್,
ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು
ಮುಖ್ಯ ಅತಿಥಿಗಳು : ಮೈಸೂರು ನಗರದ ಮಹಾಪೌರರು, ಉಪ–ಮಹಾಪೌರರು ಹಾಗೂ ಎಲ್ಲಾ ಜಿಲ್ಲೆಯ ಶಾಸಕರು ಮತ್ತು ಎಲ್ಲಾ ಮಂಡಳಿಯ ಅಧ್ಯಕ್ಷರುಗಳು
ಮುಖ್ಯ ಭಾಷಣಕಾರರು : ಡಾ. ಸಿ. ಶಿವಕುಮಾರಸ್ವಾಮಿ, ಬೆಂಗಳೂರು
ವಿಷಯ : ಶ್ರೀ ಜಗದ್ಗುರು ರೇಣುಕಾಚಾರ್ಯರ ಮೂಲ ಮತ್ತು ಇತಿಹಾಸ
12-3-23, ಸಂಜೆ 5.00 ಗಂಟೆಗೆ ಸ್ಥಳ : ಕಲಾಮಂದಿರ, ಮೈಸೂರು

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

